DGRV

german cooperation
DEUTSCHE ZUSAMMENARBEIT

Implemented by giz

SKILLGREEN GLOBAL

myrada 50 Years
BUILDING POOR PEOPLE'S INSTITUTIONS

# ಜಾಗೃತಿ

# 1

## ರೈತ ಉತ್ಪಾದಕ ಸಂಸ್ಥೆಗಳ ಪರಿಚಯ ಮತ್ತು ಉದ್ದೇಶ





**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**


ತೋಟಗಾರಿಕೆ ಇಲಾಖೆ – ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ

ಕರ್ನಾಟಕ ಸರ್ಕಾರ

ಸಹಯೋಗ

ಮಹಿಳಾ ಅಭಿವೃದ್ಧಿ ಸೊಸೈಟಿ [ಎಪಿಎಮ್‌ಎಎಸ್] – ಹೈದ್ರಾಬಾದ

# ಸಹಕಾರಿ ತತ್ವಗಳು



ಸ್ವಯಂಪ್ರೇರಿತ ಮತ್ತು ಮುಕ್ತ ಸದಸ್ಯತ್ವ
ಎಫ್.ಪಿ.ಓ
ಪ್ರಜಾಪ್ರಭುತ್ವ ಮತ್ತು ಸದಸ್ಯರ ನಿಯಂತ್ರಣ
ಜಿ.ಬಿ. ಸಭೆ
ಸದಸ್ಯರ ಆರ್ಥಿಕ ಭಾಗವಹಿಸುವಿಕೆ
ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ
ಎಫ್.ಪಿ.ಓ
ಶಿಕ್ಷಣ, ತರಬೇತಿ ಮತ್ತು ಮಾಹಿತಿ
ಸಹಕಾರಿ ಸಂಘಗಳೊಡನೆ ಸಹಕಾರ
ಸಹಕಾರಿ
ಸಮುದಾಯದ ಬಗ್ಗೆ ಕಾಳಜಿ
ಆರೋಗ್ಯ ಶಿಬಿರ

# ಜಾಗೃತಿ 1

# ರೈತ ಉತ್ಪಾದಕ ಸಂಸ್ಥೆಗಳ ಪರಿಚಯ ಮತ್ತು ಉದ್ದೇಶ

ಆಡಳಿತ ಮಂಡಳಿ ಸದಸ್ಯರಿಗೆ
ಕಲಿಕಾ ಕೈಪಿಡಿ



**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**

ತೋಟಗಾರಿಕೆ ಇಲಾಖೆ – ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ
ಕರ್ನಾಟಕ ಸರ್ಕಾರ
ಸಹಯೋಗ
ಮಹಿಳಾ ಅಭಿವೃದ್ಧಿ ಸೊಸೈಟಿ [ಎಪಿಎಮ್ಎಎಸ್] – ಹೈದ್ರಾಬಾದ

# ಜಾಗೃತಿ

# ರೈತ ಉತ್ಪಾದಕ ಸಂಸ್ಥೆಗಳ ಪರಿಚಯ ಮತ್ತು ಸಮರ್ಥನೆ

ಪ್ರಥಮ ಮುದ್ರಣ : 2020

ಪ್ರತಿಗಳು : 1000

ಬೆಲೆ : ರೂ.150.00

ಪ್ರಕಾಶಕರು : ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.
ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ ಆವರಣ,
ಜಿ.ಕೆ.ವಿ.ಕೆ. ಅಂಚೆ, ಬೆಂಗಳೂರು – 560 065.
ಮಿಂಚಂಚೆ : coefpo@gmail.com
ಜಾಲತಾಣ : www.coefpo.org
ದೂರವಾಣಿ : + 91 - 080 - 29721577

ಈ ತರಬೇತಿ ಮಾರ್ಗದರ್ಶಿಯನ್ನು ಮಹಿಳಾ ಅಭಿವೃದ್ಧಿ ಸೊಸೈಟಿ ಹಾಗೂ ಡಿ.ಜಿ.ಆರ್.ವಿ. ಜೆರ್ಮನಿ ಇವರಿಂದ ಮುದ್ರಿಸಲಾದ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಜೇಷನ್; ಇಂಟ್ರಡಕ್ಷನ್ ಆಂಡ್ ರ್‍ಯಾಶನೇಲ್– ಜಾಗೃತಿ ಎಂಬ ತರಬೇತಿ ಮಾರ್ಗದರ್ಶಿಯ ಇಂಗ್ಲೀಷ್ ಅವತರಣಿಕೆಯನ್ನು ಕನ್ನಡಕ್ಕೆ ಭಾಷಾಂತರಿಸಿ ಅಗತ್ಯತೆಗೆ ಅನುಸಾರವಾಗಿ ಮಾರ್ಪಾಡು ಮಾಡಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು ಇವರಿಂದ ಮುದ್ರಿಸಲಾಗಿದೆ.

ಸಂಕಲನ

ಡಾ.ಅಶೋಕ ಎಸ್. ಆಲೂರ, ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಡಾ.ಜಿ. ಬಸವರಾಜ್, ಉಪ ನಿರ್ದೇಶಕರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಶ್ರೀ. ಮಂಜುನಾಥ ಎಂ., ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಡಾ. ಇಟಗಿ ಪ್ರಭಾಕರ್, ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಡಾ.ಎಸ್. ಕುಮಾರ್. ಹಿರಿಯ ಫೆಲೊ, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಡಾ.ಶಶಿಭೂಷಣ ಅ. ಘಟ್ನಟ್ಟಿ, ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

ಡಾ.ಕೆ.ಜೆ.ಪರಮೇಶ್ವರಪ್ಪ, ಹಿರಿಯ ಸಲಹೆಗಾರರು, ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ, ಬೆಂಗಳೂರು.

# ಮುನ್ನುಡಿ

ಕೃಷಿ ಹಾಗೂ ತೋಟಗಾರಿಕೆ ಕ್ಷೇತ್ರಗಳು ದೇಶದ ಆರ್ಥಿಕತೆಯ ಪ್ರಮುಖ ಆಧಾರ ಸ್ಥಂಭಗಳಲ್ಲಿ ಒಂದಾಗಿದ್ದು, ಗ್ರಾಮೀಣ ಪ್ರದೇಶದ ಕೃಷಿ ಆಧಾರಿತ ಸಮುದಾಯಗಳಿಗೆ ಆದಾಯ, ಉದ್ಯೋಗ, ಆಹಾರ ಹಾಗೂ ಪೌಷ್ಠಿಕಾಂಶದ ಭದ್ರತೆಯ ಮೂಲವಾಗಿವೆ. ದೇಶದ ಜನಸಂಖ್ಯೆಯ ಮೂರನೇ ಎರಡರಷ್ಟು ಪ್ರಮಾಣದ ಜನಸಂಖ್ಯೆಯು ಪ್ರತ್ಯಕ್ಷವಾಗಿ ಮತ್ತು ಪರೋಕ್ಷವಾಗಿ ಕೃಷಿ ಮತ್ತು ಸಂಬಂಧಿತ ಚಟುವಟಿಕೆಗಳ ಮೇಲೆ ಅವಲಂಬಿತರಾಗಿದ್ದಾರೆ. ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ತಂತ್ರಜ್ಞಾನ ಮಾಹಿತಿ, ಬಂಡವಾಳ ಮತ್ತು ಮಾರುಕಟ್ಟೆಯ ಮಾಹಿತಿ ಹಾಗೂ ಸೌಲಭ್ಯಗಳ ಹಲವಾರು ಸವಾಲುಗಳನ್ನು ಎದುರುಸುತ್ತಿರುವುದು ಒಂದಡೆಯಾದರೇ ಮತ್ತೊಂದೆಡೆ, ಆಹಾರ ಸಂಸ್ಕರಣಾ ಘಟಕಗಳಿಗೆ ಕೃಷಿ ಅವಲಂಬಿತ ಕಚ್ಚಾ ವಸ್ತುಗಳನ್ನು ರೈತರಿಂದ ನೇರವಾಗಿ ಖರೀದಿಸಲು ಹೆಚ್ಚಿನ ವಹಿವಾಟು ವೆಚ್ಚದಿಂದಾಗಿ ನಷ್ಟವಾಗುತ್ತದೆ ಇದರಿಂದಾಗಿ ಆಹಾರ ಸರಬರಾಜು ಸರಪಳಿ ಅಸಮರ್ಥವಾಗುತ್ತದಲಿದೆ.ಈ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ರೈತ ಉತ್ಪಾದಕ ಸಂಸ್ಥೆಗಳ ರಚನೆ ಹಾಗೂ ಅಭಿವೃದ್ಧಿಯನ್ನು ಪ್ರೋತ್ಸಾಹಿಸುವ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿವೆ. ದೇಶದಲ್ಲಿ ಕಂಪನಿ ಕಾಯ್ದೆಗೆ ತಿದ್ದುಪಡಿ ತರುವ ಮೂಲಕ ರೈತ ಉತ್ಪಾದಕ ಸಂಸ್ಥೆಗಳನ್ನು ಈ ಕಾಯ್ದೆಯ ಅಡಿಯಲ್ಲಿ ನೋಂದಾಯಿಸುವ ಅವಕಾಶ ಕಲ್ಪಿಸಲಾಗಿದೆ. ಇದರಿಂದಾಗಿ ಕೃಷಿಯನ್ನು ಒಂದು ಉದ್ದಿಮೆ ರೂಪದಲ್ಲಿ ನೋಡುವಂತಹ ಚಿಂತನೆಗೆ ಚಾಲನೆ ನೀಡಿದಂತಾಗಿದೆ.ಈ ವರ್ಷದ ಕೇಂದ್ರ ಆಯವ್ಯಯದಲ್ಲಿ ಸುಮಾರು 10000 ರೈತ ಉತ್ಪಾದಕ ಸಂಸ್ಥೆಗಳನ್ನು ರಚಿಸಲು ಅವಶ್ಯಕ ತಂತ್ರವನ್ನು ರೂಪಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿಯೂ ಸಹ ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನ, ಅಭಿವೃದ್ಧಿ ಹಾಗೂ ಮೌಲ್ಯ ಸರಪಳಿಯಲ್ಲಿ ಅವುಗಳನ್ನು ವಿವಿಧ ಸಂಸ್ಥೆಗಳ ಜೊತೆಗೆ ಸಂಬಂಧ ಕಲ್ಪಿಸುವ ಮೂಲಕ ಅವುಗಳು ಸ್ವತಂತ್ರ ವ್ಯವಹಾರಿಕ ಸಂಸ್ಥೆಗಳಾಗಿ ಕಾರ್ಯನಿರ್ವಹಿಸುವ ನಿಟ್ಟಿನಲ್ಲಿ ಪೂರಕವಾಗುವಂತೆ ಕರ್ನಾಟಕ ರೈತ ಉತ್ಪಾದಕ ಸಂಸ್ಥೆಗಳ ನೀತಿ – 2018ನ್ನು ಜಾರಿಗೆ ತರಲಾಗಿದೆ. ರಾಜ್ಯದ ವಿವಿಧ ಅಭಿವೃದ್ಧಿ ಇಲಾಖೆಗಳು, ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆ ಹಾಗೂ ಅಭಿವೃದ್ಧಿಯ ಕಾರ್ಯಕ್ರಮವನ್ನು ಹಮ್ಮಿಕೊಂಡಿವೆ.

ಹೆಚ್ಚುತ್ತಿರುವ ರೈತ ಉತ್ಪಾದಕ ಸಂಸ್ಥೆಗಳ ಸಂಖ್ಯೆಗಳ ದೃಷ್ಟಿಯಿಂದ, ರೈತ ಉತ್ಪಾದಕ ಸಂಸ್ಥೆಗಳ ಸಾಮರ್ಥ್ಯವನ್ನು ಹೆಚ್ಚಿಸುವುದು ಅಗತ್ಯವಾಗಿರುತ್ತದೆ. ರೈತ ಉತ್ಪಾದಕ ಸಂಸ್ಥೆಗಳನ್ನು ಪ್ರೋತ್ಸಾಹಿಸಿದ ಹಲವಾರು ಸಂಸ್ಥೆಗಳು (ನಬಾರ್ಡ್), ಎಸ್ ಎಫ್ ಎ ಸಿ , ರಾಜ್ಯ ಅಭಿವೃದ್ಧಿ ಇಲಾಖೆಗಳು ಮತ್ತು ಸರ್ಕಾರೇತರ ಸಂಸ್ಥೆಗಳಾದ, ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಮಂಡಳಿ, ಮುಖ್ಯ ಕಾರ್ಯನಿರ್ವಹಣಾಧಿಕಾರಿ ಮತ್ತು ತಾಂತ್ರಿಕ ಸಿಬ್ಬಂದಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲು ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಲಾಗಿದೆ. ಈ ಕೇಂದ್ರದಿಂದ ವಿವಿಧ ತರಬೇತಿ ಕಾರ್ಯಕ್ರಮಗಳನ್ನು ನೀಡಲಾಗುತ್ತಿದ್ದರೂ, ರೈತ ಉತ್ಪಾದಕ ಸಂಸ್ಥೆಗಳ ಕಾರ್ಯಚಟುವಟಿಕೆಗಳಲ್ಲಿ ತೊಡಗಿಸಿಕೊಂಡ ವಿವಿಧ ಪಾಲುದಾರರಿಗೆ ಅದರಲ್ಲಿಯೂ ಮುಖ್ಯವಾಗಿ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ ಸರಳ ಮತ್ತು ಸ್ಪಷ್ಟವಾದ ವಿಷಯಗಳನ್ನು ಒಳಗೊಂಡಿರುವ ತರಬೇತಿ ಕೈಪಿಡಿಗಳ ತಯಾರಿಕೆಯ ಅಗತ್ಯವನ್ನು ಅರಿತುಕೊಂಡು, ಹಲವಾರು ತರಬೇತಿ ಕೈಪಿಡಿಗಳನ್ನು ಪ್ರಕಟಿಸುವ ಉತ್ಕೃಷ್ಟ ಕೇಂದ್ರದ ಪ್ರಯತ್ನ ಶ್ಲಾಘನೀಯ. ಈ ತರಬೇತಿ ಕೈಪಿಡಿ ಒಂದು ಉಪಯುಕ್ತ ಕೈಪಿಡಿಯಾಗಿ ಉಪಯೋಗವಾಗುವದೇಂಬುದು ನಮ್ಮ ಆಶಯ.

**ಕುಲಪತಿಗಳು**
**ತೋಟಗಾರಿಕೆ ವಿಶ್ವವಿದ್ಯಾಲಯ,**
**ಬಾಗಲಕೋಟೆ**

# ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ ಸ್ವಯಂ ಕಲಿಕಾ ಮಾಡ್ಯೂಲ್‌ನ ಉಪಯುಕ್ತತೆ.

ಭಾರತದ ಕೃಷಿ ಕ್ಷೇತ್ರದ ಸೂಕ್ಷ್ಮ ಅವಲೋಕನ ಮಾಡಿದಾಗ ಭಾರತೀಯ ಕೃಷಿಕರು ಎದುರಿಸುತ್ತಿರುವ ಹಲವಾರು ಸವಾಲುಗಳು ನಮಗೆ ಗೋಚರವಾಗುತ್ತವೆ. ಈ ಎಲ್ಲ ಸವಾಲುಗಳ ಮಧ್ಯೆಯು ಸ್ವತಂತ್ರ ನಂತರದ ವರ್ಷಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಹಲವಾರು ಸಾಧನೆಗಳನ್ನು ಮಾಡಿದ ಶ್ರೇಯಸ್ಸು ಈ ದೇಶದ ರೈತ ಸಮುದಾಯಕ್ಕೆ ಸಲ್ಲುತ್ತದೆ. ಚೀನಾ ದೇಶವನ್ನು ಹೊರತುಪಡಿಸಿದರೆ ಅತೀ ಹೆಚ್ಚು ಸಂಖ್ಯೆಯಲ್ಲಿ ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಹೊಂದಿದ ನಮ್ಮ ದೇಶದಲ್ಲಿ ಅವರ ಕಲ್ಯಾಣಕ್ಕಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ. ಇಂತಹ ಪ್ರಮುಖ ಕಾರ್ಯಕ್ರಮಗಳಲ್ಲಿ ರಾಷ್ಟ್ರಾದ್ಯಂತ ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸಿ ಬಲಪಡಿಸುವ ನಿಟ್ಟಿನಲ್ಲಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಹಲವಾರು ಪ್ರಯತ್ನಗಳನ್ನು ಮಾಡುತ್ತಲಿವೆ. ಕೇಂದ್ರ ಸರ್ಕಾರವು 2020 ಆಯವ್ಯಯ ಘೋಷಣೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಉತ್ತೇಜನಕ್ಕಾಗಿ ವಿಶೇಷ ತಂತ್ರವನ್ನು ಕೂಡ ಪ್ರಕಟಿಸಿದೆ. ಕರ್ನಾಟಕದಲ್ಲಿ ರಾಜ್ಯ ಸರ್ಕಾರವು ರೈತ ಉತ್ಪಾದಕ ಸಂಸ್ಥೆಗಳ ನೀತಿಯನ್ನು 2018 ರಲ್ಲಿಯೇ ಬಿಡುಗಡೆ ಮಾಡುವ ಮೂಲಕ ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಸ್ಥಾಪನೆಗೆ ತನ್ನದೇ ಆದ ವಿಶೇಷ ಯೋಜನೆಯನ್ನು ಹಾಕಿಕೊಂಡಿದೆ. ರಾಜ್ಯದಲ್ಲಿ ರೈತ ಉತ್ಪಾದಕ ಸಂಸ್ಥೆಗಳ ಒಟ್ಟಾರೆ ಅಭಿವೃದ್ಧಿಗಾಗಿ ಮತ್ತು ಅದರಲ್ಲಿಯೂ ವಿಶೇಷವಾಗಿ ಈ ಸಂಸ್ಥೆಗಳ ವಿವಿಧ ಪದಾಧಿಕಾರಿಗಳಿಗೆ ತರಬೇತಿ ಮಾರ್ಗದರ್ಶನ ನೀಡಲು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಿದೆ. ರಾಜ್ಯದಲ್ಲಿ ಸ್ಥಾಪಿತವಾದ ಹಲವಾರು ರೈತ ಉತ್ಪಾದಕ ಸಂಸ್ಥೆಗಳ ಪದಾಧಿಕಾರಿಗಳಿಗೆ, ರೈತ ಸದಸ್ಯರಿಗೆ ಹಾಗೂ ರೈತ ಉತ್ಪಾದಕ ಸಂಸ್ಥೆಗಳನ್ನು ಉತ್ತೇಜಿಸುವ ಅಭಿವೃದ್ಧಿ ಇಲಾಖೆಗಳ ವಿವಿಧ ಅಧಿಕಾರಿಗಳಿಗೆ ತರಬೇತಿ ಹಾಗೂ ಮಾರ್ಗದರ್ಶನವನ್ನು ಉತ್ಕೃಷ್ಟ ಕೇಂದ್ರದಿಂದ ನೀಡಲಾಗುತ್ತಿದೆ. ಈ ದಿಶೆಯಲ್ಲಿ ರೈತ ಉತ್ಪಾದಕ ಸಂಸ್ಥೆಗಳು ಆಡಳಿತ ಮಂಡಳಿಯ ನಿರ್ದೇಶಕರುಗಳಿಗೆ ಹಲವಾರು ವಿಷಯಗಳ ಬಗ್ಗೆ ತರಬೇತಿ ಕೈಪಿಡಿಗಳನ್ನು ವಿವಿಧ ಅನುಭವಿ ಸಂಸ್ಥೆಗಳ ಸಹಯೋಗದೊಂದಿಗೆ ಪ್ರಕಟಿಸುವ ಕಾರ್ಯವನ್ನು ಹಮ್ಮಿಕೊಳ್ಳಲಾಗಿದೆ. ತೆಲಂಗಾಣ ರಾಜ್ಯದ ಮಹಿಳಾ ಅಭಿವೃದ್ಧಿ ಸೊಸೈಟಿ ಮಧುಮೂರ್ತಿ ಹಾಗೂ ಶ್ರೀಮತಿ ರಾಮಲಕ್ಷ್ಮಿ ಅವರಿಂದ ತಯಾರಿಸಲಾದ ರೈತ ಉತ್ಪಾದಕ ಸಂಸ್ಥೆಗಳ ಪರಿಚಯ ಮತ್ತು ಉದ್ದೇಶ ಕುರಿತ ತರಬೇತಿ ಕೈಪಿಡಿಯ ಆಧಾರದ ಮೇಲೆ ಈ ಕಲಿಕಾ ಮಾಡ್ಯೂಲ್‌ನ್ನು ಪ್ರಕಟಿಸಲಾಗಿದೆ. ಕರ್ನಾಟಕ ರಾಜ್ಯದಲ್ಲಿ ಸ್ಥಾಪಿತವಾದ ಎಲ್ಲ ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ನಿದೇಶಕರುಗಳು ಈ ಕಲಿಕಾ ಕೈಪಿಡಿಯ ಉಪಯೋಗವನ್ನು ಪಡೆಯುವರೆಂಬುದು ನಮ್ಮ ಆಶಯವಾಗಿದೆ. ಈ ಪ್ರಕಟಣೆಯನ್ನು ಹೊರತರುವಲ್ಲಿ ಸಹಭಾಗಿತ್ವ ನೀಡಿದ ಮಹಿಳಾ ಅಭಿವೃದ್ಧಿ ಸೊಸೈಟಿ, ಜಿ.ಐ.ಝಡ್ ಬೆಂಗಳೂರು, ಮೈರಾಡಾ, ಡಬ್ಲುಹೆಚ್‌ಹೆಚ್ ಹಾಗೂ ಸ್ಕಿಲ್ ಇಂಡಿಯಾ ಇವರಿಗೆ ವಿಶೇಷವಾದ ಕೃತಜ್ಞತೆಯನ್ನು ಸಲ್ಲಿಸುತ್ತಾ ಅವರ ಕೊಡುಗೆಯನ್ನು ಈ ಮೂಲಕ ದಾಖಲಿಸಲಿಚ್ಛಿಸುತ್ತೇನೆ.

**ನಿರ್ದೇಶಕರು**
**ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ**
**ಬೆಂಗಳೂರು**

# ಪರಿವಿಡಿ


| ಕ್ರ. ಸಂ. | ವಿವರ | ಪುಟ ಸಂಖ್ಯೆ |
|---|---|---|
| I | ಕಲಿಕಾ ಕೈಪಿಡಿಯ ಕುರಿತು | 06 |
| II | ಸಂಕ್ಷಿಪ್ತಾಕ್ಷರಗಳು | 08 |
| III | ಮೂಲ ಸಮೀಕ್ಷೆ | 11 |
| 1. | ಕೃಷಿ ಪರಿಸ್ಥಿತಿ ಮತ್ತು ಸಾಮೂಹಿಕ ಕ್ರಿಯೆಯ ಅಗತ್ಯತೆ | 12 |
| 2. | ರೈತ ಉತ್ಪಾದಕರ ಸಂಸ್ಥೆಗಳು – ಅರ್ಥ, ಮೌಲ್ಯಗಳು ಮತ್ತು ತತ್ವಗಳು | 17 |
| 3. | ರೈತ ಉತ್ಪಾದಕ ಸಂಸ್ಥೆಗಳ ಪ್ರಮುಖ ಲಕ್ಷಣಗಳು | 20 |
| 4. | ರೈತ ಉತ್ಪಾದಕರ ಸಂಸ್ಥೆ: ನೋಂದಣಿ, ಅಗತ್ಯ ಮತ್ತು ಮಹತ್ವ | 29 |
| | ಅನುಬಂಧ 1 ಸಹಕಾರಿ ತತ್ವಗಳು | 37 |
| | ಅಂತಿಮ ಸಮೀಕ್ಷೆ | 39 |

# I. ಕಲಿಕಾ ಕೈಪಿಡಿಯ ಕುರಿತು

**ಮಂಡಳಿ ನಿರ್ದೇಶಕರ ಕಲಿಕಾ ಕೈಪಿಡಿ**

1. ಜಾಗೃತಿ– ರೈತ ಉತ್ಪಾದಕರ ಸಂಸ್ಥೆಗಳು: ಪರಿಚಯ & ಉದ್ದೇಶ
2. ಪರಿಕಲ್ಪನಾ – ಸಾಂಸ್ಥಿಕ ರಚನೆ ಮತ್ತು ರೈತ ಉತ್ಪಾದಕರ ಸಂಸ್ಥೆಗಳ ವಿನ್ಯಾಸ
3. ವಿನಿಮಯ– ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವ
4. ಪ್ರೇರಣ – ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಆಡಳಿತ
5. ಸಮರ್ಥನ – ರೈತ ಉತ್ಪಾದಕರ ಸಂಸ್ಥೆಗಳ ನಿರ್ವಹಣೆ
6. ಸುಧರ್ಮ – ರೈತ ಉತ್ಪಾದಕರ ಸಂಸ್ಥೆಗಳ ಕಾನೂನು ಆಚರಣೆಗಳು
7. ವ್ಯಾಪಾರೀ ಯೋಜನೆ
8. ಲೆಕ್ಕಪತ್ರ ಮತ್ತು ಹಣಕಾಸು
9. ಸುಗ್ಗಿ, ವಿತರಣ ಸರಪಳಿ ನಿರ್ವಹಣೆ
10. ಮಾರುಕಟ್ಟೆ
11. ತೋಟಗಾರಿಕಾ ಉತ್ಪಾದನಾ ಹೆಚ್ಚಳದ ಸೇವೆಗಳು
12. ನಾಯಕತ್ವ

ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ ಸ್ವಯಂ ಕಲಿಕಾ ಕೈಪಿಡಿಗಳ ಸರಣಿಯಲ್ಲಿ ಈ ಕೈಪಿಡಿ ಮೊದಲನೆಯದು. ಈ ಕೈಪಿಡಿಯು ರೈತ ಉತ್ಪಾದ ಸಂಸ್ಥೆಗಳ ಪರಿಚಯ ಮತ್ತು ಅವುಗಳ ಅವಶ್ಯಕತೆ ಕುರಿತಾದ ಕೈಪಿಡಿ ಆಗಿರುವುದರಿಂದ, ಇದು ರೈತ ಉತ್ಪಾದಕ ಸಂಸ್ಥೆಗಳ ಪರಿಣಾಮಕಾರಿ ಆಡಳಿತದ ಬಗ್ಗೆ ಕಲಿಯಲು ಅಡಿಪಾಯವನ್ನು ಹಾಕುತ್ತದೆ.

### ಉದ್ದೇಶ

ಈ ಕೈಪಿಡಿಯ ಉದ್ದೇಶವೆಂದರೆ ರೈತ ಉತ್ಪಾದಕ ಸಂಸ್ಥೆಗಳ ಆಡಳಿತ ಮಂಡಳಿಯ ಸದಸ್ಯರಿಗೆ, ರೈತ ಉತ್ಪಾದಕರ ಸಂಸ್ಥೆಗಳ ಬಗ್ಗೆ ಅಗತ್ಯ ತಿಳುವಳಿಕೆಯನ್ನು ನೀಡಿ ಸಂಸ್ಥೆಯ ಬಗ್ಗೆ ಸರಿಯಾದ ದೃಷ್ಟಿಕೋನವನ್ನು ಹೊಂದುವಂತೆ ಮಾಡಿ, ಆಡಳಿತ ಮಂಡಳಿಯ ಸದಸ್ಯರನ್ನು ಸಜ್ಜುಗೊಳಿಸುವುದು. ಇದರಿಂದ ಅವರು ತಮ್ಮ ಪಾತ್ರವನ್ನು ಪರಿಣಾಮಕಾರಿಯಾಗಿ ನಿರ್ವಹಿಸಿ ಅವರು ತಮ್ಮ ರೈತ ಉತ್ಪಾದಕ ಸಂಸ್ಥೆಗಳನ್ನು ತಮ್ಮ ಸದಸ್ಯರಿಗೆ ಅನುಕೂಲವಾಗುವ ಪಥದಲ್ಲಿ ಮುನ್ನಡೆಸುವಂತೆ ಮಾಡುವುದಾಗಿದೆ.

### ಉದ್ದೇಶಿತ ಕಲಿಕಾದಾರರು

ಈ ಕೈಪಿಡಿಯನ್ನು ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕರ ಮಂಡಳಿಯ ಸದಸ್ಯರಿಗೆ ಉದ್ದೇಶಿಸಲಾಗಿದೆ.

### ಕಲಿಕಾ ಉದ್ದೇಶಗಳು

ಈ ಪರಿಚಯಾತ್ಮಕ ಕೈಪಿಡಿಯ ಪ್ರಮುಖ ಕಲಿಕೆಯ ಉದ್ದೇಶಗಳು ಈ ಕೆಳಗಿನಂತಿವೆ

1. ರೈತ ಉತ್ಪಾದಕ ಸಂಸ್ಥೆಗಳ ಅರ್ಥ, ಪ್ರಮುಖ ಲಕ್ಷಣಗಳನ್ನು ಅರ್ಥಮಾಡಿಕೊಳ್ಳುವುದು. ರೈತ ಉತ್ಪಾದಕ ಸಂಸ್ಥೆಗಳ ಸದಸ್ಯರ ಸಾಮೂಹಿಕ ಕ್ರಿಯೆ ಮತ್ತು ಅದರ ಅಗತ್ಯತೆಯನ್ನು ತಿಳಿದುಕೂಳ್ಳುವುದು.

2. ರೈತ ಉತ್ಪಾದಕ ಸಂಸ್ಥೆಗಳ ನೋಂದಣಿಯ ಅಗತ್ಯತೆ ಮತ್ತು ನೋಂದಣಿಯಲ್ಲಿರುವ ವಿವಿದ ಕಾನೂನು ರೂಪುರೇಶಗಳ ಬಗ್ಗೆ ತಿಳುವಳಿಕೆ ಪಡೆಯುವುದು.

3. ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸಹಕಾರದ ಹಾಗು ಪರಸ್ಪರ ಸಹಾಯದ ಮೌಲ್ಯಗಳು ಮತ್ತು ತತ್ವಗಳ ಬಗ್ಗೆ ತಿಳಿದುಕೂಳ್ಳುವುದು.

**ರಚನೆ ಹಾಗೂ ವಿಷಯಗಳು**

ಈ ಕೈಪಿಡಿಯು ಕೃಷಿಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳೊಂದಿಗೆ ಪ್ರಾರಂಭವಾಗುತ್ತದೆ, ಆ ಸಮಸ್ಯೆಗಳನ್ನು ಸೂಕ್ತರೀತಿಯಲ್ಲಿ ಎದುರಿಸಲು ಸಾಮೂಹಿಕ ಕ್ರಿಯೆಯ ಅವಶ್ಯಕತೆ ಹಾಗು ಸಾಮೂಹಿಕ ಕ್ರಿಯೆಗೆ ಸೂಕ್ತವಾದ ಸಾಂಸ್ಥಿಕ ರಚನೆ ಅದುವೆ ರೈತ ಉತ್ಪಾದಕರ ಸಂಸ್ಥೆಯಾಗಿದೆ. ನಂತರ ಈ ಕೈಪಿಡಿಯು ರೈತ ಉತ್ಪಾದಕರ ಸಂಸ್ಥೆಗಳ ಅರ್ಥ ಮತ್ತು ರೈತ ಉತ್ಪಾದಕರ ಸಂಸ್ಥೆಗಳು ಅಳವಡಿಸಿಕೊಳ್ಳಬೇಕಾದ ಪ್ರಮುಖ ಸಹಕಾರಿ ಮೌಲ್ಯಗಳು ಮತ್ತು ತತ್ವಗಳ ಬಗ್ಗೆ ವಿವರಿಸುತ್ತದೆ.

**ಕೈಪಿಡಿಯನ್ನು ಉಪಯೋಗಿಸುವ ರೀತಿ**

ಈ ಕೈಪಿಡಿಯನ್ನು ಸ್ವತಹ ಕಲಿಕಾದರರು ಕಲಿಕೆಗಾಗಿ ಬಳಸಬಹುದು ಅಥವಾ ಈ ಕೈಪಿಡಿಗಳಿಂದ ಕಲಿಯಲು ಅನುಕೂಲವಾಗುವಂತೆ ಬಾಹ್ಯ ಸಂಪನ್ಮೂಲ ವ್ಯಕ್ತಿಗಳ ಸಹಾಯ ಪಡೆಯಬಹುದು. ಈ ಕೈಪಿಡಿಯ ಜೊತೆಗೆ, ಈ ಕೈಪಿಡಿಗೆ ಸಂಬಂಧಿಸಿದ ಬಿತಿಪತ್ರಗಳಿದ್ದು, ಆಡಳಿತ ಮಂಡಳಿಯ ಸದಸ್ಯರು ಅವುಗಳನ್ನು ರೈತ ಉತ್ಪಾದಕರ ಸಂಸ್ಥೆಗಳ ಸೂಕ್ತ ಸ್ಥಳಗಳಲ್ಲಿ ಪ್ರದರ್ಶಿಸಿ ನಿರಂತರ ಕಲಿಕೆಗೆ ಉಪಯೋಗಿಸಿಕೊಳ್ಳಬಹುದಾಗಿದೆ.

ಈ ಕಲಿಕಾ ಕೈಪಿಡಿಯಿಂದ ಪರಿಣಾಮಕಾರಿ ಹಾಗೂ ದಕ್ಷತೆಯಿಂದ ರೈತ ಉತ್ಪಾದಕರ ಸಂಸ್ಥೆಗಳ ನಿರ್ವಹಣೆಯನ್ನು ನೀವು ಮಾಡುವಿರೆಂದು ಹಾಗೂ ಈ ಕಲಿಕಾ ಕೈಪಿಡಿಯನ್ನು ಆನಂದಿಸುವಿರೆಂದು ನಾವು ಬಯಸುತ್ತೇವೆ.

# II. ಸಂಕ್ಷಿಪ್ತಾಕ್ಷರಗಳು

| | |
|---|---|
| **ಆರ್ಟಿಕಲ್ಸ್ ಆಫ್ ಅಸೋಷಿಯೇಷನ್ಸ್** | : ಇದು ಸಹಕಾರಿ ಸಂಘಗಳಿಗೆ ಉಪ ನಿಯಮಗಳಿದ್ದಂತೆ ಉತ್ಪಾದಕರ ಕಂಪನಿಗಳಿಗೆ ಸಂಘದ ಪರಿಚ್ಛೇದಗಳಿರುತ್ತದೆ ಅಷ್ಟೆ. ಸಂಘದ ಪರಿಚ್ಛೇದವು ಕಂಪನಿಯ ಕಾರ್ಯನಿರ್ವಹಣೆಯ ನಿಬಂಧನೆಗಳನ್ನು ಸೂಚಿಸುತ್ತದೆ ಮತ್ತು ಕಂಪನಿಯ ಉದ್ದೇಶವನ್ನು ಹಾಗು ಉದ್ದೇಶವನ್ನು ಸಾಧಿಸುವ ಮಾರ್ಗ ಮತ್ತು ವಿಧಾನಗಳನ್ನು ವ್ಯಾಖ್ಯಾನಿಸುತ್ತದೆ.<br>ಮಂಡಳಿಯು ಸಂಘದ ಪರಿಚ್ಛೇದಗಳನ್ನು ಸಿದ್ಧಪಡಿಸಬೇಕು ಮತ್ತು ಅದನ್ನು ಕಂಪನಿಗಳ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು. ಇದರ ಯಾವುದೇ ತಿದ್ದುಪಡಿಯನ್ನು ಸಾಮಾನ್ಯ ಸಭೆಯಲ್ಲೇ ಮಾಡಬೇಕು ಮತ್ತು ಅದಕ್ಕೆ ಕಂಪನಿಗಳ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು. |
| **ವಾರ್ಷಿಕ ಸಾಮಾನ್ಯ ಸಭೆ** | : ವಾರ್ಷಿಕ ಸಾಮಾನ್ಯ ಸಭೆ ಅಥವಾ ಸಾಮಾನ್ಯ ಸಭೆಯು ರೈತ ಉತ್ಪಾದಕ ಸಂಸ್ಥೆಗಳ ಎಲ್ಲಾ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯಾಗಿರುತ್ತದೆ. ಈ ವಾರ್ಷಿಕ ಸಭೆಗಳನ್ನು ಯಾವುದೇ ಮುಖ್ಯ ನೀತಿ ತೀರ್ಮಾನಗಳನ್ನು ತೆಗೆದುಕೊಳ್ಳುವಲ್ಲಿ ಅಂದರೆ ಲೆಕ್ಕ ಪರಿಶೋಧಿತ ಆರ್ಥಿಕ ವಿಚಾರಗಳು, ವಾರ್ಷಿಕ ಯೋಜನೆಗಳು, ಹೂಡಿಕೆ, ಬಂಡವಾಳ ಏರಿಕೆ, ಲೆಕ್ಕಪರಿಶೋಧಕರ ನೇಮಕಾತಿ, ಮಂಡಳಿ ನಿರ್ದೇಶಕರ ಚುನಾವಣೆ ಇವೇ ಮೊದಲಾದ ವಿಚಾರಗಳಿಗೆ ನಡೆಸಲಾಗುತ್ತದೆ. |
| **ಬ್ಯಾಂಕಿನ ಸಮನ್ವಯ ತಃಖ್ತೆ** | : ಬ್ಯಾಂಕಿನ ಸಮನ್ವಯ ತಃಖ್ತೆಯೆಂದರೆ ಸಂಸ್ಥೆಯ ನಗದು ಪುಸ್ತಕ, ಬ್ಯಾಂಕ್ ಪಾಸಬುಕ್ ಮತ್ತು ಬ್ಯಾಂಕ್ ಖಾತೆಯ ಹೇಳಕೆಯ ಮೊತ್ತಗಳನ್ನು ಸಮನ್ವಯಗೊಳಿಸುವ ಹೇಳಿಕೆಯಾಗಿದೆ. |
| **ಮಂಡಳಿ/ನಿರ್ದೇಶಕ ಮಂಡಳಿ/ ನಿರ್ದೇಶಕರು** | : ಮಂಡಳಿಯು ರೈತ ಉತ್ಪಾದಕರ ಸಂಸ್ಥೆಗಳ ನೀತಿ ತೀರ್ಮಾನಗಳನ್ನು ತೆಗೆದುಕೊಳ್ಳುವ ಮತ್ತು ಇದು ತನ್ನ ಸದಸ್ಯರಿಗಾಗಿ ಕಾರ್ಯನಿರ್ವಹಿಸುತ್ತಿದೆ ಎಂಬುದನ್ನು ಖಾತ್ರಿಪಡಿಸುವ ಆಡಳಿತ ಮಂಡಳಿಯಾಗಿದೆ. ರೈತ ಉತ್ಪಾದಕ ಸಂಸ್ಥೆಗಳ ಮಂಡಳಿಯು ಸಾಮಾನ್ಯ ಸಭೆಯಿಂದ ಅಂದರೆ ರೈತ ಉತ್ಪಾದಕ ಸಂಸ್ಥೆಯ ಸದಸ್ಯರಿಂದ ಚುನಾಯಿತರಾದವರಿಂದ ಕೂಡಿರುತ್ತದೆ. |
| **ಮಂಡಳಿಯ ಸಭೆಗಳು** | : ರೈತ ಉತ್ಪಾದಕರ ಸಂಸ್ಥೆಗಳ ಮಂಡಳಿಯ ನಿರ್ದೇಶಕರ ಸಭೆಯನ್ನು ನಡೆಸಬೇಕು. ಉಪನಿಯಮಗಳು / ಸಂಘದ ಪರಿಚ್ಛೇದಗಳು ಮಂಡಳಿಯ ಸಭೆಗಳನ್ನು ನಡೆಸುವ ಕಾಲಾವಧಿ ಮತ್ತು ವಿಧಾನಗಳನ್ನು ಸೂಚಿಸಬೇಕು. ಆದರೂ ತಿಂಗಳಿಗೆ ಕನಿಷ್ಟ ಒಂದು ಬಾರಿ ಸಭೆ ನಡೆಸುವುದು ಉತ್ತಮ ಆಚರಣೆಯಾಗಿದೆ. |
| **ಲಾಭಾಂಶ [ಬೋನಸ್]** | : ರೈತ ಉತ್ಪಾದಕ ಸಂಸ್ಥೆಯು ತನ್ನ ಲಾಭಾಂಶದ ಒಂದು ಭಾಗವನ್ನು ತನ್ನ ಸದಸ್ಯರಿಗೆ ವಿತರಿಸುವ ಮೊತ್ತ. |

**ಉಪನಿಯಮಗಳು** : ಉಪನಿಯಮಗಳು ಸಹಕಾರಿ ಸೊಸೈಟಿಗಳು ಕಾರ್ಯನಿರ್ವಹಣೆಯನ್ನು ಸಕ್ರಿಯಗೊಳಿಸುವ ನಿಯಮಗಳ ಗುಂಪು. ಪ್ರತಿಯೊಂದು ಸಹಕಾರಿ ಸೊಸೈಟಿಗಳು ತಮ್ಮ ಸ್ವಂತ ಉಪನಿಯಮಗಳನ್ನು ಹೊಂದಿರುತ್ತವೆ ಮತ್ತು ಸಹಕಾರಿ ಸೊಸೈಟಿಗಳ ಎಲ್ಲಾ ಕಾರ್ಯಚಟುವಟಿಕೆಗಳನ್ನು ಈ ಉಪನಿಯಮಗಳ ಅಡಿಯಲ್ಲೇ ತೆಗೆದುಕೊಳ್ಳಲಾಗುತ್ತದೆ.

ಮಂಡಳಿಯು ತನ್ನ ಉಪನಿಯಮಗಳನ್ನು ರೂಪಿಸಿ ಅದಕ್ಕೆ ಸಹಕಾರಿ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು. ಇದರ ಯಾವುದೇ ತಿದ್ದುಪಡಿಯನ್ನು ಸಾಮಾನ್ಯ ಸಭೆಯಲ್ಲೇ ಮಾಡಬೇಕು ಮತ್ತು ಅದಕ್ಕೆ ಸಹಕಾರಿ ನೋಂದಣಾಧಿಕಾರಿಗಳಿಂದ ಅನುಮೋದನೆ ಪಡೆಯಬೇಕು.

**ಸಹಕಾರಿ ಸಂಘ** : ಸಹಕಾರಿ ಕಾಯ್ದೆಯಡಿ ನೊಂದಣಿಯಾದ ರೈತ ಉತ್ಪಾದಕ ಸಂಸ್ಥೆಗಳನ್ನು (ಉದಾ: ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959) ಸಹಕಾರಿ ಸಂಘಗಳೆಂದು ಕರೆಯುತ್ತಾರೆ.

**ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ/ಮ್ಯಾನೇಜರ್ / ಜನರಲ್ ಮ್ಯಾನೇಜರ್** : ಪ್ರತಿಯೊಂದು ರೈತ ಉತ್ಪಾದಕರ ಸಂಸ್ಥೆಗಳು ಪೂರ್ಣಾವಧಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳನ್ನು ಹೊಂದಿರಬೇಕು ಅಥವಾ ಯಾವುದೇ ಪದನಾಮದಲ್ಲಿ ಇರಬಹುದು (ಮ್ಯಾನೇಜರ್. ಜನರಲ್ ಮ್ಯಾನೇಜರ್ ಇತ್ಯಾದಿ). ಮುಖ್ಯ ನಿರ್ವಾಹಕ ಅಧಿಕಾರಿ ರೈತ ಉತ್ಪಾದಕರ ಸಂಸ್ಥೆಯ ಎಲ್ಲಾ ಚಟುವಟಿಕೆಗಳನ್ನು ಮಂಡಳಿಯ ನಿರ್ವಾಹಕತೆ, ನಿರ್ದೇಶನ ಮತ್ತು ನಿಯಂತ್ರಣದ ಅಡಿಯಲ್ಲಿ ನಿರ್ವಹಿಸಬೇಕು ಮತ್ತು ರೈತ ಉತ್ಪಾದಕರ ಸಂಸ್ಥೆಯ ಸಾಧನೆಗೆ ಉತ್ತರದಾಯಿತ್ವವನ್ನು ಹೊಂದಿರಬೇಕು.

**ರೈತ ಉತ್ಪಾದಕ ಸಂಸ್ಥೆ** : ರೈತ ಉತ್ಪಾದಕರ ಸಂಸ್ಥೆಯು ಅದರ ಕೃಷಿಕ ಸದಸ್ಯರ ಮಾಲಿಕತ್ವದ ಮತ್ತು ನಿಯಂತ್ರಣವನ್ನು ಹೊಂದಿದ ನೋಂದಾಯಿತಿ ಸಂಸ್ಥೆಯಾಗಿದೆ. ರೈತ ಉತ್ಪಾದಕರ ಸಂಸ್ಥೆಯ ಉದ್ದೇಶ, ತನ್ನ ಸದಸ್ಯರ ಸಾಮಾನ್ಯ ಬೇಡಿಕೆಗಳನ್ನು, ಅವರಿಗೆ ಅವಶ್ಯಕವಾಗಿರುವ ಸೇವೆಗಳನ್ನು ಒದಗಿಸುವ ಮೂಲಕ ಈಡೇರಿಸುವುದಾಗಿದೆ. ರೈತ ಉತ್ಪಾದಕ ಸಂಸ್ಥೆಗಳು ಕೃಷಿ ಮತ್ತು ಅದಕ್ಕೆ ಸಂಬಂಧಪಟ್ಟ ವಿವಿಧ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿರಬೇಕು. ರೈತ ಉತ್ಪಾದಕರ ಸಂಸ್ಥೆಗಳು ಔಪಚಾರಿಕ ಸಂಸ್ಥೆಗಳಾಗಿರುವುದರಿಂದ ಅವು ಕಛೇರಿ/ಮೂಲ ಸೌಕರ್ಯ, ಸಿಬ್ಬಂದಿ, ವ್ಯವಸ್ಥೆ ಮತ್ತು ಮಂಡಳಿಯ ನಿರ್ದೇಶಕರ ನಿಯಂತ್ರಣಕ್ಕೆ ಒಳಪಟ್ಟಿರಬೇಕು.

**ಹಣಕಾಸು ವರ್ಷ** : ಏಪ್ರಿಲ್ ತಿಂಗಳಿನಿಂದ ಮಾರ್ಚ ತಿಂಗಳವರೆಗಿನ ಅವಧಿಯನ್ನು ಹಣಕಾಸು ವರ್ಷವೆಂದು ಪರಿಗಣಿಸಲಾಗುತ್ತದೆ.

**ಸಾಮಾನ್ಯ ಸಭೆ** : ರೈತ ಉತ್ಪಾದಕರ ಸಂಸ್ಥೆಯ ಎಲ್ಲಾ ಸದಸ್ಯರನ್ನು ಆ ರೈತ ಉತ್ಪಾದಕರ ಸಂಸ್ಥೆಯ ಸಾಮಾನ್ಯ ಸಭೆಯ ಸದಸ್ಯರೆಂದು ಪರಿಗಣಿಸಲಾಗುತ್ತದೆ. ಸಾಮಾನ್ಯ ಸಭೆಯು ರೈತ ಉತ್ಪಾದಕರ ಸಂಸ್ಥೆಯ ಅತ್ಯುನ್ನತ ಪ್ರಾಧಿಕಾರವಾಗಿರುತ್ತದೆ.

**ಸಾಮಾನ್ಯ ಸಭೆಗಳು** : ರೈತ ಉತ್ಪಾದಕ ಸಂಸ್ಥೆಯ ಸಾಮಾನ್ಯ ಸಭೆಗಳು

**ಸರಕು ಮತ್ತು ಸೇವಾ ತೆರಿಗೆ** : ಸರಕು ಮತ್ತು ಸೇವೆಗಳ ಮೇಲೆ ಭಾರತಾದ್ಯಂತ ಚಾಲ್ತಿಯಲ್ಲಿರುವ ಏಕರೂಪದ ಸಮಗ್ರ ತೆರಿಗೆ

**ಆಡಳಿತ** : ಒಂದು ಸಂಸ್ಥೆಯನ್ನು ಸೂಸುತ್ರವಾಗಿ ಮುನ್ನಡೆಸಿಕೊಂಡು ಹೋಗಲು ಹಾಗು ಸಂಸ್ಥೆಯ ನೀತಿಗಳು ಮತ್ತು ನಿಯಮಗಳ ಅನುಸಾರ ನಿರ್ಧಿಷ್ಟ ಚಟುವಟಿಕೆಗಳ ಅನುಷ್ಠಾನ ವ್ಯವಸ್ಥೆಗೆ ಆಡಳಿತ ಎನ್ನುತೇವೆ. ಈ ವ್ಯವಸ್ಥೆಯು ಕಾನೂನಿನ ಅನುಸರಣೆಗಳನ್ನು ಹಾಗೂ ಸಂಬಂಧ್ಧಪಟ್ಟವರಿಗೆ ತನ್ನ ಹೊಣೆಗಾರಿಕೆಯನ್ನು ಖಚಿತ ಪಡಿಸುತ್ತದೆ.

**ಸ್ವಾಯತ್ತ/ತಜ್ಞ ನಿರ್ದೇಶಕರು** : ಕಂಪನಿಗಳು ಕಾಯ್ದೆ 2013 ಉತ್ಪಾದಕ ಕಂಪನಿಗಳ ಮಂಡಳಿಯಲ್ಲಿ ಸ್ವಾಯತ್ತ ಮತ್ತು ತಜ್ಞ ನಿರ್ದೇಶಕರನ್ನು ಹೊಂದಿರುವುದಕ್ಕೆ ಅನುವು ಮಾಡಿದೆ. ಕಾಯ್ದೆಯ ಪ್ರಕಾರ ಮಂಡಳಿಯು ಒಟ್ಟು ಸದಸ್ಯರ ಐದನೇ ಒಂದು ಭಾಗ ಮೀರದಂತೆ ತಜ್ಞ ನಿರ್ದೇಶಕರನ್ನು ಹೊಂದಲು ಅವಕಾಶವಿದೆ.

**ಪ್ರೋತ್ಸಾಹ** : ರೈತಉತ್ಪಾದಕ ಸಂಸ್ಥೆ ನೀಡುವ ಸೇವೆಗಳನ್ನು ಉಪಯೋಗಿಸಿಕೊಂಡು ಸದಸ್ಯರು ಸಂಸ್ಥೆಯ ವ್ಯವಹಾರ ಚಟುವಟಿಕೆಗಳಲ್ಲಿ ಭಾಗವಹಿಸುವ ಮುಖಾಂತರ ಸಂಸ್ಥೆಯ ಬೆಳವಣಿಗೆಗೆ ಪ್ರೋತ್ಸಾಹ ನೀಡುವುದು.

**ಪ್ರೋತ್ಸಾಹಕ ಬೋನಸ್** : ಪ್ರೋತ್ಸಾಹಕ ಬೋನಸ್ ಎಂದರೆ ರೈತ ಉತ್ಪಾದಕ ಸಂಸ್ಥೆ ತನ್ನ ಹೆಚ್ಚುವರಿ ಆದಾಯದಿಂದ ಸದಸ್ಯರಿಗೆ ಅವರ ಪ್ರೋತ್ಸಾಹಕ್ಕೆ ಅನುಗುಣವಾಗಿ ಸದಸ್ಯ ರೈತರಿಗೆ ಕೊಡುವ ಹಣ.

**ಭಾಗವಹಿಸುವಿಕೆ ಮುಖಾಂತರ ಗುಣಮಟ್ಟದ ಖಾತರಿ ವ್ಯವಸ್ಥೆ (ಪಿಜಿಸ್)** : ಸಂಸ್ಥೆಗಳ ಉತ್ಪನ್ನಗಳ ಗುಣಮಟ್ಟವನ್ನು ಪ್ರಮಾಣೀಕರಿಸುವ ವ್ಯವಸ್ಥೆ (ಕೃಷಿ, ಸಹಕಾರ ಮತ್ತು ರೈತ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರ)

**ಸಾಮಾನ್ಯ ಸಭೆಯ ಪ್ರತಿನಿಧಿಗಳ ಸಭೆ** : ರೈತ ಉತ್ಪಾದಕ ಸಂಸ್ಥೆಯ ಸಾಮಾನ್ಯ ಸಭೆಯು ಕೆಲವು ಸದಸ್ಯರನ್ನು ತಮ್ಮ ಪ್ರತಿನಿಧಿಗಳೆಂದು ಗುರುತಿಸಿ ಅವರಿಗೆ ಆಗ್ಗಾಗ್ಗೆ ತ್ವರಿತವಾಗಿ ಸಭೆಗಳನ್ನು ನಡೆಸಿ ಚರ್ಚಿಸಿ ಸಾಮಾನ್ಯ ಸಭೆಯ ಪರವಾಗಿ ತೀರ್ಮಾನಗಳನ್ನು ತೆಗೆದು ಕೊಳ್ಳಲು ರಚಿಸಿದ ಸಭೆ

**ವಾರ್ಷಿಕ ರಿಟರ್ನ್‌ಗಳ ಫೈಲಿಂಗ್** : ವಾರ್ಷಿಕ ರಿಟರ್ನ ಫೈಲಿಂಗ್ ರೈತ ಉತ್ಪಾದಕ ಸಂಸ್ಥೆಯು ವಾರ್ಷಿಕವಾಗಿ ಸಂಬಂಧಪಟ್ಟ ಪ್ರಾಧಿಕಾರಕ್ಕೆ (ಕಂಪನಿಗಳ ರಿಜಿಸ್ಟ್ರಾರ್/ ಸಹಕಾರಿ ಸಂಘಗಳ ರಿಜಿಸ್ಟ್ರಾರ್) ಸಂಸ್ಥೆಯ ವಾರ್ಷಿಕ ಆದಾಯದ ಜೊತೆಗೆ ಲೆಕ್ಕ ಪರಿಶೋಧಿತ ಹಣಕಾಸು ವರದಿ ಹಾಗೂ ಇತರೆ ಚಟುವಟಿಕೆಗಳ ವಿವರಗಳನ್ನು ಸಲ್ಲಿಸುವ ಪ್ರಕ್ರಿಯೆ.

**ಮೀಸಲು ನಿಧಿ** : ಸಂಸ್ಥೆ ಗಳಿಸಿದ ಲಾಭ ಮತ್ತು ಇತರೆ ಹೆಚ್ಚುವರಿಗಳಿಂದ ಸ್ವಲ್ಪ ಭಾಗವನ್ನು ಸಂಸ್ಥೆಯ ಹಣಕಾಸಿನ ಸ್ತಿತಿಯನ್ನು ಸಧೃಡಗೊಳಿಸಲು ಹಾಗೂ ಯಾವುದೇ ಅನಿರೀಕ್ಷಿತ ನಷ್ಟಗಳನ್ನು ಭರಿಸಲು ಮೀಸಲಿಟ್ಟ ಹಣ. ಈ ಮೀಸಲನ್ನು ಸಂಸ್ಥೆಯ ಇನ್ಯಾವುದೆ ವೆಚ್ಚಕ್ಕೆ ಬಳಸುವಂತಿಲ್ಲ.

**ಹೆಚ್ಚುವರಿ ನಿಧಿ** : ಸಂಸ್ಥೆಯು ಭರಿಸಬೇಕಾದ ನಿರ್ವಹಣಾ/ಆಡಳಿತ ವೆಚ್ಚ, ತೆರಿಗೆಗಳು, ಪಾವತಿಸಬೇಕಾದ ಲಾಭಾಂಶ ಹಾಗೂ ಇತರೆ ವೆಚ್ಚಗಳನ್ನು ಕಡಿತಗೊಳಿಸಿದ ನಂತರ ಉಳಿಯುವ ಮೊತ್ತ.

**ಬಳಕೆಯ ಪ್ರಮಾಣ ಪತ್ರ** : ರೈತ ಉತ್ಪಾದಕ ಸಂಸ್ಥೆಯು ಬೇರೆ ಯಾವುದಾರು ಮೂಲದಿಂದ ಅಥವಾ ಸಂಸ್ಥೆಯಿಂದ ಸ್ವೀವಕರಿಸಿದ ಹಣದ ಬಳಕೆಯನ್ನು ಪ್ರಮಾಣೀಕರಿಸುವ ಪತ್ರ.

# III. ಮೂಲ ಸಮೀಕ್ಷೆ

ಕಲಿಕೆಯ ಕೈಪಿಡಿಯ ಬಗ್ಗೆ ಆರಂಭಿಕ ವಿಭಾಗದಲ್ಲಿ ನೀಡಲಾಗಿರುವಂತೆ ಈ ಕೈಪಿಡಿಯ ವಿಷಯ ರೈತ ಉತ್ಪಾದಕರ ಕಂಪನಿಗಳ ಪರಿಚಯ ಮತ್ತು ಉದ್ದೇಶಗಳ ಬಗ್ಗೆ ವಿವರಿಸುತ್ತದೆ.

ಈ ವಿಷಯಕ್ಕೆ ಸಂಬಂಧಿಸಿದಂತೆ ಕೆಲವೊಂದು ಮೂಲ ಪ್ರಶ್ನೆಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ. ಕಲಿಕೆಯಲ್ಲಿ ಪಾಲ್ಗೊಳ್ಳುವ ಸದಸ್ಯರು ತಾವಾಗಿಯೇ ಪ್ರಶ್ನೆಗಳನ್ನು ಉತ್ತರಿಸುವ ಪ್ರಯತ್ನ ಮಾಡಬೇಕು. ಈ ಮೂಲ ಸಮೀಕ್ಷೆಗಳ ಉದ್ದೇಶವೆಂದರೆ, ಈ ಕೆಳಗೆ ನೀಡಲಾದ ಪ್ರಶ್ನೆಗಳ ಬಗ್ಗೆ ನಮಗಿರುವ ಜ್ಞಾನ ಹಾಗೂ ತಿಳುವಳಿಕೆ ಕುರಿತು ಅರ್ಥೈಸುವಿಕೆಯನ್ನು ಕಂಡುಕೊಳ್ಳುವುದು ಮತ್ತು ಆ ಮೂಲಕ ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆ ಕುರಿತು ಮತ್ತಷ್ಟು ಕಲಿತುಕೊಳ್ಳಲು ಯತ್ನಿಸುವುದು.

1. ರೈತರು ಕೃಷಿಯಲ್ಲಿ ಮತ್ತು ಕೃಷಿಗೆ ಸಂಬಂದಿಸಿದ ಚಟುವಟಿಕೆಗಳಲ್ಲಿ ಸಾಮೂಹಿಕ ಕ್ರಿಯೆಯನ್ನು ಕೈಗೊಳ್ಳುವ ಅವಶ್ಯಕತೆ ಏನು?

2. ರೈತ ಉತ್ಪಾದಕರ ಸಂಸ್ಥೆ (ಎಫ್.ಪಿ.ಒ) ಎಂದರೇನು?

3. ರೈತ ಉತ್ಪಾದಕರ ಸಂಸ್ಥೆಯು ಯಾರ ಒಡೆತನದಲ್ಲಿರುತ್ತದೆ?

4. ಆರ್ಟಿಕಲ್ಸ್ ಆಫ್ ಅಸೋಸಿಯೇಷನ್ (ಎ.ಓ.ಎ) ಎಂದರೇನು?

# 1

# ಕೃಷಿ ಪರಿಸ್ಥಿತಿ ಮತ್ತು ಸಾಮೂಹಿಕ ಕ್ರಿಯೆಯ ಅಗತ್ಯತೆ

## ಅಧಿವೇಶನದ ಉದ್ದೇಶ:




**ಸಾಮೂಹಿಕ ಕ್ರಿಯೆಯ ಅಗತ್ಯತೆ ಮತ್ತು ಪ್ರಯೋಜನಗಳನ್ನು ಅರ್ಥಮಾಡಿಕೊಳ್ಳುವುದು.**

**ವಿಷಯಗಳು:**


1. ಕೃಷಿಯಲ್ಲಿನ ತೊಂದರೆಗಳು ಮತ್ತು ಸಾಮೂಹಿಕ ಕ್ರಿಯೆಯ ಅಗತ್ಯತೆ
2. ಸಾಮೂಹಿಕ ಮಟ್ಟದಲ್ಲಿ ಕೈಗೊಳುವ ಚಟುವಟಿಕೆಗಳು
3. ರೈತರ ಒಗ್ಗೂಡುವಿಕೆಗಾಗಿ ಸಾಂಸ್ಥಿಕ ಸಂಸ್ಥೆಯ ರಚನೆ

ಶ್ಯಾಮ್ ನರಸಾಪುರ ಗ್ರಾಮದ ಸಣ್ಣ ರೈತ. ಅವರು 2 ಎಕರೆ ಜಮೀನು ಮತ್ತು ಒಂದು ಎಮ್ಮೆಯನ್ನು ಹೊಂದಿದ್ದಾರೆ. ಅವರಿಗೆ ಇಬ್ಬರು ಶಾಲೆಗೆ ಹೋಗುವ ಮಕ್ಕಳಿದ್ದಾರೆ. ಶ್ಯಾಮ್ ಮತ್ತು ಅವರ ಪತ್ನಿ ಲಕ್ಷ್ಮಿ ಇಬ್ಬರೂ ಸಹ ಕೃಷಿಕರು ಮತ್ತು ಇತರರ ಹೊಲಗಳಲ್ಲಿ ಕೂಲಿ ಕಾರ್ಮಿಕರಾಗಿ ಕೆಲಸ ಮಾಡುತ್ತಾರೆ. ಶ್ಯಾಮ್, ಅವರ ಭೂಮಿಗೆ ಯಾವುದೇ ನೀರಾವರಿ ಸೌಲಭ್ಯವಿಲ್ಲ, ಅವರು ಮಳೆಯಾಶ್ರಿತ ಕೃಷಿಯನ್ನು ಅವಲಂಬಿಸಿದ್ದಾರೆ. ಬೀಜ ಪೂರೈಕೆದಾರರೊಬ್ಬರ ಸಲಹೆಯೊಂದಿಗೆ, ಕಳೆದ ಮಳೆಗಾಲದಲ್ಲಿ ಹೆಚ್ಚಿನ ವೆಚ್ಚವನ್ನು ಪಾವತಿಸುವ ಮೂಲಕ ಹೆಚ್ಚಿನ ಇಳುವರಿ ನೀಡುವ ತೊಗರಿ ಬೇಳೆಯನ್ನು ಆರಿಸಿಕೊಂಡಿದ್ದರು.

ಆದರೆ ಬೀಜದ ಮೊಳಕೆಯೊಡೆಯುವಿಕೆಯ ಶೇ.50% ಸಹ ಇರಲಿಲ್ಲ. ಸಹವರ್ತಿ ರೈತರ ಪ್ರಭಾವ ಮತ್ತು ಅಸಮರ್ಪಕ ಜ್ಞಾನದ ಅರಿವಿನಿಂದ, ಶ್ಯಾಮ್ ರಾಸಾಯನಿಕ ಗೊಬ್ಬರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಸಿದ್ದರಿಂದ ಉತ್ಪಾದನ ವೆಚ್ಚ ಹೆಚ್ಚಾಯಿತು. ತದನಂತರ ಯಂತ್ರೋಪಕರಣಗಳ ಕೊರತೆ ಮತ್ತು ಇತರೆ ರೈತರ ಹೊಲಗಳಲ್ಲಿ ಕೆಲಸದ ಹೊರೆ ಹೆಚ್ಚು ಇದ್ದ ಕಾರಣದಿಂದ ಸಕಾಲದಲ್ಲಿ ಕಳೆ ತೆಗೆಯಲು ಅವರಿಗೆ ಸಾಧ್ಯವಾಗಲಿಲ್ಲ. ಇದರ ಪರಿಣಾಮವಾಗಿ ಇಳುವರಿ ಕುಂಟಿತವಾಯಿತು. ಅವರು ತಮ್ಮ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ಮಾರಾಟ ಮಾಡಲು ಪ್ರಯತ್ನಿಸಿದಾಗ, ಮಾರುಕಟ್ಟೆಯಲ್ಲಿ ಹೆಚ್ಚಿನ ಪ್ರಮಾಣದ ಉತ್ಪನಾ ಬಂದಿದ್ದರಿಂದ ಬೆಲೆ ಕುಸಿತ ಕಂಡುಬಂದಿತು. ಈ ಪರಿಸ್ಥಿತಿಯಿಂದ, ಶ್ಯಾಮ್ ಈಗ ಮುಂಬರುವ ಮಳೆಗಾಲದಲ್ಲಿ ಬೆಳೆ ಬೆಳೆಯಲು ಏನು ತೋಚದೆ ಸಂದಿಗ್ಧ ಪರಿಸ್ಥಿತಿಯಲ್ಲಿದ್ದಾನೆ.



ನಾವು ಸಹ ಕೃಷಿಯಲಿ ಇದೇ ರೀತಿಯ ತೊಂದರೆಗಳನ್ನು ಎದುರಿಸುತ್ತಿದ್ದೇವೆಯೇ? ಇದರ ಬಗ್ಗೆ ನಾವು ಏನು ಮಾಡಬಹುದು?
ಶ್ಯಾಮ್ ತಾನೂ ಎದುರಿಸುತ್ತಿರುವ ಕೃಷಿ ತೊಂದರೆಗಳನ್ನು ನಿವಾರಿಸಿಕೊಳ್ಳಲ್ಲು ಹೇಗೆ ಪ್ರಯತ್ನಿಸುತ್ತಾನೆ ಎಂದು ನೋಡೋಣ.




ಒಂದು ದಿನ ವಿಕಾಸನ ಎಂಬ ಸರ್ಕಾರೇತರ ಸಂಸ್ಥೆ (ಎನ್.ಜಿ.ಓ.) ಯವರು ಗ್ರಾಮಕ್ಕೆ ಬಂದು ರೈತರೊಂದಿಗೆ ಪ್ರಸ್ತುತ ಕೃಷಿ ಪರಿಸ್ಥಿತಿ ಮತ್ತು ಅವರು ಎದುರಿಸುತ್ತಿರುವ ತೊಂದರೆಗಳ ಬಗ್ಗೆ ಚರ್ಚೆಯನ್ನು ಪ್ರಾರಂಭಿಸಿತು. ವಿಕಾಸನ ಸಂಸ್ಥೆಯ ಪ್ರತಿನಿಧಿಗಳು ಸಾಂಭಾವ್ಯ ರೈತರೊಂದಿಗೆ ಪ್ರಚಾರ ಸಭೆಗಳನ್ನು ಕೈಗೂಂಡರು. ರಾಮಯ್ಯ ಎಂಬುವರು, ಶ್ಯಾಮ್‌ನ ಸ್ನೇಹಿತರಲ್ಲಿ ಒಬ್ಬರು. ರಾಮಯ್ಯರವರು, ಶ್ಯಾಮ್ ಅವರನ್ನು ತಮ್ಮೊಂದಿಗೆ ಪ್ರಚಾರ ಸಭೆಯಲ್ಲಿ ಪಾಲ್ಗೊಳ್ಳುವಂತೆ ವಿನಂತಿಸಿದರು. ಸಭೆಯಲ್ಲಿ ಶ್ಯಾಮ್ ಕೂಡ ಭಾಗವಹಿಸಿದ್ದರು. ನಾವು ಈಗ ಸಭೆಯ ಸಮಯದಲ್ಲಿ ನಡೆದ ಚರ್ಚೆಗಳನ್ನು ನೋಡೋಣ.

ನರಸಪುರ ಗ್ರಾಮದ ಸುಮಾರು 55 ರೈತರು ಮತ್ತು ಸುತ್ತಮುತ್ತಲಿನ ಗ್ರಾಮಗಳ ರೈತರು ಪಂಚಾಯಿತಿ ಕಚೇರಿಯಲ್ಲಿ ಸಭೆ ಸೇರಿದರು. ವಿಕಾಸ ಸಂಸ್ಥೆಯ ಪ್ರತಿನಿದಿ ಮತ್ತು ಆ ಪ್ರದೇಶದ ಪ್ರಸಿದ್ಧ ಅಭಿವೃದ್ಧಿ ಕಾರ್ಯಕರ್ತೆ ಶ್ರೀಮತಿ ಸರಸ್ವತಿಯವರು ಎಲ್ಲ ರೈತರನ್ನು ಸ್ವಾಗತಿಸಿದರು. ಪರಿಚಯಗಳ ನಂತರ, ಸರಸ್ವತಿಯವರು, ನೆರೆದ ರೈತರನು ಉದ್ಧೇಶಿಸಿ ಈರೀತಿ ಎಳಿದರು; ನಾವು ನಮ್ಮ ಜಮೀನಿನಲ್ಲಿ ಹಗಲು–ರಾತ್ರಿ ಕೃಷಿಕರಾಗಿ ದುಡಿದು, ನಮ್ಮ ಕುಟುಂಬವನ್ನು ಪೋಷಿಸಿಸುವುದರೂಂದಿಗೆ, ಇತರರಿಗೆ ಆಹಾರವನ್ನು ನೀಡುತ್ತೇವೆ. ನಮ್ಮಲ್ಲಿ ನಮಗೆ ಸಾಕಷ್ಟು ಆಹಾರವಿಲ್ಲದಿದ್ದರೂ, ನಾವು ಬೆಳೆಯನ್ನು ನೋಡಿಕೊಳ್ಳುತ್ತೇವೆ. ನಮ್ಮ ಬೆಳೆಗಳ ವಿಷಯಕ್ಕೆ ಬಂದಾಗ, ನಾವು ಯಾವಾಗಲೂ ಎಲ್ಲವನ್ನೂ ಎಚ್ಚರಿಕೆಯಿಂದ ಮಾಡುತ್ತೇವೆ. ನಾವು ಮಾಡುತ್ತಿರುವ ಕೃಷಿ ನಮ್ಮ ಕುಟುಂಬಕ್ಕೆ ಜೀವನೋಪಾಯದ ಮೂಲ ಮಾತ್ರವಲ್ಲ, ಇದು ಆಹಾರ, ಮೇವು ಮತ್ತು ಕೈಗಾರಿಕೆಗಳಿಗೆ ಖಚ್ಚಾ ವಸ್ತುಗಳನ್ನು ಒದಗಿಸುವ ಮುಖ್ಯ ಮೂಲವಾಗಿದೆ. ಕೃಷಿ ನಮ್ಮ ದೇಶದ ಬೆನ್ನೆಲುಬು. ಆದ್ದರಿಂದ ರೈತರು ಈ ಜಗತ್ತಿನ ಪ್ರಮುಖ ವ್ಯಕ್ತಿಗಳಲ್ಲಿ ಒಬ್ಬರು.

ನಾವು ನಮ್ಮ ಕೃಷಿಗಾಗಿ ಮಳೆಯನ್ನು ಅವಲಂಬಿಸಿದೇವೆ. ವಿವಿಧ ಕೃಷಿ ತಾಂತ್ರಿಕತೆಯನ್ನು ಅಳವಡಿಸಿಕೊಂಡು ಕೃಷಿಯಲ್ಲಿ ಸುಸ್ಥಿರತೆಯನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತಿದ್ದರೂ ಸಹ ನಾವು ಇನ್ನೂ ಅನೇಕ ತೂಂದರೆಗಳನ್ನು ಎದುರಿಸುತ್ತಿದ್ದೇವೆ ಎಂದು ತಿಳಿಸಿದರು. ನೆರೆದಿದ್ದ ರೈತರಿಗೆ ನಮ್ಮ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕೃಷಿ ಕ್ಷೇತ್ರದಲ್ಲಿ ಕಂಡುಬರುವ ಮೂರು ಪ್ರಮುಖ ತೊಂದರೆಗಳು ಹಾಗು ಮೂರು ಉತ್ತಮ ಕೃಷಿ ಪದ್ದತಿಗಳನ್ನು ಪಟ್ಟಿ ಮಾಡಲು ತಿಳಿಸಿದರು.

| ನಮ್ಮ ಪ್ರದೇಶದಲ್ಲಿ ಕೃಷಿಯಲ್ಲಿ ಎದುರಿಸುತಿರುವ ತೊಂದರೆಗಳು | ನಮ್ಮ ಪ್ರದೇಶದಲ್ಲಿ ಕೃಷಿಯ ಕೃಷಿ ಪದ್ದತಿಗಳು |
|---|---|
| ___________________ | ___________________ |
| ___________________ | ___________________ |
| ___________________ | ___________________ |
| ___________________ | ___________________ |


ಈ ಮೇಲಿನ ಚಟುವಟಿಕೆಯಿಂದ ನಾವು ಅರ್ಥಮಾಡಿಕೂಳ್ಳುವುದೇನೆಂದರೆ, ರೈತರು ಕೃಷಿಯಲ್ಲಿ ಹಲವು ತೂಂದರೆಗಳನ್ನು ಎದುರಿಸುತ್ತಿರುವುದು ಸ್ಪಷ್ಟವಾಗುತ್ತದೆ. ಅದಾಗ್ಯೂ ಕೆಲವು ಯಶಸ್ಸಿನ ಉದಾಹರಣೆಗಳಿವೆ ಮತ್ತು ತೂಂದರೆಗಳಿಗೆ, ಪರಿಹಾರವನ್ನು ಕಂಡುಕೂಳ್ಳಲು ಹಲವಾರು ಅವಕಾಶಗಳಿವೆ.

ತದನಂತರ ಸರಸ್ವತಿಯವರು ರೈತರು ಒಬ್ಬಂಟಿಯಾಗಿ ಕಾರ್ಯನಿರ್ವಹಿಸುವುದಕ್ಕೂ ಮತ್ತು ಸಾಮೂಹಿಕವಾಗಿ ನಿರ್ವಹಿಸುವುದಕ್ಕೂ ವ್ಯತ್ಯಾಸಗಳೆನೆಂದು ಕೆಳಗಿನ ಎರಡು ಬಿತ್ತಿ ಚಿತ್ರಗಳ ಮೂಖಾಂತರ ವಿವರಿಸಿದರು.


ನಂತರ ಶ್ರೀಮತಿ ಸರಸ್ವತಿಯನರು ನೆರೆದ ರೈತರನ್ನು ಕೇಳಿದರು: "ವೈಯಕ್ತಿಕ ರೈತರ ಮಟ್ಟದಲ್ಲಿಯೇ ಕ್ರಮುಗಳನ್ನು ಕೈಗೊಳ್ಳುವುದರ ಮೂಲಕ ಕೃಷಿಯಲ್ಲಿನ ಅಡಚಣೆಗಳನ್ನು/ತೂಂದರೆಗಳನ್ನು ನಿವಾರಿಸಬಹುದೇ? "ಬಹುತೇಕ ಎಲ್ಲ ರೈತರು ಸಾಧ್ಯವಿಲ್ಲ ಎಂದು ಹೇಳಿದರು. ಹೀಗೆ ಶ್ರೀಮತಿ ಸರಸ್ವತಿಯವರು ಈ ಕೆಳಗಿನ ಪೋಸ್ಟರ್ ಅನ್ನು ತೋರಿಸುವ ಮೂಲಕ ಕೃಷಿ ಅಡಚಣೆಗಳನ್ನು/ ತೊಂದರೆಗಳನ್ನು ನಿವಾರಿಸಲು ಸಾಮೂಹಿಕ ಕ್ರಮ ಕೈಗೊಳ್ಳುವ ಅಗತ್ಯವನ್ನು ರೈತರಿಗೆ ವಿವರಿಸಿದರು.

# ವೈಯುಕ್ತಿಕವಾಗಿ ಮತ್ತು ಸಾಮೂಹಿಕವಾಗಿ ರೈತರ ಪರಿಸ್ಥಿತಿ


## ವೈಯುಕ್ತಿಕವಾಗಿ ವ್ಯವಹರಿಸುವಲ್ಲಿ ಎದುರಾಗುವ ಅಡೆತಡೆಗಳು




## ಸಾಮೂಹಿಕವಾಗಿ ಕಾರ್ಯನಿರ್ವಹಿಸುವ ಮೂಲಕ ದೊರೆಯುವ ಪ್ರಯೋಜನೆಗಳು



# ಸಾಮೂಹಿಕ ಮಟ್ಟದಲ್ಲಿ ಚಟುವಟಿಕೆಗಳು



ನಂತರ ಶ್ರೀಮತಿ. ಸರಸ್ವತಿಯವರು, ರೈತರು ಸಾಮೂಹಿಕವಾಗಿ ಚಟುವಟಿಕೆಗಳನ್ನು ಕೈಗೆತ್ತಿಕೊಂಡಾಗ ರೈತರಿಗೆ ಸಿಗುವ ಸವಲತ್ತುಗಳನ್ನು/ಪ್ರಯೋಜನಗಳನ್ನು ಪಟ್ಟಿ ಮಾಡುವಂತೆ ವಿನಂತಿಸಿದರು.

________________________________________

________________________________________

________________________________________

________________________________________

ಸಾಮೂಹಿಕವಾಗಿ ಚಟುವಟಿಕೆಗಳನ್ನು ಕೈಗೆತಿಕೂಂಡಾಗ ಕಡಿಮೆ ವೆಚ್ಚದಲ್ಲಿ ಪರಿಕರಗಳನ್ನು ಪಡೆಯಲು, ಚೌಕಾಶಿ ಶಕ್ತಿಯನ್ನು ಹೆಚ್ಚಿಸಿಕೂಂಡು ತಮ್ಮ ಉತ್ಪನ್ನಗಳಿಗೆ ಉತ್ತಮ ಬೆಲೆಯನ್ನು ಪಡೆಯಲು ಮತ್ತು ರೈತರು ತವಲವ/ಬೇಡಿಕೆಗಳನ್ನು ಒಟ್ಟಾಗಿ ಹೊರ ಹಾಕಿದಾಗ ಅದು ಶಕ್ತಿಯಾಗಿ ಹೊರಹೊಮ್ಮುತ್ತದೆ ಎಂದು ತಿಳಿಸಿದರು.

**ರೈತ ಉತ್ಪಾದಕರ ಸಂಸ್ಥೆಗಳು (ಎಫ್.ಪಿ.ಒ) – ಸಾಮೂಹಿಕ ಕಾರ್ಯಚಟುವಟಿಕೆಗಳ ಸಾಂಸ್ಥಿಕ ನೆಲೆ**

ಸಭೆಯಲ್ಲಿ ಸಕ್ರಿಯವಾಗಿ ಭಾಗವಹಿಸಿ ಎಲ್ಲವನ್ನು ಆಲಿಸಿದ ರೈತ ಸುದರ್ಶನ್, ಸಾಮೂಹಿಕ ಕ್ರಮ ಕೈಗೊಳ್ಳಲು ದಾರಿ ಅಥವಾ ವ್ಯವಸ್ಥೆ ಯಾವುದು ಎಂದು ಕೇಳಿದರು.

ಶ್ರೀಮತಿ ಸರಸ್ವತಿಯವರು, ಇದು ಬಹಳ ಮುಖ್ಯ ಮತ್ತು ಒಳ್ಳೆಯ ಪ್ರಶ್ನೆ ಎಂದು ನಗು ಮುಖದಿಂದ ಉತ್ತರಿಸಿದರು.

ಮೊದಲು ಪಟ್ಟಿ ಮಾಡಿದಂತೆ ಸಾಮೂಹಿಕ ಮಟ್ಟದಲ್ಲಿ ವಿಭಿನ್ನ ಚಟುವಟಿಕೆಗಳನ್ನು ತೆಗೆದುಕೊಳ್ಳಲು, ನೀವು ಕನೂನಿನ ಚೌಕಟ್ಟಿನಲ್ಲಿ ರಚಿತವಾದ ಒಂದು ವ್ಯವಸ್ಥೆಯನ್ನು ಹೊಂದಿರಬೇಕು. ರೈತ ಉತ್ಪಾದಕರ ಸಂಸ್ಥೆಯು (ಎಫ್.ಪಿ.ಒ) ಸಾಮೂಹಿಕ ಕ್ರಿಯೆಗೆ ಅತ್ಯಂತ ಸೂಕ್ತ ಮತ್ತು ಪರಿಣಾಮಕಾರಿ ವ್ಯವಸ್ಥೆಯಾಗಿದೆ ಎಂದು ತಿಳಿಸಿದರು.

ಶ್ರೀಮತಿ ಸರಸ್ವತಿರವರು ಮುಂದುವರಿದು ಹೀಗೆ ಹೇಳಿದರು, "ರೈತ ಉತ್ಪಾದಕರ ಸಂಸ್ಥೆ (ಎಫ್.ಪಿ.ಒ) ನಿಮ್ಮ ಸ್ವಂತ ಸಂಸ್ಥೆ – ಅದು ಸದಸ್ಯ ರೈತರ ಒಡೆತನದಲ್ಲಿರುತ್ತದೆ ಮತ್ತು ಸದಸ್ಯ ರೈತರಿಂದಲೆ ನಿಯಂತ್ರಿಸಲ್ಪಡುತ್ತದೆ ಹಾಗೂ ನಿರ್ವಹಿಸಲ್ಪಡುತ್ತದೆ. ಎಫ್.ಪಿ.ಒ. ಗಳು ತಮ್ಮ ಸದಸ್ಯ ರೈತನಿಗೆ ಬೀತ್ತನೆ ಬೀಜದಿಂದ ಹಿಡಿದು–ಕೊಯ್ಲುಮಾಡಿ ಅಂತಿಮವಾಗಿ ಉತ್ಪನ್ನಗಳನ್ನು ಮಾರುಕಟ್ಟೆ ಮಾಡಿ, ಗ್ರಾಹಕರಿಗೆ ಉತ್ಪನ್ನಗಳನ್ನು ತಲುಪಿಸುವವರೆಗೆ ವಿವಿಧ ಸೇವೆಗಳನ್ನು ನೀಡಬಹುದು. ಎಫ್.ಪಿ.ಒ. ಗಳು ಸಹಕಾರಿ ತತ್ವಗಳು ಮತ್ತು ವ್ಯವಹಾರ ದೃಷ್ಟಿ ಕೊನವನ್ನು ಹೊಂದಿರಬೇಕು. ರೈತ ಉತ್ಪಾದಕರ ಸಂಸ್ಥೆಗಳು ಉದ್ದೇಶಗಳು, ಗುಣಮಟ್ಟದ ಪರಿಕರಗಳನ್ನು, ಉತ್ಪಾದನಾ ತಂತ್ರಜ್ಞಾನಗಳನ್ನು, ಸಂಸ್ಕರಣೆ, ಮಾರುಕಟ್ಟೆ ಇತ್ಯಾದಿಗಳನ್ನು ತಮ್ಮ ಸದಸ್ಯ ರೈತರಿಗೆ ಹೊದಗಿಸುವ ಮುಖಾಂತರ ಆರ್ಥಿಕ ಮತ್ತು ಸಾಮಾಜಿಕ ಮಟ್ಟವನ್ನು ಹೆಚ್ಚಿಸಲು ಪೂರಕವಾಗಿರುವಂತ ಉದ್ದೇಶಗಳನ್ನು ಹೊಂದಿರಬೇಕು ಎಂದು ಮನವರಿಕೆ ಮಾಡಿಕೂಟ್ಟರು.

ಕೊನೆಯಲ್ಲಿ ಶ್ರೀಮತಿ ಸರಸ್ವತಿಯವರು, ರೈತರನ್ನು ಕೇಳಿದರು, ನಿಮ್ಮ ನಿರ್ಧಾರವೇನು? ನೀವು ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸಲು ಬಯಸುವಿರಾ ಅಥವಾ ಇಲ್ಲವೇ?

ಸಭೆಯಲ್ಲಿ ಬಾಗವಹಿಸಿದ್ದ 55 ರೈತರಲ್ಲಿ, ಸುಮಾರು 30 ರೈತರು ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸಲು ಒಪ್ಪಿಕೊಂಡರು ಮತ್ತು ಉಳಿದ ರೈತರು ಯೋಚಿಸಲು ಸ್ವಲ್ಪ ಸಮಯ ಬೇಕು ಎಂದು ತಿಳಿಸಿದರು. ನಂತರ ಶ್ರೀಮತಿ ಸರಸ್ವತಿ, ರೈತ ಉತ್ಪಾದಕರ ಸಂಸ್ಥೆಗಳನ್ನು ರೂಪಿಸಲು ಸಿದ್ಧರಿರುವ ರೈತರಿಗೆ, ಎಫ್.ಪಿ.ಒ ಎಂದರೇನು, ಎಫ್.ಪಿ.ಒ.ನ ಪ್ರಮುಖ ಲಕ್ಷಣಗಳು ಮತ್ತು ಎಫ್.ಪಿ.ಒ.ಗಳಲ್ಲಿ ಸದಸ್ಯತ್ವ ಕುರಿತು ಚರ್ಚಿಸಲು ಮತ್ತೆ ಭೇಟಿಯಾಗೋಣ ಎಂದು ಸಲಹೆ ನೀಡಿ ಧನ್ಯವಾದಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ಉತ್ಸಾಹಭರಿತ ರೈತರು ಎಫ್.ಪಿ.ಒ ರಚಿಸಲು ಮುಂದೆ ಬಂದರು ಮತ್ತು ಇತರೆ ರೈತರು ಎಫ್.ಪಿ.ಒ ಸದಸ್ಯರಾಗಿ ಸೇರಲು ಪ್ರೇರೇಪಿಸಿದರು. ವಿಕಾಸನ ಸಂಸ್ಥೆಯ ಬೆಂಬಲದೊಂದಿಗೆ, ಅವರು ಬೇರೆ ಬೇರೆ ಸ್ಥಳಗಳಲ್ಲಿ ಜಾಗೃತಿ ಸಭೆಗಳನ್ನು ಏರ್ಪಡಿಸಿದರು ಮತ್ತು ಈ ಕೆಳಗಿನ ಕರಪತ್ರಗಳನ್ನು ರೈತರಿಗೆ ವಿತರಿಸಿದರು.

ಸಹ ರೈತರಿಂದ ಪ್ರೇರಿತರಾದ ಶ್ಯಾಮ್ ಕೂಡ ಎಫ್‌ಪಿಒಗೆ ಸೇರಿದರು

# ರೈತ ಉತ್ಪಾದಕರ ಸಂಸ್ಥೆಯನ್ನು ಸ್ಥಾಪಿಸಲು ರೈತ ಸಹೋದರರಿಗೆ ಮತ್ತು ಸಹೋದರಿಯರಿಗೆ ಒಂದು ಮನವಿ

**ಹಿನ್ನೆಲೆ**

ಕೃಷಿಯ ಪ್ರತಿಯೊಂದು ಹಂತದಲ್ಲೂ ರೈತರು ಅನೇಕ ತೊಂದರೆಗಳನ್ನು ಎದುರಿಸುತ್ತಾರೆ ಎಂಬುದು ಸಾಮಾನ್ಯವಾಗಿ ತಿಳಿದ ವಿಷಯ. ಈ ತೊಂದರೆಗಳಲ್ಲಿ, ಸುಧಾರಿತ ತಂತ್ರಜ್ಞಾನದ ಅಸಮರ್ಪರ್ಕ ಲಭ್ಯತೆ ಮತ್ತು ಬಳಸುವಿಕೆ, ಅಸರ್ಮಪಕ ಸಂಸ್ಕರಣೆ, ಮೌಲ್ಯವರ್ಧನೆ ಮತ್ತು ಶೇಖರಣಾ ಸೌಲಭ್ಯಗಳು ಇಲ್ಲದಿರುವುದು, ಕೃಷಿ ವೆಚ್ಚದಲ್ಲಿ ಹೆಚ್ಚಳ, ರೈತರ ಉತ್ಪನ್ನಗಳಿಗೆ ನ್ಯಾಯಯೊಚಿತ ಬೆಲೆ ದೊರೆಯದೆ ಇರುವುದು, ಯುವಕರಲ್ಲಿ ಕೃಷಿಯಲ್ಲಿ ತೊಡಗಿಸಿಕೊಳ್ಳಲು ಆದ್ಯತೆ ಮತ್ತು ಆಸಕ್ತಿ ಇಲ್ಲದಿರುವುದು. ಈ ಕಾರಣಗಳಿಂದಾಗಿ ಉತ್ಪಾದಕತೆ ಕುಂಠಿತಗೊಂಡು, ಉತ್ಪಾದನೆ ಕಡಿಮೆಯಾಗುತ್ತಿದೆ. ಇವುಗಳ ಜೊತೆಗೆ ಮಾರುಕಟ್ಟೆಯಲ್ಲಿನ ಅಸಮರ್ಪರ್ಕತೆಯಿಂದ ಗ್ರಾಹಕರು ಕೊಡುವ ಬೆಲೆಯಲ್ಲಿ ರೈತರಿಗೆ ಸಿಗುವ ಪಾಲು ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ.

ಮತ್ತೊಂದೆಡೆ, ಗ್ರಾಹಕ ಮಟ್ಟದಲ್ಲಿ (ಬೆಲೆಗಳು ತೀವ್ರವಾಗಿ ಏರಿಕೆಯಾಗುತ್ತಿವೆ) ಎಲ್ಲಾ ಆಹಾರ ಮತ್ತು ಕೃಷಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚುತ್ತಿದ್ದು ಅಲ್ಲದೆ ಉತ್ತಮ ಗುಣಮಟ್ಟದ ಸುರಕ್ಷಿತ ಉತ್ಪನ್ನಗಳಿಗೆ ಬೇಡಿಕೆ ತೀವ್ರವಾಗಿ ಏರಿಕೆಯಾಗುತ್ತಿದೆ.

ಇಂತಹ ಅಡೆತಡೆಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಿಕೊಂಡು, ಕೃಷಿ ಕ್ಷೇತ್ರದಲ್ಲಿ ಇರುವ ಅವಕಾಶಗಳನ್ನು ತಮ್ಮದಾಗಿಸಿಕೊಳ್ಳಲ್ಲು ರೈತರು ಸಾಮೂಹಿಕವಾಗಿ ಅನೇಕ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗುತ್ತದೆ.

**ರೈತ ಉತ್ಪಾದಕರ ಸಂಸ್ಥೆಗಳು (ಎಫ್.ಪಿ.ಒ.ಗಳು)**

ಮೇಲಿನ ಹಿನ್ನೆಲೆಯಲ್ಲಿ, ರೈತ ಉತ್ಪಾದಕರ ಸಂಸ್ಥೆಗಳನ್ನು (ಎಫ್.ಪಿ.ಒ) ಉತ್ತೇಜಿಸುವ ಅವಶ್ಯಕತೆಯಿದೆ. ರೈತರನ್ನು ಒಟ್ಟಾಗಿಸಲು ರೈತ ಉತ್ಪಾದಕರ ಸಂಸ್ಥೆಗಳು ಅತ್ಯಂತ ಪರಿಣಾಮಕಾರಿ ಸಾಂಸ್ಥಿಕ ಸಂಸ್ಥೆಗಳಾಗಿವೆ. ಈ ಸಂಸ್ಥೆಗಳು ಕೃಷಿಗೆ ಸಂಭಂದಿಸಿದ ಚಟುವಟಿಕೆಗಳಾದ ಸಂಸ್ಕರಣೆ, ಮೌಲ್ಯವರ್ಧನೆ, ಸಂಗ್ರಹಣೆ, ಮಾರಾಟ, ಹಣಕಾಸಿನ ಸೇವೆ, ಪರಿಕರಗಳ ಪೂರೈಕೆ, ಬೀತ್ತನೆ ಬೀಜ ಉತ್ಪಾದನೆ ಮುಂತಾದ ವಿಭಿನ್ನ ಚಟುವಟಿಕೆಗಳನ್ನು ಒಟ್ಟಾಗಿ ತೆಗೆದುಕೊಳ್ಳಲು ರೈತ ಉತ್ಪಾದಕ ಸಂಸ್ಥೆಗಳು ಉತ್ತಮ ಸಾಂಸ್ಥಿಕ ಮಾದರಿಗಳಾಗಿವೆ.

ರೈತ ಉತ್ಪಾದಕರ ಸಂಸ್ಥೆಗಳು ಸ್ವಾಯತ್ತ ಉದ್ಯಮಗಳಾಗಿವೆ, ರೈತ ಉತ್ಪಾದಕರ ಸಂಸ್ಥೆಗಳಲ್ಲಿ ನಿಮ್ಮ ಪ್ರದೇಶದ ರೈತ ಉತ್ಪಾದಕರು/ಪ್ರಾಥಮಿಕ ಉತ್ಪಾದಕರು ಮಾತ್ರ ಸದಸ್ಯರಾಗಬಹುದು. ಹೀಗಾಗಿ, ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಸದಸ್ಯತ್ವವು ಸ್ವಯಂಪ್ರೇರಣೆಯಿಂದ ಬಂದ ರೈತರಿಗೆ ಮಾತ್ರ ತೆರೆದಿರುತ್ತವೆ, ಸದಸ್ಯರು ಮಾತ್ರ ರೈತ ಉತ್ಪಾದಕರ ಸಂಸ್ಥೆಗಳ ಮಾಲಿಕರಗಿರುತ್ತಾರೆ ಮತ್ತು ಸದಸ್ಯರೆ ನಿರ್ವಹಿಸಿ–ನಿಯಂತ್ರಿಸುವ ಕಾನೂನಾತ್ಮಕ ಸಂಸ್ಥೆಗಳಾಗಿ ಮನ್ನಣೆಯನ್ನು ಹೊಂದಿರುತ್ತವೆ.

**ರೈತರಿಗೆ ರೈತ ಉತ್ಪಾದಕರ ಸಂಸ್ಥೆಗಳಿಂದ ಸಿಗುವ ಲಾಭಗಳು**

1) ತಾಂತ್ರಿಕ ಮಾಹಿತಿ ಮತ್ತು ಆಧುನಿಕ ತಾಂತ್ರಿಕತೆಗಳನ್ನು ಅಳವಡಿಸಿಕೊಳ್ಳಲು ಮಾರ್ಗದರ್ಶನ.
2) ಅವಶ್ಯವಿರುವ ಪರಿಕರಗಳನ್ನು ಸರಿಯಾದ ವೇಳೆಗೆ ಸ್ಪರ್ಧಾತ್ಮಕ ಬೆಲೆಯಲ್ಲಿ ಸರಬರಾಜು.
3) ಉತ್ಪನ್ನಗಳನ್ನು ಕ್ರೋಢಿಕರಿಸಿ, ಮೌಲ್ಯವರ್ಧನೆ ಮಾಡಿ ಮಧ್ಯವರ್ತಿಗಳನ್ನು ತಪ್ಪಿಸಿ ಲಾಭದಾಯಕ ಬೆಲೆಗೆ ನೇರ ಮಾರಾಟ.
4) ಕಂಪನಿಯೊಂದಿಗೆ ವ್ಯವಹರಿಸಿದ ಮೊತ್ತಕ್ಕೆ ಅನುಗುಣವಾಗಿ, ವಾರ್ಷಿಕ ಸಭೆಯಲ್ಲಿ ತೀರ್ಮಾನಿಸಿದಂತೆ ಷೇರುದಾರರಿಗೆ/ಸದಸ್ಯರಿಗೆ ಪ್ರೋತ್ಸಾಹಕ ಮತ್ತು ಸಾಮಾನ್ಯ ಲಾಭಾಂಶದ ಹಂಚಿಕೆ.
5) ವಿವಿಧ ಇಲಾಖೆಗಳಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ರೈತ ಉತ್ಪಾದಕರ ಕಂಪನಿಯ ಮುಖಾಂತರ ಪಡೆಯಲು ಹೆಚ್ಚಿನ ಅವಕಾಶ.
6) ಸಕಾಲದಲ್ಲಿ ಅದರಲ್ಲೂ ಮುಖ್ಯವಾಗಿ ಸಣ್ಣ ಮತ್ತು ಅತಿಸಣ್ಣ ರೈತರಿಗೆ ಅಗತ್ಯ ಕೃಷಿ ಉಪಕರಣಗಳ ಸೇವೆ.
7) ವಿವಿಧ ಅಭಿವೃದ್ಧಿ ಇಲಾಖೆಗಳಲ್ಲಿ ರೈತ ಉತ್ಪಾದಕರ ಸಂಸ್ಥೆಗಳಿಗೆಂದೇ ಲಭ್ಯವಿರುವ ಆರ್ಥಿಕ ನೆರವನ್ನು ಪಡೆದು ಮೂಲಭೂತ ಸೌಕರ್ಯಗಳನ್ನು ರಚಿಸಿ ಅವುಗಳ ಸೇವೆಗಳನ್ನು ಸದಸ್ಯ ರೈತರಿಗೆ ಒದಗಿಸುವುದು.

ರೈತ ಉತ್ಪಾದಕ ಸಂಸ್ಥೆಗಳಲ್ಲಿ ಸದಸ್ಯತ್ವವನ್ನು ಪಡೆದ ನಂತರ, ಸದಸ್ಯರು ನಿಯಮಿತವಾಗಿ ಸಂಸ್ಥೆಯ ಸಾಮಾನ್ಯ ಸಭೆ (ವರ್ಷಕ್ಕೊಮ್ಮೆ ನಡೆಯಲಿದೆ), ಯಾವುದೇ ತರಬೇತಿ/ಜಾಗೃತಿ ಸಭೆಗಳು ಮತ್ತು ಸಂಸ್ಥೆಯ ಎಲ್ಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಬಾಗವಹಿಸಬೇಕು. ಸದಸ್ಯ ರೈತರು, ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಹೆಚ್ಚು ವಹಿವಾಟು ನಡೆಸಿ–ಪ್ರೋತ್ಸಾಹಿಸುವುದರ ಮೂಲಕ ಸಂಸ್ಥೆಗಳನ್ನು ಬೆಳೆಸುವುದರ ಜೊತೆಗೆ ನೀವು ಸಹ ಆರ್ಥಿಕವಾಗಿ ಮತ್ತು ಸಾಮಾಜಿಕವಾಗಿ ಅಭಿವೃದ್ಧಿ ಹೊಂದಬಹುದು.

**ಮುಂದಿನ ದಾರಿ**

ರೈತ ಸಹೋದರ ಮತ್ತು ಸಹೋದರಿಯರು, ಮೇಲಿನದನ್ನು ಗಮನದಲ್ಲಿಟ್ಟುಕೊಂಡು, ಷೇರು ಬಂಡವಾಳವನ್ನು ಪಾವತಿಸುವ ಮೂಲಕ ನಿಮ್ಮ ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಸದಸ್ಯರಾಗಿ, ಮಾಲಿಕರಾಗಿ. ರೈತ ಉತ್ಪಾದಕರ ಸಂಸ್ಥೆಗಳ ವ್ಯವಹಾರಗಳಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಿ, ನಿಮ್ಮ ಕೃಷಿಯು ಲಾಭದಾಯಕವಾಗಿರುವಂತೆ ಮಾಡಿಕೊಂಡು ನಿಮ್ಮ ಕುಟುಂಬದ ಆರ್ಥಿಕತೆಯನ್ನು ಬಲಪಡಿಸಿಕೊಳ್ಳಿ.

2

# ರೈತ ಉತ್ಪಾದಕರ ಸಂಸ್ಥೆಗಳು – ಅರ್ಥ, ಮೌಲ್ಯಗಳು ಮತ್ತು ತತ್ವಗಳು

**ಅಧಿವೇಶನದ ಉದ್ದೇಶ:**



**ರೈತ ಉತ್ಪಾದಕರ ಸಂಸ್ಥೆಗಳ ಅರ್ಥ ಮತ್ತು ಪ್ರಮುಖ ವೈಶಿಷ್ಟತೆಗಳ ಬಗ್ಗೆ ತಿಳಿದುಕೊಳ್ಳುವುದು.**

**ವಿಷಯ ಸೂಚಿ:**

1. ರೈತ ಉತ್ಪಾದಕರ ಸಂಸ್ಥೆಗಳ ಅರ್ಥ
2. ರೈತ ಉತ್ಪಾದಕರ ಸಂಸ್ಥೆಗಳ ಮೌಲ್ಯಗಳು ಮತ್ತು ತತ್ವಗಳು

ವಿಕಾಸಾನ ಸಂಸ್ಥೆಯು ತನ್ನ ತಾಲ್ಲೂಕಿನ ಕಚೇರಿಯಲ್ಲಿ ಎಲ್ಲಾ ಹಳ್ಳಿಗಳ ಕೆಲವು ಆಸಕ್ತ ರೈತರಿಗಾಗಿ ರೈತ ಉತ್ಪಾದಕರ ಸಂಸ್ಥೆಗಳ ರಚನೆ ಮತ್ತು ಉದ್ಧೇಶಗಳನ್ನು ವಿವರಿಸಲು ಕಾರ್ಯಕ್ರಮವನ್ನು ಆಯೋಜಿಸಿತು. ಈ ಕಾರ್ಯಕ್ರಮದಲ್ಲಿ ನರಸಾಪುರದ ರಾಮಯ್ಯ ಮತ್ತು ಸುದರ್ಶನ್ ಸಹ ಭಾಗವಹಿಸಿದ್ದರು. ಅವರಿಗೆ ರೈತ ಉತ್ಪಾದಕರ ಸಂಸ್ಥೆಗಳ ಬಗ್ಗೆ ಅನುಮಾನಗಳು ಇದ್ದರು ಸಹ, ಇತರೆ ಹಳ್ಳಿಗಳ ರೈತರು ಏನು ಹೇಳುತ್ತಾರೆ ಮತ್ತು ಸಭೆಯಲ್ಲಿ ನಡೆಯುವ ಚರ್ಚೆಗಳಿಂದ ಕಲಿಯಲು ಉತ್ಸುಕರಾಗಿದ್ದರು.

ವಿಕಾಸಾನ ಸಂಸ್ಥೆಯ ಮಾರ್ಗದರ್ಶಕರು ಗ್ರಾಮ ಮಟ್ಟದ ಜಾಗೃತಿ ಸಭೆಗಳಲ್ಲಿ ಹೊರಬಂದ ಚರ್ಚೆಗಳ ವಿಷಯಗಳ ಮತ್ತು ಆಯಾಮಗಳ ಕುರಿತ ಚರ್ಚ್ಗೆ ಪ್ರಾರಂಭಿಸಿದರು. ಅವುಗಳಲ್ಲಿ ಮುಖ್ಯವಾಗಿ ಕೃಷಿ ಕ್ಷೇತ್ರದಲಿ ರೈತರು ಎದುರಿಸುತ್ತಿರುವ ಸಮಸ್ಯೆಗಳು ಮತ್ತು ಅವುಗಳ ನಿವಾರಣೆಗೆ ಇರುವ ಅವಕಾಶಗಳನ್ನು ಉಪಯೋಗಿಸಿಕೊಳ್ಳಲು ಸಾಮೂಹಿಕ ಕ್ರಿಯೆಯ ಅಗತ್ಯತೆ ಮತ್ತು ವಿಭಿನ್ನ ಚಟುವಟಿಕೆಗಳನ್ನು ಒಟ್ಟಾಗಿ ತೆಗೆದುಕೊಳ್ಳಲು ಎಫ್.ಪಿ.ಓ ಒಂದು ಕಾನೂನುಬದ್ದ ಘಟಕವಾಗಿರುತ್ತದೆ ಎಂದು ಒತ್ತಿ ಹೇಳಿದರು. ನಂತರ ಅವರು ಎಫ್.ಪಿ.ಓ.ಗಳ ಅರ್ಥ ಮತ್ತು ಪ್ರಮುಖ ಲಕ್ಷಣಗಳನ್ನು ಚರ್ಚಿಸಿದರು. ಮಾರ್ಗದರ್ಶಕರುಗಳು ಅದೇ ಜಿಲ್ಲೆಯ ಮತ್ತೊಂದು ತಾಲ್ಲೂಕಿನಲ್ಲಿ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ ಭೂಮಾಥ ರೈತ ಉತ್ಪಾದಕರ ಯಶೋಗಾಥೆಯನ್ನು ವಿವರಿಸಿದರು.

**ಭೂಮಾಥ ರೈತ ಉತ್ಪಾದಕರ ಸಂಸ್ಥೆ**

ಭೂಮಾಥ ರೈತ ಉತ್ಪಾದಕರ ಸಂಸ್ಥೆಯನ್ನು ಒಂಬತ್ತು ತಿಂಗಳ ಹಿಂದೆ ನೋಂದಾಯಿಸಲಾಗಿದೆ. ಇದರ ಪ್ರಧಾನ ನೋಂದಾಯಿತ ಕಚೇರಿಯು ತಾಲ್ಲೂಕಿನ ಕೇಂದ್ರದಲ್ಲಿದೆ. ಸುಮಾರು 500 ರೈತರು, ಹೆಚ್ಚಾಗಿ ಸಣ್ಣ ಮತ್ತು ಅತಿಸಣ್ಣ ರೈತರು ಭೂಮಾಥ ರೈತ ಉತ್ಪಾದಕರ ಸಂಸ್ಥೆಯಲ್ಲಿ ತಲಾ 1000 ರೂ. ಷೇರು ಮೊತ್ತವನ್ನು ನೀಡಿ ಸದಸ್ಯರಾಗಿದ್ದಾರೆ, ಭೂಮಾಥ ರೈತ ಉತ್ಪಾದಕರ ಮಾಲೀಕತ್ವವು

ಈ 500 ಸದಸ್ಯರೊಂದಿಗೆ ಇರುತ್ತದೆ. 500 ಸದಸ್ಯರಲ್ಲಿ, 400 ಸದಸ್ಯರು ತಮ್ಮ ಮೊದಲ ಸಾಮಾನ್ಯ ಸಭೆಯಲ್ಲಿ ಭಾಗವಹಿಸಿದರು, ಭೂಮಾಥ ರೈತ ಉತ್ಪಾದಕರ ಸಂಸ್ಥೆಯ ಆಡಳಿತ ಮಂಡಳಿಯ ನಿರ್ದೇಶಕರನ್ನು ಪ್ರಜಾಪ್ರಭುತ್ವದ ರೀತಿಯಲ್ಲಿ ಸಕ್ರಿಯವಾಗಿ ಒಮ್ಮತದಿಂದ ಆಯ್ಕೆ ಮಾಡಿದರು, ಸದಸ್ಯರು ಬೈಲಾ/ಎ.ಒ.ಎ/ಎಂ.ಒ.ಎ ಗಳನ್ನು ಚರ್ಚಿಸಿ ಅಂಗೀಕರಿಸಿದರು. ಇದಲ್ಲದೆ ಸಂಸ್ಥೆಯು ಷೆರುದಾರರಿಗೆ ಮುಂದಿನ ದಿನಗಳಲ್ಲಿ ನೀಡಲಾಗುವ ಅಗತ್ಯ ಸೇವೆಗಳಾದ ಪರಿಕರಗಳ ಪೂರೈಕೆ (ಬಿತ್ತನೆ ಬೀಜ, ರಸಗೊಬ್ಬರ, ಪರಿಸರ ಸ್ನೇಹಿ ಕೀಟನಾಷಕಗಳು, ಲಘು ಕೃಷಿ ಉಪಕರಣಗಳು ಇತ್ಯಾದಿ.), ತಾಂತ್ರಿಕ ಮಾಹಿತಿ, ಸದಸ್ಯರು ಬೆಳೆದ ಉತ್ಪನ್ನಗಳ ಕ್ರೋಢೀಕರಣ ಮಾಡಿ ಒಟ್ಟಾಗಿ ಮಾರಾಟಮಾಡುವ ಚಟುವಟಿಕೆಗಳಿಗೆ ಆದ್ಯತೆ ನೀಡಬೇಕೆಂದು ಒಮ್ಮತದ ತೀರ್ಮಾನವನ್ನು ತೆಗೆದುಕೂಂಡರು.

ವಾರ್ಷಿಕ ಸಭೆಯಲ್ಲಿ ಸದಸ್ಯರು ತಮ್ಮ ಸಂಸ್ಥೆಯ ದಿನನಿತ್ಯದ ಕಾರ್ಯ ಚಟುವಟಿಕೆಗಳನ್ನು ಅನುಷ್ಠಾನಗೂಳಿಸಿ ನಿರ್ವಹಿಸಲು ಮುಖ್ಯಕಾರ್ಯನಿರ್ವಹಣಾಧಿಕಾರಿಗಳನ್ನು ನೇಮಿಸಿಕೊಳ್ಳಲು ಸಂಸ್ಥೆಗೆ ಕಂಪನಿ ಕಾಯ್ದೆಯ ಪ್ರಕಾರ ನೆಮಿಸಬೇಕಾಗಿರುವ ಲೆಕ್ಕ ಪರಿಶೋದಕರನ್ನು ನೇಮಿಸಲು ಅನುಮೊದಿಸಿದರು, ಹಾಗೂ ಅವರು ತಮ್ಮ ಸಂಸ್ಥೆಯ ಕಚೇರಿಯಲ್ಲಿ–ಅಕೌಂಟಿಂಗ್ ಮತ್ತು ಕಂಪನಿ ಮಟ್ಟದಲ್ಲಿ ನಿರ್ವಹಿಸಬೇಕಾಗಿರುವ ದಾಖಲಾತಿಗಳು/ ಪುಸ್ತಕಗಳು, ಕಂಪ್ಯೂಟರ್, ದೂರವಾಣಿ ಮತ್ತು ಕೆಲವು ಪೀಠೋಪಕರಣಗಳನ್ನು ಖರೀದಿಸಲು ಅನುಮೋದನೆ ನೀಡಿದರು ಅಲ್ಲದೆ ಸಂಸ್ಥೆಯು ವ್ಯವಹಾರ ನಡೆಸಲು ಅಗತ್ಯವಿರುವ ವಿವಿಧ ಪರವಾನಗಿಗಳು ಹಾಗೂ ಕಂಪನಿಯ ಹೆಸರಿನಲ್ಲಿ ಪ್ಯಾನ್ (PAN) ಹಾಗೂ ಜಿ.ಎಸ್.ಟಿ. (GST) ಸಂಸ್ಥೆಯನ್ನು ಪಡೆಯುವಂತೆ ಸೂಚಿಸಲಾಯಿತು

## ರೈತ ಉತ್ಪಾದಕರ ಸಂಸ್ಥೆ (ಎಫ್‌ಪಿಒ) – ಅರ್ಥ

ಮೇಲಿನ ಪ್ರಕರಣವನ್ನು ಪ್ರಸ್ತುತಪಡಿಸಿದ ನಂತರ, ವಿಕಾಸ ಸಂಸ್ಥೆಯ ಪ್ರತಿನಿದಿಗಳು ರೈತರನ್ನು ಕೇಳಿದರು, ಭೂಮಾಥ ಎಫ್.ಪಿ.ಒ ಉದ್ದೇಶ ಏನು ಎಂದು ನೀವು ತಿಳಿದಿದ್ದೀರಿ?

ಮೇಲಿನ ಪ್ರಕರಣದಿಂದ, ಭೂಮಾಥ ರೈತ ಉತ್ಪಾದಕರ ಸಂಸ್ಥೆಯು (ಎಫ್‌ಪಿಒ) ಒಂದು ಔಪಚಾರಿಕ, ಕಾನೂನುಬದ್ದವಾಗಿ ನೋಂದಾಯಿತ ಸಂಸ್ಥೆಯಾಗಿದ್ದು, ಅದು ಸದಸ್ಯರ/ಪ್ರಾಥಮಿಕ ಉತ್ಪಾದಕರ ಒಡೆತನದಲ್ಲಿದೆ, ಸದಸ್ಯರಿಂದಲೆ ನಿಯಂತ್ರಿಸಲ್ಪಡುತ್ತಿದೆ ಮತ್ತು ನಿರ್ವಹಿಸುಲಾಗುತ್ತಿದೆ. ಎಫ್.ಪಿ.ಒ ಉದ್ದೇಶವು ಅದರ ಸದಸ್ಯರ ಸಾಮಾನ್ಯ ಅಗತ್ಯಗಳನ್ನು ಮುಖ್ಯವಾಗಿ ಕೃಷಿಗೆ ಸಂಬಂಧಿಸಿದ ಅಗತ್ಯಗಳನ್ನು ಪೂರೈಸುವುದಾಗಿದೆ.

ಸಭೆಯಲ್ಲಿ ಭಗವಹಿಸಿದ ಸದಸ್ಯರಿಂದ ಉತ್ತರಗಳನ್ನು ಪಡೆದ ನಂತರ ಮಾರ್ಗದರ್ಶಕರು ಎಫ್.ಪಿ.ಒ.ನ ಅರ್ಥವನ್ನು ಈ ಕೆಳಗಿನಂತೆ ಸಂಕ್ಷಿಪ್ತವಾಗಿ ತಿಳಿಸಿದರು.

ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಒ) ಎನ್ನುವುದು ಪ್ರಾಥಮಿಕ ಉತ್ಪಾದಕರ ಜಂಟಿ ಒಡೆತನದ ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸಲ್ಪಡುವ ಒಂದು ಸ್ವಾಯತ್ತ ಸಂಸ್ಥೆ. ಈ ಸಂಸ್ಥೆಯು ಸ್ವಯಿಚ್ಛೆಯಿಂದ ಒಗ್ಗೂಡಿದ ಪ್ರಾಥಮಿಕ ಉತ್ಪಾದಕರು ತಮ್ಮ ಸಾಮಾನ್ಯ ಆರ್ಥಿಕ ಅಗತ್ಯತೆಗಳನ್ನು ಪೂರೈಸಿಕೊಳ್ಳಲು ಸಂಸ್ಥೆಯ ಎಲ್ಲಾ ಸದಸ್ಯರಿಗೆ ಅಗತ್ಯವಿರುವ ಸೇವೆಗಳನ್ನು ಪೂರೈಸುವ ಮುಖಾಂತರ ಪರಸ್ಪರ ಲಾಭಕ್ಕಾಗಿ ಶ್ರಮಿಸುವ ಸಂಸ್ಥೆಯಾಗಿದೆ.


ಸಂಕ್ಷಿಪ್ತವಾಗಿ ಹೇಳುವುದಾದರೆ, ರೈತ ಉತ್ಪಾದಕರ ಸಂಸ್ಥೆಗಳ ವಿಶೇಷತೆಯನ್ನು ಅವರು ಈ ಕೆಳಗಿನಂತೆ ಉಲ್ಲೇಖಿಸಿದರು.

- ಸದಸ್ಯರೇ **ಮಾಲೀಕರು**
- ಸದಸ್ಯರೇ **ಬಳಕೆದಾರರು**
- ಸದಸ್ಯರೇ **ಆಡಳಿತದಾರರು/ನಿಯಂತ್ರಕರು**
- ಸದಸ್ಯರೇ **ಫಲಾನುಭವಿಗಳು**

## ರೈತ ಉತ್ಪಾದಕರ ಸಂಸ್ಥೆಯ (ಎಫ್‌ಪಿಒ) ಮೌಲ್ಯಗಳು ಮತ್ತು ತತ್ವಗಳು

ರಾಮಯ್ಯ ಮತ್ತು ಸುದರ್ಶನ್ ಭಗವಹಿಸಿದ ತರಬೇತಿಯು ಮುಂದುವರಿಯುತ್ತಿದೆ, ಮುಂದಿನದು ಬಹಳ ಮುಖ್ಯವಾದ ಅಧಿವೇಶನವಾಗಿದೆ, ಇದರಲ್ಲಿ ಸಹಕಾರಿ ಮೌಲ್ಯಗಳು ಮತ್ತು ಸಹಕಾರಿ ತತ್ವಗಳನ್ನು ವಿವರಿಸಲಾಗಿದೆ. ರೈತ ಉತ್ಪಾದಕರ ಸಂಸ್ಥೆಗಳನ್ನು ಸ್ಥಾಪಿಸಿದರೆ ಅವುಗಳು ಸಹಕಾರಿ ಮೌಲ್ಯಗಳು, ಸಹಕಾರಿ ತತ್ವಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಬೇಕಾಗುತ್ತದೆ.

ನಾವು ಈಗ ಸಹಕಾರಿ ಮೌಲ್ಯಗಳು ಮತ್ತು ಸಹಕಾರಿ ತತ್ವಗಳ ಬಗ್ಗೆ ಮುಂದಿನ ಅಧಿವೇಶನದಲ್ಲಿ ತಿಳಿದುಕೊಳ್ಳೋಣ.


ಸ್ವಸಹಾಯ
FPO
share certificate
ಸ್ವಯಂ ಜವಾಬ್ದಾರಿ
ಪ್ರಜಾಪ್ರಭುತ್ವ
ಸಹಕಾರಿ ಮೌಲ್ಯಗಳು
OUR FPO
ಷೇರು ಬಂಡವಾಳ
OUR FPO
ಸಮಾನತೆ
OUR FPO
ಒಗ್ಗಟ್ಟು

**ಸ್ವ–ಸಹಾಯ**
ನಾವು ರೈತ ಉತ್ಪಾದಕರ ಸಂಸ್ಥೆಯ ಸದಸ್ಯರಾಗಿ, ಒಟ್ಟಿಗೆ ಸೇರಿಕೊಂಡು – ನಮ್ಮ ಕುಟುಂಬ, ನಮ್ಮ ಹಳ್ಳಿ, ನಮ್ಮ ತಾಲೂಕ್ ಮತ್ತು ನಮ್ಮ ಸ್ಥಳೀಯ ಸಮುದಾಯ ಮಟ್ಟದಲ್ಲಿಯೂ ಸುದಾರಣೆಯನ್ನು ತರಲು ಪ್ರಯತ್ನಿಸುತ್ತೇವೆ.

**ಸ್ವಯಂ ಜವಾಬ್ದಾರಿ**
ಒಂದು ರೈತ ಉತ್ಪಾದಕರ ಸಂಸ್ಥೆಯಲ್ಲಿ, ತನ್ನ ಸದಸ್ಯರು ಅದರ ನೀತಿ–ನಿಯಮಗಳು (ಎ.ಒ.ಎ./ಎಂ.ಒ.ಎ.) – ಕಾನೂನುಗಳು ಮತ್ತು ವ್ಯವಹಾರ ನಿಯಮಗಳಲ್ಲಿ ನಿಗದಿಪಡಿಸಿದಂತೆ ಕನಿಷ್ಠ ಜವಾಬ್ದಾರಿಗಳನ್ನು ಪೂರೈಸಬೇಕು ಎಂದು ನಿರೀಕ್ಷಿಸುತ್ತದೆ. ಒಂದು ರೈತ ಉತ್ಪಾದಕರ ಸಂಸ್ಥೆಯು ಯಶಸ್ವಿಯಾಗಲು ಸದಸ್ಯರು ಅದರ ಚಟುವಟಿಕೆಗಳನ್ನು ಬೆಂಬಲಿಸುವ ಮೂಲಕ ಮತ್ತು ಅದರ ಸೇವೆಗಳನ್ನು ಬಳಸುವ ಮೂಲಕ ಸದಸ್ಯರ ಜವಾಬ್ದಾರಿಯನ್ನು ಪೂರೈಸಬೇಕಾಗಿರುತ್ತದೆ ಹಾಗೂ ಇತರೆ ಸದಸ್ಯರೂ ರೈತ ಉತ್ಪಾದಕರ ಸಂಸ್ಥೆಯ ವ್ಯವಹಾರವನ್ನು ಬೆಂಬಲಿಸುವಂತೆ ಸದಸ್ಯರು ಪ್ರೋತ್ಸಾಹಿಸಬೇಕು.

**ಪ್ರಜಾಪ್ರಭುತ್ವ**
ಸಾಮಾನ್ಯವಾಗಿ ಯಾವುದೇ ವ್ಯಾಪಾರ ಸಂಸ್ಥೆಯಲ್ಲಿ, ಮತದಾನದ ಹಕ್ಕು ಸದಸ್ಯರ ಹೂಡಿಕೆಯ ಪ್ರಮಾಣವನ್ನು ಆಧರಿಸಿರುತ್ತದೆ. ಆದರೆ ನಮ್ಮ ರೈತ ಉತ್ಪಾದಕರ ಸಂಸ್ಥೆಯಲ್ಲಿ ಎಲ್ಲಾ ಸದಸ್ಯರು ಸಮಾನರು, ಒಬ್ಬ ಸದಸ್ಯನಿಗೆ ಒಂದು ಮತ ಮಾತ್ರ. ರೈತ ಉತ್ಪಾದಕರ ಸಂಸ್ಥೆಯಲ್ಲಿ ಮತದಾನದ ಹಕ್ಕು ಯಾವುದೇ ರೀತಿಯ ಸದಸ್ಯರ ಷೇರುಗಳ ಮೊತ್ತವನ್ನು ಅವಲಂಬಿಸಿರುವುದಿಲ್ಲ. ಷೇರುಗಳನ್ನು ಮಾರಾಟ ಮಾಡಲು ಬರುವುದಿಲ್ಲ.

**ಸಮಾನತೆ**
ನಮ್ಮ ಎಫ್.ಪಿ.ಒ.ದಲ್ಲಿ ವ್ಯವಹಾರದಲ್ಲಿ ತೊಡಗಿಸಿಕೊಳ್ಳಲು ಎಲ್ಲಾ ಸದಸ್ಯರಿಗೆ ಸಮಾನ ಅವಕಾಶವಿದೆ. ರೈತ ಉತ್ಪಾದಕರ ಸಂಸ್ಥೆಯಲ್ಲಿ ಎಲ್ಲಾ ಸದಸ್ಯರು ಸಮಾನರು ಮತ್ತು ತಮಗೆ ಬೇಕಾದ ಪರಿಕರಗಳನ್ನು ನ್ಯಾಯಯುತ ಬೆಲೆಗೆ ಖರೀದಿಸಲು ಮತ್ತು ಬೆಳೆದ ಉತ್ಪನ್ನಗಳನ್ನು ರೈತ ಉತ್ಪಾದಕರ ಸಂಸ್ಥೆಯಲಿ ಮಾರಾಟ ಮಾಡಲು ಸಮಾನ ಅವಕಾಶವಿರುತ್ತದೆ.

**ಷೇರು ಬಂಡವಾಳ (ಇಕ್ವಿಟಿ)**
ಸಂಸ್ಥೆಯನ್ನು ನಡೆಸಲು ಅಗತ್ಯವಾದ ಸಂಪನ್ಮೂಲಗಳನ್ನು ನಾವು ನಗದು ಅಥವಾ ವಸ್ತುಗಳ ರೂಪದಲ್ಲಿ ಎಲ್ಲರೂ ಸಮಾನವಾದ ಪ್ರಮಾಣದಲ್ಲಿ ನೀಡುತ್ತೇವೆ.

**ಒಗ್ಗಟ್ಟು**
ರೈತರೆಲ್ಲರು ಒಟ್ಟಾಗಿ ರೈತ ಉತ್ಪಾದಕರ ಸಂಸ್ಥೆಯಲ್ಲಿ ಸದಸ್ಯರಾಗಿರುವುದರಿಂದ, ನಾವು ಬಲಶಾಲಿಯಾಗಿದ್ದೇವೆ, ಆದ್ದರಿಂದ ನಮ್ಮ ಎಫ್.ಪಿ.ಒ ಬಲಗೊಳ್ಳಲು ಸಹಾಯ ಮಾಡಲು ನಾವು ಒಟ್ಟಾಗಿ ಸೇರುತ್ತೇವೆ ಮತ್ತು ಎಲ್ಲಾ ಸದಸ್ಯರು ರೈತ ಉತ್ಪಾದಕರ ಸಂಸ್ಥೆಯಲ್ಲಿ ವ್ಯವಹಾರ ಮಾಡುತ್ತೇವೆ.

ಈ ಹಿಂದಿನ ತತ್ವಗಳ ಆಧಾರದ ಮೇಲೆ ನಮ್ಮ ಅಪ್ಪೇಶಿಕೊಳ್ಳುವಿಕೆಯ ಅನೂಸಾರವಾಗಿ ನಮ್ಮ ಸಂಸ್ಥೆ ಯಾವ ಮಟ್ಟದಲ್ಲಿದೆ ಎಂದು ನಿರ್ಣಯಿಸೋಣ

| ಮೌಲ್ಯಗಳು | ನೀವು ಅಳವಡಿಸಿಕೊಂಡಿದ್ದೀರ? ಹೌದು / ಇಲ್ಲ / ಗೊತ್ತಿಲ್ಲ | ನೀವು ಗುರುತಿಸಬಹುದಾದ ಅಭ್ಯಾಸಗಳು ಯಾವುವು |
|---|---|---|
| ಸ್ವ–ಸಹಾಯ | | |
| ಸ್ವಯಂ ಜವಾಬ್ದಾರಿ | | |
| ಪ್ರಜಾಪ್ರಭುತ್ವ | | |
| ಸಮಾನತೆ | | |
| ಷೇರು ಬಂಡವಾಳ (ಇಕ್ವಿಟಿ) | | |
| ಒಗ್ಗಟ್ಟು | | |

**ಸಹಕಾರಿ ತತ್ವಗಳು**

ರೈತ ಉತ್ಪಾದಕರ ಸಂಸ್ಥೆಗಳು, ಸಹಕಾರಿ ಸಂಸ್ಥೆಗಳಾಗಿರಲಿ ಅಥವಾ ಕಂಪನಿಗಳಾಗಿರಲಿ, ಕೆಲವು ಸಹಕಾರಿ ತತ್ವಗಳಿಗೆ ಬದ್ಧವಾಗಿರಬೇಕು, ಇವುಗಳನ್ನು ಪ್ರಪಂಚದಾದ್ಯಂತ ಉತ್ತಮ ಸಂಸ್ಥೆಗಳಲ್ಲಿ ಅಳವಡಿಸಿಕೊಳ್ಳಲಾಗಿದೆ. ಅನೇಕ ಸಹಕಾರಿ ಕಾಯಿದೆಗಳಡಿಯಲ್ಲಿ ಸಹಕಾರಿ ಸಂಸ್ಥೆಗಳಿಗೆ ಸಹಕಾರಿ ತತ್ವಗಳನ್ನು ಅಳವಡಿಸಿಕೊಂಡು ಕಾರ್ಯನಿರ್ವಹಿಸಬೇಕು ಎಂಬ ಷರತ್ತುಗಳನ್ನು ವಿಧಿಸಲಾಗಿರುತ್ತದೆ.

**ಈ ತತ್ವಗಳನ್ನು ಕೆಳಗೆ ಚಿತ್ರಿಸಲಾಗಿದೆ.**

### ತತ್ವ 1: ಸ್ವಯಂಪ್ರೇರಿತ ಮತ್ತು ಮುಕ್ತ ಸದಸ್ಯತ್ವ

ಸಹಕಾರಿ ಸಂಸ್ಥೆಗಳು ಸ್ವಯಂಪ್ರೇರಿತ ಸಂಸ್ಥೆಗಳಾಗಿದ್ದು, ತಮ್ಮ ಸೇವೆಗಳನ್ನು ಬಳಸಲು ಸಮರ್ಥರಾಗಿರುವ ಮತ್ತು ಲಿಂಗ, ಸಾಮಾಜಿಕ, ಜನಾಂಗೀಯ, ರಾಜಕೀಯ ಅಥವಾ ಧಾರ್ಮಿಕ ತಾರತಮ್ಯವಿಲ್ಲದೆ ಸದಸ್ಯತ್ವದ ಜವಾಬ್ದಾರಿಗಳನ್ನು ಸ್ವೀಕರಿಸಲು ಸಿದ್ಧರಿರುವ ಎಲ್ಲ ವ್ಯಕ್ತಿಗಳಿಗೆ ಸದಸ್ಯತ್ವ ಮುಕ್ತವಾಗಿದೆ.



### ತತ್ವ 2: ಪ್ರಜಾಸತ್ತಾತ್ಮಕವಾಗಿ ಸದಸ್ಯ ನಿಯಂತ್ರಣ

ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಂದ ನಿಯಂತ್ರಿಸಲ್ಪಡುವ ಪ್ರಜಾಸತ್ತಾತ್ಮಕ ತಳಹದಿಯಲ್ಲಿ ಸ್ಥಾಪಿತವಾದ ಸಂಸ್ಥೆಗಳಾಗಿದ್ದು, ಅವರು ತಮ್ಮ ನೀತಿಗಳನ್ನು ರೂಪಿಸುವಲ್ಲಿ ಮತ್ತು ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ. ಆಡಳಿತ ಮಂಡಳಿಯ ಸದಸ್ಯರಿಗೆ ಜವಾಬ್ದಾರರಾಗಿರುತ್ತಾರೆ. ಪ್ರಾಥಮಿಕ ಸಹಕಾರಿ ಸಂಸ್ಥೆಗಳಲ್ಲಿ, ಸದಸ್ಯರಿಗೆ ಸಮಾನ ಮತದಾನದ ಹಕ್ಕುಗಳಿವೆ (ಒಬ್ಬ ಸದಸ್ಯ, ಒಂದು ಮತ) ಮತ್ತು ಇತರ ಹಂತಗಳಲ್ಲಿಯು ಸಹ ಸಹಕಾರಿ ಸಂಸ್ಥೆಗಳು ಪ್ರಜಾಸತ್ತಾತ್ಮಕ ತಳಹದಿಯಲ್ಲಿ ರಚಿಸಲಾಗಿರುತ್ತವೆ.



## ತತ್ವ 3: ಸದಸ್ಯರ ಆರ್ಥಿಕ ಭಾಗವಹಿಸುವಿಕೆ




ಪ್ರತಿಯೊಬ್ಬ ಸದಸ್ಯರು ತಮ್ಮ ಸಹಕಾರ ಸಂಸ್ಥೆಗೆ ಬಂಡವಾಳಕ್ಕೆ ಸಮವಾಗಿ ನೀಡುತ್ತಾರೆ ಮತ್ತು ಪ್ರಜಾಸತ್ತಾತ್ಮಕವಾಗಿ ನಿಯಂತ್ರಿಸುತ್ತಾರೆ. ಆ ಬಂಡವಾಳದ ಕನಿಷ್ಠ ಭಾಗವು ಸಾಮಾನ್ಯವಾಗಿ ಸಹಕಾರ ಸಂಘದ ಸಾಮಾನ್ಯ ಆಸ್ತಿಯಾಗಿರುತ್ತದೆ. ಸಹಕಾರ ಸಂಸ್ಥೆಗಳಲ್ಲಿ ಸದಸ್ಯರು ಸದಸ್ಯತ್ವ ಪಡೆಯಲು ಕಡ್ಡಾಯವಾಗಿ ಷೇರು ಬಂಡವಾಳವದಲ್ಲಿ ಹೂಡಲೇಬೇಕಾಗಿರುತ್ತದೆ, ಆ ಬಂಡವಾಳವು ಸೀಮಿತವಾಗಿ ಲಾಬಾಂಶವನ್ನು ಪಡೆಯಲು ಪ್ರತಿಯೋಬ್ಬ ಸದಸ್ಯರು ಅರ್ಹರಾಗಿರುತ್ತಾರೆ. ಸದಸ್ಯರು ಈ ಕೆಳಗಿನ ಯಾವುದೇ ಉದ್ದೇಶಗಳಿಗಾಗಿ ಹೆಚ್ಚುವರಿ ಲಾಭಂಶವನ್ನು ಹೂಡಿಕೆ ಮಾಡಬಹುದು. ತಮ್ಮ ಸಹಕಾರ ಸಂಸ್ಥೆಯನ್ನು ಅಭಿವೃದ್ಧಿಪಡಿಸುವುದಕ್ಕೆ, ಮೀಸಲು ನಿಧಿಯನ್ನು ಸ್ಥಾಪಿಸಲು ಸದಸ್ಯರು ಕನಿಷ್ಠ ಲಾಭಾಂಶವನ್ನು ನೀಡಬಹುದು. ಸದಸ್ಯರು ತಮ್ಮ ಸಹಕಾರಿ ಸಂಸ್ಥೆಗಳಿಂದ ಅವರ ವಹಿವಾಟಿಗೆ ಅನುಗುಣವಾಗಿ ಅನುಮೋದಿಸಲ್ಪಟ್ಟ ಲಾಬಾಂಶ ಪಡೆಯಲು ಅರ್ಹರಾಗಿರುತ್ತಾರೆ.

## ತತ್ವ 4: ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ



ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಂದ ನಿಯಂತ್ರಿಸಲ್ಪಡುವ ಸ್ವಾಯತ್ತ, ಸ್ವ-ಸಹಾಯ ಸಂಸ್ಥೆಗಳು. ಸಹಕಾರಿ ಸಂಸ್ಥೆಗಳು, ಸರ್ಕಾರಗಳು ಸೇರಿದಂತೆ ಇತರೆ ಸಂಸ್ಥೆಗಳೊಂದಿಗೆ ಒಪ್ಪಂದ ಮಾಡಿಕೊಂಡರೆ ಅಥವಾ ಬಾಹ್ಯ ಮೂಲಗಳಿಂದ ಬಂಡವಾಳವನ್ನು ಸಂಗ್ರಹಿಸಿದರೆ ಅವುಗಳು ತಮ್ಮ ಸದಸ್ಯರಿಂದ ಪ್ರಜಾಸತ್ತಾತ್ಮಕ ನಿಯಂತ್ರಣವನ್ನು ಖಾತ್ರಿಪಡಿಸುವ ಮತ್ತು ಅವರ ಸಹಕಾರ ಸ್ವಾಯತ್ತತೆಯನ್ನು ಕಾಪಾಡಿಕೊಳ್ಳುವ ನಿಯಮಗಳ ಆಧಾರದ ಮೇಲೆ ಕೆಲಸ ನಿರ್ವಹಿಸುತ್ತವೆ.


## ತತ್ವ 5: ಶಿಕ್ಷಣ, ತರಬೇತಿ ಮತ್ತು ಮಾಹಿತಿ



ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರುಗಳಿಗೆ, ನಿರ್ವಹಣಾದಿಕಾರಿಗಳಿಗೆ, ಇತರೆ ಉದ್ಯೋಗಿಗಳಿಗೆ ಮತ್ತು ಆಯ್ಕೆಯಾದ ಪ್ರತಿನಿಧಿಗಳಿಗೆ ಶಿಕ್ಷಣ ಮತ್ತು ತರಬೇತಿಯನ್ನು ನೀಡುತ್ತವೆ, ಆದ್ದರಿಂದ ಅವರು ತಮ್ಮ ಉದ್ಯಮದ ಅಭಿವೃದ್ಧಿಗೆ ಪರಿಣಾಮಕಾರಿಯಾಗಿ ಕೊಡುಗೆ ನೀಡಲು ಸಹಕಾರಿಯಾಗಲಿವೆ.

### ತತ್ವ 6: ಸಹಕಾರಿ ಸಂಸ್ಥೆಗಳ ನಡುವೆ ಸಹಕಾರ

ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರಿಗೆ ಹೆಚ್ಚು ಪರಿಣಾಮಕಾರಿಯಾಗಿ ಸೇವೆ ಸಲ್ಲಿಸಲು ಮತ್ತು ಬಲಪಡಿಸುವ ನಿಟ್ಟಿನಲ್ಲಿ ಸ್ಥಳೀಯವಗಿ, ರಾಷ್ಟ್ರೀಯವಾಗಿ, ಪ್ರಾದೇಶಿಕವಾಗಿ ಮತ್ತು ಅಂತರರಾಷ್ಟ್ರೀಯ ಸಂಸ್ಥೆಗಳೊಂದಿಗೆ ಕೈ ಜೋಡಿಸಿ ಕಾರ್ಯನಿರ್ವಹಿಸುತ್ತವೆ.



### ತತ್ವ 7: ಸಮುದಾಯದ ಬಗ್ಗೆ ಕಾಳಜಿ

ಸಹಕಾರಿ ಸಂಸ್ಥೆಗಳು ತಮ್ಮ ಸದಸ್ಯರು ಅನುಮೋದಿಸಿದ ನೀತಿಗಳ ಮುಖಾಂತರ ಸಮುದಾಯಗಳ ಸುಸ್ಥಿರ ಅಭಿವೃದ್ಧಿಗೆ ಕೆಲಸ ಮಾಡುತ್ತವೆ.





ಸಹಕಾರಿ ತತ್ವಗಳ ಸವಿಸ್ತಾರವಾದ ವಿವರಣೆಯನ್ನು ಅನುಬಂಧದಲ್ಲಿ ನೀಡಲಾಗಿದೆ. ಈಗ ಸಹಕಾರಿ ತತ್ವಗಳನ್ನು ಅರ್ಥ ಮಾಡಿಕೊಂಡ ನಂತರ, ಈ ತತ್ವಗಳನ್ನು ನಮ್ಮ ಎಫ್.ಪಿ.ಒ.ಗಳಲ್ಲಿ ಅಳವಡಿಸಿಕೊಳ್ಳುವುದು ಆದ್ಯ ಕರ್ತವ್ಯವಾಗಿದೆ. ಈ ಕೆಳಗಿನ ಕೋಷ್ಟಕದಲ್ಲಿ ಸಹಕಾರಿ ತತ್ವಗಳನ್ನು ಆಚರಣೆಗೆ ತರುವ ಮಾರ್ಗಗಳು ಮತ್ತು ವಿಧಾನಗಳ ಜೋತೆಗೆ ಅವುಗಳನ್ನು ಎಷ್ಟರ ಮಟ್ಟಿಗೆ ಅಳವಡಿಸಿಕೊಳ್ಳಲಾಗಿದೆ ಎಂಬುದರ ಮೌಲ್ಯಮಾಪನ ಮಾಡಲು ಸಹಕಾರಿಯಾಗುವ ಪರಿಶೀಲನ ಪಟ್ಟಿಯನ್ನು ನೀಡಲಾಗಿದೆ.

**ಕೋಷ್ಟಕ 1: ರೈತ ಉತ್ಪಾದಕರ ಸಂಸ್ಥೆ ( ಎಫ್.ಪಿ.ಒ) ಗಳಲ್ಲಿ ಸಹಕಾರಿ ತತ್ವಗಳ ಅಳವಡಿಕೆ**

| ಕ್ರ.ಸಂ. | ಸಹಕಾರಿ ತತ್ವಗಳು | ಮಾರ್ಗಗಳು | ಅಳವಡಿಕೆಯ ಪರಿಶೀಲನಾಪಟ್ಟಿ |
|---|---|---|---|
| **1. ಸ್ವಯಂಪ್ರೇರಿತ ಮತ್ತು ಮುಕ್ತ ಸದಸ್ಯತ್ವ** | | | |
| | ಸದಸ್ಯತ್ವದ ನಿಯಮಗಳು | • ಸದಸ್ಯತ್ವಕ್ಕೆ ಅರ್ಹತಾ ಮಾನದಂಡಗಳು<br>• ಸದಸ್ಯತ್ವ ಪಡೆಯುವ ವಿಧಾನ<br>• ಸದಸ್ಯತ್ವದಿಂದ ನಿರ್ಗಮಿಸುವ ವಿಧಾನ | • ಬೈಲಾಗಳು ಮತ್ತು ವ್ಯವಹಾರ ನಿಯಮಗಳು<br>• ಸದಸ್ಯತ್ವಕ್ಕೆ ಅರ್ಜಿ, ನೋಂದಣಿ, ರಶೀದಿ ಮತ್ತು ಲೆಡ್ಜರ್ ಪುಸ್ತಕ, ಷೇರು ಪ್ರಮಾಣಪತ್ರ<br>• ಷೇರು ವರ್ಗಾವಣೆ ರಿಜಿಸ್ಟರ್ ಮತ್ತು ಅರ್ಜಿ |


| | | | |
|---|---|---|---|
| | ಸೇವೆಗಳ ಬಳಕೆ | • ಎಫ್.ಪಿ.ಒ ಗಳು ನೀಡುವ ಸೇವೆಗಳು<br><br>• ಸೇವೆಗಳ ಬಳಕೆ | • ವ್ಯವಹಾರ ನೋಂದಣಿ, ಪ್ರತಿ ವ್ಯವಹಾರ ಮತ್ತು ವಹಿವಾಟಿಗೆ ಸಂಬಂದಿಸಿದ ದಖಲಾತಿಗಳು<br><br>• ಸೇವೆಗಳವಾರು ಪ್ರತಿ ಸದಸ್ಯರ ಪಾಸ್‌ಬುಕ್ ಮತ್ತು ಲೆಡ್ಜರ್‌ಗಳು |
| | ಸದಸ್ಯತ್ವದ ಜವಾಬ್ದಾರಿಗಳಿಗೆ ಬದ್ದರಾಗಿರುವುದು. | • ಸದಸ್ಯತ್ವದಲ್ಲಿ ಮುಂದುವರಿಯಲು ಪ್ರತಿ ಸದಸ್ಯರು ಸಂಸ್ಥೆಯೊಂದಿಗೆ ಮಾಡಬೇಕಾಗಿರುವ ಕನಿಷ್ಟ ವ್ಯವಹಾರ<br><br>• ಸಾಮಾನ್ಯ ಸಭೆಗಳಲ್ಲಿನ ಹಾಜರಾತಿ<br><br>• ಸದಸ್ಯರು ಮತ ಚಲಾಯಿಸಲು ಅರ್ಹತೆಯ ಮಾನದಂಡಗಳು<br><br>• ಚುನಾವಣೆಗಳಲ್ಲಿ ಸ್ಪರ್ದಿಸುವುದಕ್ಕೆ ಮಾನದಂಡಗಳು | • ಆಡಳಿತ ಮತ್ತು ನಿರ್ವಹಣೆಯ ನೀತಿನಿಯಮಗಳು/ಬೈಲಾಗಳು ಮತ್ತು ವ್ಯವಹಾರ ನಿಯಮಗಳು<br><br>• ವಾರ್ಷಿಕ ಸಾಮಾನ್ಯ ಸಭೆಗಳ ನಿರ್ಣಯ ಪುಸ್ತಕ<br><br>• ಸದಸ್ಯರ/ಮತದಾರರ ಪಟ್ಟಿ<br><br>• ಸದಸ್ಯ ಲೆಡ್ಜರ್ / ನಗದು ಪುಸ್ತಕ. ಸದಸ್ಯರ ಸಾಮಾನ್ಯ ವಿವರಗಳು: ಷೇರು ಬಂಡವಾಳದ ಪಾವತಿ, ಸದಸ್ಯರು ಕಂಪನಿಯಲ್ಲಿ ನಡೆಸಿರುವ ವ್ಯವಹಾರ, ಸದಸ್ಯರು ಕಂಪನಿಯ ಚಟುವಟಿಕೆಗಳಲ್ಲಿ ಭಾಗವಹಿಸಿರುವ ವಿವರ, ಸದಸ್ಯರ ಕೊಡುಗೆ, ಸಾಲ/ಮರುಪಾವತಿಗಳು ಇತ್ಯಾದಿ. |
| **2. ಪ್ರಜಾಸತ್ತತ್ಮಾಕವಾಗಿ ಸದಸ್ಯರಿಂದ ನಿಯಂತ್ರಣ** | | | |
| | ಪ್ರಜಾಸತ್ತತ್ಮಾವಾದ ಸಂಘಟನೆ | • ಆಡಳಿತ ಮಂಡಳಿಯ ಸಂಯೋಜನೆ<br><br>• ಸದಸ್ಯರಿಂದ ಮಾತ್ರ<br><br>• ಆಡಳಿತ ಮಂಡಳಿಯ ನಿರ್ದೇಶಕರುಗಳ ಅವದಿ<br><br>• ಚುನಾವಣಾ ಪ್ರಕ್ರಿಯೆ<br><br>• ಸಂಸ್ತೆಯು ಒಂದು ಒಕ್ಕೂಟವಾಗಿದ್ದರೆ ಸಂಸ್ಥೆಯ ಗಾತ್ರ, ಭೌಗೋಳಿಕ ವ್ಯಾಪ್ತಿ, ಲಿಂಗ ಅನುಪಾತವಾಗಿ ಪ್ರಾತಿನಿದ್ಯತೆ. | • ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಅನುಮೊದಿಸಿದಂತೆ ಮತ್ತು ತೀರ್ಮಾನಗಳನ್ನು ನಡಾವಳಿ ಪುಸ್ತಕದಲ್ಲಿ ನಮೊದಿಸುವುದು. |

| 3. ಸದಸ್ಯರ ಆರ್ಥಿಕ ಭಾಗವಹಿಸುವಿಕೆ | | | |
|---|---|---|---|
| | ಎಫ್.ಪಿ.ಒ.ನ ಸ್ವಂತ ಬಂಡವಾಳ | ಸದಸ್ಯರ ಷೇರು ಬಂಡವಾಳ, ಉಳಿತಾಯ ಸದಸ್ಯರ ಕೊಡುಗೆಗಳು, ಸದಸ್ಯರ ಠೇವಣಿಗಳು | ಸಾಮಾನ್ಯ ಲೆಡ್ಜರ್ ಮತ್ತು ಹಣಕಾಸು ಹೇಳಿಕೆಗಳು |
| | ಪ್ರಜಾಸತ್ತಾತ್ಮಕವಾಗಿ ಹಣಕಾಸಿನ ನಿಯಂತ್ರಣ | *ಎ.ಜಿ.ಎಂ ಸಮಯದಲ್ಲಿ ಜನರಲ್ ಬಾಡಿ ಕೆಳಗಿನ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಮತ್ತು ಅನುಮೋದಿಸುವುದು.<br>*ಷೇರು ಬಂಡವಾಳದ ಮೇಲಿನ ಬಡ್ಡಿ<br>*ಪ್ರೋತ್ಸಾಹಕ ಬೋನಸ್‌ನ ಮೊತ್ತ<br>*ಸಾಮಾನ್ಯ ಲಾಭಾಂಶದ ಮೊತ್ತ<br>*ಮೀಸಲು ಬಂಡವಾಳದ/ನಿಧಿಯ ಮೊತ್ತ<br>*ಕೊರತೆ ನಿರ್ವಹಣೆ | *ಜನರಲ್ ಲೆಡ್ಜರ್<br>*ಸದಸ್ಯರ ಲೆಡ್ಜರ್‌ಗಳು<br>*ಎ.ಜಿ.ಎಂ ನ ನಾಡವಳಿಗಳು |
| **4 ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ** | | | |
| | ನಿರ್ಧಾರ ತೆಗೆದು ಕೊಳ್ಳುವ ಪ್ರಕ್ರಿಯೆ | *ಆಡಳಿತ ಮಂಡಳಿಯ ಅಂತಿಮ ನಿರ್ಧಾರಗಳು<br><br>*ಬೇರೆ ಸಂಸ್ಥೆಗಳೊಂದಿಗೆ ಯಾವುದಾದರು ವ್ಯವಹಾರದ ಒಪ್ಪಂದಕ್ಕೆ ಸಹಿ ಮಾಡುವ ಮೊದಲು ಒಪ್ಪಂದಗಳ ನಿಯಮಗಳು ಮತ್ತು ಷರತ್ತುಗಳ ಬಗ್ಗೆ ಆಡಳಿತ ಮಂಡಳಿಯ ಸಭೆಯಲ್ಲಿ ಚರ್ಚಿಸಬೇಕು<br><br>*ವ್ಯವಹಾರ ಒಪ್ಪಂದಗಳಲ್ಲಿ ಇತರೆ ಸಂಸ್ಥೆಗಳಿಗೆ ಕೆಳಗಿನ ವಿಷಯಗಳಲ್ಲಿ ಯಾವುದೇ ನಿಯಂತ್ರಣವಿಲ್ಲದಿರುವುದನ್ನು ಖಚಿತಪಡಿಸಿಕೊಳ್ಳುವುದು.<br><br>*ಮುಖ್ಯವಾಗಿಸಿಬ್ಬಂದಿಯನ್ನು ನಿಯೋಜಿಸುವುದು, ಸಿಬ್ಬಂದಿಗೆ ನೇರವಾಗಿ ಸಂಬಳವನ್ನು ಪಾವತಿಸುವುದು, ಸಾಲ ನೀಡುವುದು, ನಿರ್ದಿಷ್ಟ ವ್ಯವಹಾರಕ್ಕೆ ಸಂಬಂದಿಸಿದಂತೆ ಸ್ಪಷ್ಟ ಪಾತ್ರಗಳು ಮತ್ತು ಎರಡು ಸಂಸ್ಥೆಗಳ ಜವಾಬ್ದಾರಿಗಳ ಬಗ್ಗೆ ಸ್ಪಷ್ಟತೆ ಇರಬೇಕು. | *ಸಾಮಾನ್ಯ ಲೆಡ್ಜರ್ ಮತ್ತು ಹಣಕಾಸು ವಿವರಗಳ ಪರಿಶೀಲನೆ. ಆಡಳಿತ ಮಂಡಳಿಯ ಸಬೆಗಳ ನಡಾವಳಿ ಪುಸ್ತಕ. |

| | | | |
|---|---|---|---|
| | ಸ್ವಾವಲಂಬನೆ | *ಸಂಸ್ಥೆಯ ನಿರ್ವಹಣೆ ಹಾಗು ಇತರೆ ಚಟುವಟಿಕೆಗಳಿಗೆ ಬೇಕಾಗಿರುವ ವೆಚ್ಚಗಳನ್ನು ತನ್ನ ವ್ಯವಹಾರಗಳ ಮುಖಾಂತರ ಆದಾಯಗಳಿಸು-ವಂತಿರಬೇಕು.<br><br>*ಸ್ಥಳೀಯ ಸಂಪನ್ಮೂಲ ವ್ಯಕ್ತಿಗಳನ್ನು ಗುರುತಿಸಿ, ಅವರ ಗುಂಪನ್ನು ರಚಿಸಿ ಉಪಯೋಗಿಸಿಕೊಳ್ಳುವುದು. ಸಮುದಾಯ ಸಂಪನ್ಮೂಲ ವ್ಯಕ್ತಿಗಳು (ಪ್ರಗತಿಪರ ರೈತರು, ಯುವ ಕೃಷಿಕರು, ವೃತ್ತಿಪರ ಕೆಲಸಗಳ ಕಾರ್ಮಿಕರು, ಪಶು ವೈದ್ಯರು, ಇತರೆ ಸಂಪನ್ಮೂಲ ವ್ಯಕ್ತಿಗಳು ವಿವರಗಳ ಕ್ರೊಡೀಕರಣ)<br><br>*ಕೃಷಿ ಅಭಿವೃದ್ದಿಗೆ ಸಂಭಂದಿಸಿದ ಇತರೆ ಉನ್ನತ ಮಟ್ಟದ ಸಂಸ್ಥೆಗಳೂಂದಿಗೆ ಸಂಭಂದ ಬೆಳೆಸಿ ಸಹಾಯ ಪಡೆದುಕೊಳ್ಳುವುದು, ಆದರೆ ಆ ಸಂಸ್ಥೆಗಳು ನಿಮ್ಮ ಸಂಸ್ಥೆಯ ಆಡಳಿತವನ್ನು ನಿಯಂತ್ರಿಸದಂತೆ ನೋಡಿಕೊಳ್ಳಬೇಕು. | ಕಾರ್ಯಾಚರಣೆಯಲ್ಲಿ ಸ್ವಾವಲಂಬನೆ<br><br>ಆರ್ಥಿಕ ಸ್ವಾವಲಂಬನೆ<br><br>ನಿಧಿ ಕ್ರೊಡೀಕರಣ, ಆಡಳಿತಕ್ಕೆ ಸಂಬಂಧಿಸಿದ ನೀತಿಗಳು<br><br>ತರಬೇತಿ ವರದಿಗಳು<br>ಸಿಬ್ಬಂದಿ, ಸಹಾಯಕರು, ಸಂಪನ್ಮೂಲ ವ್ಯಕ್ತಿಗಳ ರಿಜಿಸ್ಟರ್/ದಖಲಾತಿ ಪುಸ್ತಕಗಳು |
| **5. ಶಿಕ್ಷಣ, ತರಬೇತಿ ಮತ್ತು ಮಾಹಿತಿ** | | | |
| | ಸದಸ್ಯರ ಶಿಕ್ಷಣ | *ಸದಸ್ಯರಲ್ಲಿ ಜಾಗೃತಿ ಮೂಡಿಸುವುದು<br><br>*ಸಂಸ್ಥೆಯ ಚಟುವಟಿಕೆಗಳಲ್ಲಿ ಮತ್ತು ವ್ಯವಹಾರದಲ್ಲಿ ಸಕ್ರಿಯವಾಗಿ ಭಾಗವಹಿಸಿದ ಸದಸ್ಯರಿಗೆ ಪ್ರಶಂಶೆಗಳು ಮತ್ತು ಪ್ರಶಸ್ತಿಗಳು<br><br>*ಸದಸ್ಯರಿಗೆ ಮಾಹಿತಿ<br><br>*ಮುಖ್ಯವಾಗಿ ಉತ್ಪಾದನೆಗೆ ಸಂಬಂದಿಸಿದ ತರಬೇತಿಗಳನ್ನು ಸದಸ್ಯರಿಗಾಗಿ ಆಯೋಜಿಸುವುದು<br><br>*ಮಾಹಿತಿ ಮತ್ತು ಸಂವಹನ ತಂತ್ರಜ್ಞಾನದ ಬಳಕೆ (ಐಸಿಟಿ) ಪ್ರಾತ್ಯಕ್ಷಿಕೆಗಳನ್ನು/ರೈತ ಕ್ಷೇತ್ರ ಪಾಠ ಶಾಲೆಗಳನ್ನು ಆಯೋಜಿಸುವುದು. | *ಗ್ರಾಮ ಸಭೆಗಳು, ರೈತ ಆಸಕ್ತ ಗುಂಪುಗಳ ಸಬೆಗಳು, ಕರಪತ್ರಗಳು, ಪೋಸ್ಟರ್‌ಗಳು, ವೀಡಿಯೊಗಳು ಇತ್ಯಾದಿ<br><br>*ಸಾಮರ್ಥ್ಯ ಭಲವರ್ದನೆಯ ತರಬೇತಿಗಳಿಗಾಗಿ ಹಣ ಹಂಚಿಕೆ<br><br>*ತರಬೇತಿ ವರದಿಗಳು<br><br>*ತರಬೇತಿಗಳ ವೇಳಾ ಪಟ್ಟಿ ಮತ್ತು ಸದಸ್ಯರೆಲ್ಲರಿಗೂ ಸೂಚನೆಗಳು.<br><br>*ತಾಂತ್ರಿಕ ಏಜೆನ್ಸಿಗಳೊಂದಿಗೆ ಒಪ್ಪಂದಗಳು |

| | | | |
|---|---|---|---|
| **6.ಸಹಕಾರ ಸಂಘಗಳೊಡನೆ ಸಹಕಾರ** | | | |
| | ಒಕ್ಕೂಟಗಳೊಂದಿಗೆ/ ಫೆಡರೇಶನ್‌ನೊಂದಿಗೆ ಸಂಬಂಧ | *ಸೂಕ್ತ ಸೇವೆಗಳನ್ನು ಒಕ್ಕೂಟದಿಂದ ಪಡೆಯುವುದು ಮತ್ತು ಬಳಕೆ ಮಾಡುವುದು<br><br>*ಒಕ್ಕೂಟಗಳೊಂದಿಗೆ ಮಾಹಿತಿಯನ್ನು ಹಂಚಿಕೊಳ್ಳುವುದುಮತ್ತು ಸಭೆಗಳಲ್ಲಿ ಭಾಗವಹಿಸುವುದು<br><br>*ಒಕ್ಕೂಟದಲ್ಲಿ ಸದಸ್ಯತ್ವದ ಜವಾಬ್ದಾರಿಯನ್ನು ಪೂರೈಸುವುದು | *ಮಂಡಳಿಯ ಸಭೆಗಳು ಮತ್ತು ವಾರ್ಷಿಕ ಸಾಮಾನ್ಯ ಸಭೆಗಳಲ್ಲಿ ಒಕ್ಕೂಟಗಳ ಸದಸ್ಯತ್ವದ ಬಗ್ಗೆ ಪರಿಶೀಲನೆ. |
| | ಇತರೆ ರೈತ ಉತ್ಪಾದಕರ ಸಂಸ್ಥೆಗಳೊಂದಿಗಿನ ಸಂಬಂಧ – ಅನುಭವ ಹಂಚಿಕೆ ಮತ್ತು ಕಲಿಕೆ | *ಇತರೆ ರೈತ ಉತ್ಪಾದಕರ ಸಂಸ್ಥೆಗಳಿಗೆ ಭೇಟಿ ನೀಡುವುದು, ಅವರಿಂದ ಅನುಭವ ಹಂಚಿಕೆ ಮತ್ತು ಕಲಿಕೆ<br><br>*ಜಂಟಿ ವ್ಯವಹಾರ ಚಟುವಟಿಕೆಗಳನ್ನು ಕೈಗೊಳ್ಳುವುದು ಮತ್ತು ಇತರೆ ಎಫ್.ಪಿ.ಒ. ಗಳೊಂದಿಗೆ ವ್ಯಾಪಾರ ಮಾಡುವುದು<br><br>*ಇತರೆ ಎಫ್.ಪಿ.ಒ.ಗಳೊಂದಿಗೆ ಜಂಟಿಯಾಗಿ ಇತರ ಏಜೆನ್ಸಿಗಳ ಸೇವೆಗಳನ್ನು ತೆಗೆದುಕೊಳ್ಳುವುದು<br><br>*ಸಂಬಂಧಿತ ಯಾವುದೇ ವಕಾಲತ್ತು ವಿಷಯಗಳಲ್ಲಿ ಇತರೆ ಎಫ್.ಪಿ.ಒ . ಗಳೊಂದಿಗೆ ಕೆಲಸ ಮಾಡುವುದು | *ಆಡಳಿತ ಮಂಡಳಿ/ಸಿಬ್ಬಂದಿಗೆ ಕಲಿಕಾ ಪ್ರವಾಸಗಳು<br><br>*ಇತರೆ ಎಫ್.ಪಿ.ಒ. ಗಳೊಂದಿಗೆ ಒಪ್ಪಂದಗಳು |
| **7.ಸಮುದಾಯದ ಬಗ್ಗೆ ಕಾಳಜಿ** | | | |
| | ಸ್ಥಳೀಯ ಸಮುದಾಯಕ್ಕೆ ಸೇವೆಗಳನ್ನು ಒದಗಿಸುವುದು | *ಸಮುದಾಯದ ಸದಸ್ಯರಿಗೆ ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಚಟುವಟಿಕೆಗಳಿಗೆ ಹಣವನ್ನು ನಿಗದಿಪಡಿಸುವುದು<br><br>*ಸ್ಥಳೀಯ ಉದ್ಯೋಗಗಳನ್ನು ಸೃಷ್ಟಿಸುವ ನೀತಿಗಳು<br><br>*ಖರ್ಚು–ಲಾಭದ ವಿಶ್ಲೇಷಣೆ ಮಾಡಿದ ನಂತರ ಕೈಗೆಟುಕುವ ಬೆಲೆಯಲ್ಲಿ ಸೇವೆಗಳನ್ನು ಒದಗಿಸುವುದು | *ಗ್ರಾಮಸಭೆಗಳು, ರೈತ ಆಸಕ್ತ ಗುಂಪುಗಳ ಸಭೆಗಳು, ಕರಪತ್ರಗಳು, ಪೋಸ್ಟರ್‌ಗಳು, ವೀಡಿಯೊಗಳು ಇತ್ಯಾದಿ<br><br>*ಇತರೆ ಸಂಸ್ಥೆಗಳೊಂದಿಗೆ ಜಂಟಿಯಾಗಿ ಕೈಗೊಂಡ ಚಟುವಟಿಕೆಗಳು ಮತ್ತು ಮಾನವ ದಿನಗಳನ್ನು ಸೃಷ್ಟಿಸಿದ ವರದಿಗಳು |

| | | | |
|---|---|---|---|
| | | *ಸಮುದಾಯಕ್ಕಾಗಿ ಅಗತ್ಯವಿರುವ ಅಭಿವೃದ್ಧಿ ಯೋಜನೆಗಳ ಅಡಿಯಲ್ಲಿ ಕಾರ್ಯಕ್ರಮಗಳ ಉಪಯೋಗ ಪಡೆದುಕೊಳ್ಳುವುದು<br><br>*ಸ್ಥಳೀಯ ಮತ್ತು ನೈಸರ್ಗಿಕ ಸಂಪನ್ಮೂಲಗಳು, ಪರಿಸರ ಇತ್ಯಾದಿಗಳ ಸುಸ್ಥಿರ ಅಭಿವೃದ್ಧಿಯಲ್ಲಿ ಸಂಸ್ಥೆಯ ಚಟುವಟಿಕೆಗಳಿಂದ ಆದ ಪ್ರಭಾವವನ್ನು ವಿಶ್ಲೇಷಿಸುವುದು | *ಲೆಕ್ಕ ಪರಿಶೋದಕರ ವರದಿಗಳು, ರೂಪಿಸಿದ ಯೋಜನೆಗಳು ಮತ್ತು ಸಾದಿಸಿದ/ಕೈಗೂಂಡ ವ್ಯವಹಾರಗಳ ವರದಿಗಳು, ತರಬೇತಿ ವರದಿಗಳು, ಇತ್ಯಾದಿ.<br><br>*ಇತರೆ ಅಭಿವೃದ್ದಿ ಇಲಾಕೆಗಳೊಂದಿಗೆ ಕೈಗೊಂಡಿರುವ ಚಟುವಟಿಕೆಗಳ ವರದಿಗಳು<br><br>*ಕಂಪನಿಯ ಚಟುವಟಿಕೆಗಳು ಮತ್ತು ವ್ಯವಹಾರಗಳ ಬಗ್ಗೆ ಮೂರನೆ ಸಂಸ್ಥೆಯಿಂದ ಕೈಗೊಂಡಿರುವ ಮೌಲ್ಯಮಾಪನಗಳ ವರದಿ. ತಾಂತ್ರಿಕ ಏಜೆನ್ಸಿಗಳೊಂದಿಗೆ ಒಪ್ಪಂದಗಳು |



# ಪರಸ್ಪರ ಸಹಾಯ ತತ್ವಗಳು

ಕಂಪೆನಿ ಕಾಯ್ದೆ, 2013 ರ ಸೆಕ್ಷನ್ 581 ಜಿ ಯ ಉಪವಿಭಾಗ (2) ರಲ್ಲಿ ವಿವರಿಸಿರುವಂತೆ ಉತ್ಪಾದಕರ ಕಂಪನಿಗಳಲ್ಲಿ ಪರಸ್ಪರ ಸಹಾಯದ ತತ್ವಗಳು ಉತ್ಪಾದಕರ ಕಂಪನಿಗಳ ಪರಿಚ್ಛೇದಗಳಲ್ಲಿ/ಉಲ್ಲೇಖಗಳಲ್ಲಿ (ಎ.ಒ.ಎ) ಸೇರಿಸಲೇಬೇಕು. ಪರಸ್ಪರ ಸಹಾಯದ ತತ್ವಗಳು ಉತ್ಪಾದಕರ ಕಂಪನಿಗಳ ಕಾರ್ಯ ಚಟುವಟಿಕೆಗಳ ನೀತಿನಿಯಮಗಳ ಭಾಗವಾಗಿರಬೇಕು. ಈ ತತ್ವಗಳು ಉತ್ಪಾದಕರ ಕಂಪನಿಯ ಲೇಖನಗಳ ಭಾಗವಾಗಿರಬೇಕು ಎಂದು ಕಾಯಿದೆ ಸೂಚಿಸುತ್ತದೆ. ನಾವು ನೋಡುವಂತೆ, ಈ ಪರಸ್ಪರ ಸಹಾಯ ತತ್ವಗಳು ಮೇಲೆ ಚರ್ಚಿಸಿದ ಸಹಕಾರಿ ತತ್ವಗಳೊಂದಿಗೆ ಬಹುತೇಕ ಹೋಲುತ್ತವೆ. ಈ ತತ್ವಗಳನ್ನು ಈ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾಗಿದೆ.

**ಕೋಷ್ಟಕ: ಪರಸ್ಪರ ಸಹಾಯ ತತ್ವಗಳು**

**ತತ್ವ 1 : ಸ್ವಯಂ ಪ್ರೇರಿತ ಸದಸ್ಯತ್ವ**

ಸದಸ್ಯತ್ವವು ಸ್ವಯಂಪ್ರೇರಿತವಾಗಿದ್ದು, ಅರ್ಹ ಎಲ್ಲಾ ವ್ಯಕ್ತಿಗಳಿಗೆ ತೆರೆದಿರುತ್ತದೆ. ಉತ್ಪಾದಕ ಕಂಪನಿಯ ಚಟುವಟಿಕೆಗಳಲ್ಲಿ ಭಾಗವಹಿಸಿ ದೊರೆಯುವ ಸೇವೆಗಳನ್ನು ಹಾಗೂ ಸೌಲಭ್ಯಗಳನ್ನು ಬಳಸಿಕೊಳ್ಳುವುದರ ಜೊತೆಗೆ ಸದಸ್ಯತ್ವದ ಕರ್ತವ್ಯಗಳನ್ನು ಸ್ವೀಕರಿಸಲು ಸಿದ್ಧವಿರುವ ಎಲ್ಲಾ ವ್ಯಕ್ತಿಗಳಿಗೆ ಲಭ್ಯವಿರುತ್ತದೆ.

**ತತ್ವ 2 : ಪ್ರಜಾಸತ್ತಾತ್ಮಕವಾಗಿ ಸದಸ್ಯರಿಂದ ನಿಯಂತ್ರಣ**

ಉತ್ಪಾದಕ ಕಂಪನಿಗಳು ತಮ್ಮ ಸದಸ್ಯರಿಂದ ನಿಯಂತ್ರಿಸಲ್ಪಡುವ ಪ್ರಜಾಸತ್ತಾತ್ಮಕ ಸಂಸ್ಥೆಗಳಾಗಿದ್ದು ಅವರು ಮತದಾನದಲ್ಲಿ ಮತ್ತು ನಿರ್ಧಾರ ತೆಗೆದುಕೊಳ್ಳುವಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಾರೆ. ಷೇರು ಬಂಡವಾಳದಲ್ಲಿ ಹೂಡಿಕೆಯ ಪ್ರಮಾಣವನ್ನು ಪರಿಗಣಿಸದೆ ಪ್ರತಿಯೊಬ್ಬ ಸದಸ್ಯರಿಗೆ ಒಂದು ಮತ (ಒಬ್ಬ ಸದಸ್ಯ ಒಂದು ಮತ)

**ತತ್ವ 3 : ಚುನಾಯಿತ ಮಂಡಳಿಯಿಂದ ಆಡಳಿತ**

ಉತ್ಪಾದಕ ಕಂಪನಿಯ ಆಡಳಿತವನ್ನು ಚುನಾಯಿತ ನಿರ್ದೇಶಕರ ಮಂಡಳಿಯು ನಿರ್ವಹಿಸುತ್ತದೆ ಮತ್ತು ಆ ನಿರ್ದೇಶಕರ ಮಂಡಳಿಯು ಸಂಸ್ಥೆಯ ಎಲ್ಲಾ ಸದಸ್ಯರಿಗೆ ಜವಾಬ್ದಾರರಾಗಿತ್ತಾರೆ.

**ತತ್ವ 4 : ಸೀಮಿತ ಆದಾಯ**

ಷೇರು ಬಂಡವಾಳದಲ್ಲಿ ಹೂಡಿಕೆ ಮಾಡಿದ ಸದಸ್ಯರಿಗೆ ಸೀಮಿತ ಆದಾಯವಿರುತ್ತದೆ. (ಗರಿಷ್ಠ ಲಾಭಾಂಶವನ್ನು ಎಓಎ ನಲ್ಲಿ ನಿಗದಿಪಡಿಸಿದಂತೆ ನಿರ್ಧರಿಸಲಾಗುತ್ತದೆ)

**ತತ್ವ 5 : ಹೆಚ್ಚುವರಿ ಆದಾಯದ ವಿತರಣೆ**

ತನ್ನ ಚಟುವಟಿಕೆಗಳಿಂದ ಗಳಿಸಿದ ಹೆಚ್ಚುವರಿ ಆದಾಯವನ್ನು ಉತ್ಪಾದಕ ಕಂಪನಿಯು ಕೆಳಗಿನಂತೆ ಸಮಾನವಾಗಿ ಹಂಚಿಕೆ ಮಾಡುತ್ತದೆ; i.ಉತ್ಪಾದಕ ಕಂಪನಿಯ ವ್ಯವಹಾರದ ಅಭಿವೃದ್ಧಿಗೆ. ii.ಸಮುದಾಯ ಸೌಲಭ್ಯಗಳ ಅಭಿವೃದ್ಧಿಗೆ. iii.ಎಲ್ಲಾ ಸದಸ್ಯರಿಗೆ ಸಮಾನವಾದ ಬೋನಸ್ ನೀಡಲು. iv.ಸದಸ್ಯರು ಕಂಪನಿಯೊಂದಿಗೆ ವ್ಯವಹರಿಸಿದ ಆಧಾರದ ಮೇಲೆ ಪ್ರೋತ್ಸಾಹಕ ಬೋನಸ್ ನೀಡಲು.

| ತತ್ವ 6 : | **ಶಿಕ್ಷಣ, ತರಬೇತಿ ಮತ್ತು ಮಾಹಿತಿ** |
|---|---|
| ರೈತ ಉತ್ಪಾದಕ ಕಂಪನಿಯು ಪರಸ್ಪರತೆಯ ತತ್ವಗಳು ಮತ್ತು ಪರಸ್ಪರ ಸಹಾಯದ ಆಧಾರದ ಮೇಲೆ ತನ್ನ ಸದಸ್ಯರಿಗೆ, ಸಿಬ್ಬಂದಿಗಳಿಗೆ ಹಾಗೂ ಇತರರಿಗೆ ಶಿಕ್ಷಣ ನೀಡುವ ಅವಕಾಶ ಕಲ್ಪಿಸುತ್ತದೆ. | |
| ತತ್ವ 7 : | **ಉತ್ಪಾದಕ ಸಂಸ್ಥೆಗಳ ನಡುವೆ ಸಹಕಾರ** |
| ಉತ್ಪಾದಕ ಕಂಪನಿಯು ಇತರೆ ಉತ್ಪಾದಕ ಕಂಪನಿಗಳು ಹಾಗೂ ಸಹಕಾರ ತತ್ವಗಳನ್ನು ಅನುಸರಿಸುವ ಇತರೆ ಸಂಸ್ಥೆಗಳೊಂದಿಗೆ ಸ್ಥಳೀಯ, ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಮಟ್ಟದಲ್ಲಿ ಸಕ್ರೀಯವಾಗಿ ಸಹಕರಿಸುವ ಮುಖಾಂತರ ತನ್ನ ಸದಸ್ಯರು ಮತ್ತು ತಾನು ಪ್ರತಿನಿಧಿಸುವ ಸಮುದಾಯಕ್ಕೆ ಉತ್ತಮ ಸೇವೆ ಸಲ್ಲಿಸುತ್ತದೆ. | |

# ಅಭ್ಯಾಸಗಳು

ಎಫ್.ಪಿ.ಒ.ಗಳಲ್ಲಿ ಮೇಲಿನ ಪ್ರತಿಯೊಂದು ತತ್ವಕ್ಕೆ ಕೆಲವು ನಿದರ್ಶನಗಳನ್ನು ಕೆಳಗೆ ನೀಡಲಾಗಿದೆ. ಪ್ರತಿಯೊಂದು ತತ್ವವನ್ನು ಅನುಸರಿಸಿದ್ದೆವೆಯೆ ಅಥವಾ ಇಲ್ಲವೇ ಎಂದು ಉತ್ತರಿಸೋಣ. ಅಲ್ಲದೆ ಅನುಸರಿಸಲು ಅಥವಾ ಅನುಸರಿಸದಿರಲು ವಿವರಣೆಗಳನ್ನು ನೀಡೂಣ.

**ತತ್ವ 1: ಸ್ವಯಂಪ್ರೇರಿತ ಸದಸ್ಯತ್ವ**

ಡೈರಿ/ಹೈನುಗಾರಿಕೆ ಸಹಕಾರ ಸಂಸ್ಥೆಯಲ್ಲಿ, ಎಲ್ಲಾ ಸದಸ್ಯರು ಮಹಿಳೆಯರು.

**ಉತ್ತರ:** ಅನುಸರಿಸಲಾಗಿದೆ ಅಥವಾ ಅನುಸರಿಸಿಲ್ಲ

**ವಿವರಣೆ:**............................................................................................................

............................................................................................................................

ಎಫ್.ಪಿ.ಒ.ನ ಆಡಳಿತ ಮಂಡಳಿಯ ಸದಸ್ಯರು ವಿಭಿನ್ನ ಸಂವಹನ ಸಾಮಗ್ರಿಗಳನ್ನು ಬಳಸಿಕೊಂಡು ಸದಸ್ಯತ್ವ ಅಭಿಯಾನಗಳನ್ನು ಗ್ರಾಮಗಳಲ್ಲಿ ಕೈಗೊಳ್ಳುತ್ತಾರೆ ಮತ್ತು ಕಾರ್ಯಾಚರಣೆಯ ಗ್ರಾಮಗಳಲ್ಲಿ ಕಂಪನಿಯಲ್ಲಿ ಸದಸ್ಯರಾದರೆ ಸದಸ್ಯರಿಗೆ ಸಿಗುವ ಸೇವೆ ಸೌಲಭ್ಯಗಳ ಬಗ್ಗೆ, ಲಾಭಗಳ ಬಗ್ಗೆ, ಕಾರ್ಯಚಟುವಟಿಕೆಗಳ ಬಗ್ಗೆ ಸಭೆಗಳ ಮೂಖಾಂತರ ಮೇಲಿಂದ ಮೇಲೆ ಅರಿವು ಮೂಡಿಸುವುದರ ಮೂಖಾಂತರ, ಆಸಕ್ತ ರೈತರನ್ನು ಪ್ರೇರೆಪಿಸಿ, ರೈತರು ಸ್ವಯಂ ಪ್ರೇರಣೆಯಿಂದ ಮುಂದೆ ಬಂದು ಸದಸ್ಯರಾಗಲು ಆಸಕ್ತಿ ತೊರಿ ಎಫ್.ಪಿ.ಒ ಸದಸ್ಯರಾಗಿ/ಷೇರುದಾರರನ್ನಾಗಿ ಸೇರಿಸಿಕೊಳ್ಳುತ್ತಾರೆ.

**ಉತ್ತರ:** ಅನುಸರಿಸಲಾಗಿದೆ ಅಥವಾ ಅನುಸರಿಸುವುದಿಲ್ಲ

**ವಿವರಣೆ:**............................................................................................................

............................................................................................................................

ಮತ್ತೊಂದು ಎಫ್.ಪಿ.ಒ.ದಲ್ಲಿ, ಎಫ್.ಪಿ.ಒ.ನ ಗ್ರಾಮಗಳಲ್ಲಿ ಕಂಪನಿಯಲ್ಲಿ ಸದಸ್ಯರಾದರೆ ಸದಸ್ಯರಿಗೆ ಸಿಗುವ ಸೇವೆ ಸೌಲಭ್ಯಗಳ ಬಗ್ಗೆ, ಲಾಭಗಳ ಬಗ್ಗೆ, ಕಾರ್ಯಚಟುವಟಿಕೆಗಳ ಬಗ್ಗೆ ಸಭೆಗಳ ಮೂಖಾಂತರ ಸರಿಯಾಗಿ ಮಾಹಿತಿಯನ್ನು ನೀಡದೆ, ರೈತರಲ್ಲಿ ಅರಿವನ್ನು ಮೂಡಿಸದೆ ರೈತರನ್ನು ಸದಸ್ಯರನ್ನಾಗಿ ದಾಖಲಿಸಲಾಯಿತು. ಈ ತಪ್ಪು ಪ್ರಕ್ರಿಯೆಯ ಕಾರಣ ಇಂದು ಅನೇಕ ಸದಸ್ಯರು ಎಫ್.ಪಿ.ಒ.ನ ವ್ಯವಹಾರದಲ್ಲಿ ಮತ್ತು ಚಟುವಟಿಕೆಗಳಲ್ಲಿ ಸಕ್ರಿಯವಾಗಿ ಭಾಗವಹಿಸದಿರಲು ಕಾರಣವಾಯಿತು ಮತ್ತು ಕಂಪನಿಯ ಅಬಿವೃದ್ದಿಯಲ್ಲಿ ಪ್ರಗತಿ ಕಾಣದಿರಲು ಕಾರಣವಾಯಿತು.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**............................................................................................................

............................................................................................................................

**ತತ್ವ 2: ಪ್ರಜಾಸತ್ತಾತ್ಮಕವಾಗಿ ಸದಸ್ಯರಿಂದ ನಿಯಂತ್ರಣ**

ಸಹಕಾರಿ ಸಂಸ್ಥೆಯಲ್ಲಿ, ಅರ್ಧದಷ್ಟು ಸದಸ್ಯರು ಇತರೆ ಅರ್ಧದಷ್ಟು ಸದಸ್ಯರಿಗಿಂತ ಷೇರು ಬಂಡವಾಳಕ್ಕೆ ಎರಡರಷ್ಟು ಹೂಡಿಕೆ ಮಾಡಿದ್ದಾರೆ. ಹೀಗಾಗಿ ಆ ಸದಸ್ಯರು ಇತರೆ ಸದಸ್ಯರಿಗಿಂತ ಎರಡು ಪಟ್ಟು ಹೆಚ್ಚು ಮತದಾನದ ಹಕ್ಕುಗಳನ್ನು ನೀಡಬೇಕು ಎಂದು ಒತ್ತಾಯಿಸಿದರು.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**..................................................................................................................................

..................................................................................................................................

ಮೇಲಿನ ಸಂಸ್ಥೆಯಲ್ಲಿ ದೊರೆಯುವ ಸೇವೆಗಳನ್ನು ಪಡೆಯುವಲ್ಲಿ ಮತ್ತು ವ್ಯವಹಾರ ಮಾಡುವುದರಲ್ಲಿ ಮೇಲಿನ ಸಹಕಾರ ಸಂಸ್ಥೆಯಲ್ಲಿ ಮೊದಲಾರ್ಧದ ಸದಸ್ಯರು ಉಳಿದ ಅರ್ಧದಷ್ಟು ಸದಸ್ಯರಿಗಿಂತ ಎರಡು ಪಟ್ಟು ಹೆಚ್ಚಾಗಿ ಭಾಗವಹಿಸಿದ್ದರು. ಹೀಗಾಗಿ ಅವರು ನಮಗೆ ಎರಡು ಪಟ್ಟು ಹೆಚ್ಚು ಮತದಾನದ ಹಕ್ಕನ್ನು ನೀಡಬೇಕು ಎಂದು ಅಗ್ರಹಿಸಿದರು.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**..................................................................................................................................

..................................................................................................................................

**ತತ್ವ 3: ಚುನಾಯಿತ ಮಂಡಳಿಯಿಂದ ಆಡಳಿತ**

ಎಫ್.ಪಿ.ಒ.ವೊಂದರಲ್ಲಿ, ಸರ್ವ ಸದಸ್ಯರ ಸಾಮಾನ್ಯ ಸಭೆಯನ್ನು ಕರೆಯಲಾಗುತ್ತದೆ, ಇದರಲ್ಲಿ ಕೋರಮ್‌ಗಿಂತ ಹೆಚ್ಚಿನ ಸದಸ್ಯರು ಇರುತ್ತಾರೆ, ಸಭೆಯಲ್ಲಿ ಭಾಗವಹಿಸುವ ಎಲ್ಲ ಸದಸ್ಯರು ಮತದಾನದಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ ಮತ್ತು ಅವರು ಆಡಳಿತ ಮಂಡಳಿಯ ಸದಸ್ಯರನ್ನು ಆಯ್ಕೆ ಮಾಡುತ್ತಾರೆ.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**..................................................................................................................................

..................................................................................................................................

ಮೇಲಿನ ಎಫ್.ಪಿ.ಒ. ನಲ್ಲಿ ಆಡಳಿತ ಮಂಡಳಿಯು, ಸಾಮಾನ್ಯ ಮಂಡಳಿಯು ಸರ್ವ ಸದಸ್ಯರ ಸಭೆಯ ನಿರ್ಧಾರಗಳ ಅನುಸಾರ ಕಾರ್ಯನಿರ್ವಹಿಸುತ್ತಿದೆ ಮತ್ತು ಅಗತ್ಯವಿರುವ ಎಲ್ಲ ಮಾಹಿತಿಯೊಂದಿಗೆ ನಿಯಮಿತವಾಗಿ ಸದಸ್ಯರಿಗೆ ವರದಿಗಳನ್ನು ಒಪಿಸುತ್ತದೆ.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**..................................................................................................................................

..................................................................................................................................

ಮತ್ತೊಂದು ಎಫ್.ಪಿ.ಒ.ನಲ್ಲಿ, ರೈತ ಉತ್ಪಾದಕರ ಸಂಸ್ಥೆಯನ್ನು ರಚಿಸಲು ನೇಮಿಸಲಾಗಿರುವ ಸಂಸ್ಥೆಯ ಸದಸ್ಯರನ್ನು ಆಡಳಿತ ಮಂಡಳಿಗೆ ನಾಮನಿರ್ದೇಶನ ಮಾಡುತ್ತದೆ. ಈ ಸದಸ್ಯರು ಮುಖ್ಯವಾಗಿ ಸದಸ್ಯರಾಗಲು ನಿಗದಿಪಡಿಸಿದ ಅರ್ಹಹತೆಯನ್ನು ಹೊಂದಿರುವುದಿಲ್ಲ ಮತ್ತು ಈ ಸದಸ್ಯರು ಪ್ರಾಭವ ಶಾಲಿಗಳಾಗಿದ್ದು, ಆಡಳಿತ ಮಂಡಳಿಯಲ್ಲಿ ತಮಗೆ ತೊಚಿದಂತೆ ತಮ್ಮ ಅನುಕೂಲಕ್ಕೆ ತಕ್ಕಂತೆ ತಿರ್ಮಾನಗಳನ್ನು ತೆಗೆದುಕೂಳ್ಳುತ್ತಿದ್ದಾರೆ.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**..................................................................................................................................

..................................................................................................................................

**ತತ್ವ 4: ಸೀಮಿತ ಆದಾಯ**

ಎಫ್.ಪಿ.ಒ.ವೊಂದರಲ್ಲಿ, ಎಫ್.ಪಿ.ಒ.ನ ಆಡಳಿತ ಮಂಡಳಿಯು ಕಂಪನಿಯ ಅಭಿವೃದ್ದಿಗೆ ಅಗತ್ಯವಾದ ಮೀಸಲು ಬಂಡವಾಳವನ್ನು ತೆಗೆದಿರಿಸಿ, ಸಂಸ್ಥೆಯ ಎಲ್ಲಾ ಲಾಭಾಂಶವನ್ನು ಸದಸ್ಯರಿಗೆ ಸಂಸ್ಥೆಯ ಬೈಲಾಗಳಲ್ಲಿ/ ಎ.ಒ.ಎ ಗಳಲ್ಲಿ ಸೂಚಿಸಿರುವುದಕ್ಕಿಂತ ಹೆಚ್ಚಿನ ಮೊತ್ತದ ಲಾಭವನ್ನು ವಿತರಿಸುತ್ತದೆ.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**......................................................................................................................

......................................................................................................................

**ತತ್ವ 5: ಸದಸ್ಯರ ಆರ್ಥಿಕ ಭಾಗವಹಿಸುವಿಕೆ**

ಎಫ್.ಪಿ.ಒ.ವೊಂದರಲ್ಲಿ, ಎಫ್.ಪಿ.ಒ ಆಡಳಿತ ಮಂಡಳಿಯು, ಎಫ್.ಪಿ.ಒ ಅಭಿವೃದ್ಧಿಗಾಗಿ ಮೀಸಲು ಭಂಡವಾಳ ಮತ್ತು ಎಫ್.ಪಿ.ಒ.ನ ಇತರೆ ಚಟುವಟಿಕೆಗಳಿಗೆ ಹಂಚಿಕೆಗಳನ್ನು ಮಾಡಿದ ನಂತರ ಹೆಚ್ಚುವರಿ ಮೊತ್ತ ಉಳಿದಿರುವುದನ್ನು ಖಚಿತಪಡಿಸಿಕೊಂಡ ನಂತರವೇ ಸದಸ್ಯರಿಗೆ ಹೆಚ್ಚುವರಿ ಮೊತ್ತವನ್ನು ಲಾಭಾಂಶವಾನ್ನಾಗಿ ವಿತರಿಸಲು ಮಂಡಳಿ ನಿರ್ಧರಿಸುತ್ತದೆ.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**......................................................................................................................

......................................................................................................................

ಸದಸ್ಯರು ಸಂಸ್ಥೆಯ ವ್ಯವಹಾರದಲ್ಲಿ ಭಾಗವಹಿಸುವಿಕೆ ಮತ್ತು ಸೇವೆಗಳ ಬಳಕೆಯು ಸದಸ್ಯರ ನಡುವೆ ಬೇರೆ ಬೇರೆ ಯಾಗಿದ್ದರೂ, ಸಹಕಾರ ಸಂಸ್ಥೆಯಲ್ಲಿ ಹೆಚ್ಚುವರಿ ಮೊತ್ತವನ್ನು ಅದರ ಎಲ್ಲ ಸದಸ್ಯರಿಗೆ ಸಮನಾಗಿ ವಿತರಿಸಲು ಆಡಳಿತ ಮಂಡಳಿ ನಿರ್ಧರಿಸಿತು.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**......................................................................................................................

......................................................................................................................

ಮತ್ತೊಂದು ಎಫ್.ಪಿ.ಒ.ನಲ್ಲಿ, ಎಫ್.ಪಿ.ಒ ಜೊತೆ ಮಾಡಿದ ವ್ಯವಹಾರ / ವಹಿವಾಟಿನ ಅನುಪಾತದಲ್ಲಿ ಲಾಭದ ಒಂದು ಭಾಗವನ್ನು ಸದಸ್ಯರಿಗೆ ಹಂಚಿಕೆಮಾಡಲಾಗಿದೆ.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**......................................................................................................................

......................................................................................................................

**ತತ್ವ 6: ಶಿಕ್ಷಣ, ತರಬೇತಿ ಮತ್ತು ಮಾಹಿತಿ**

ರೈತ ಉತ್ಪಾದಕರ ಸಂಸ್ಥೆಯೊಂದರಲ್ಲಿ ತತ್ವಗಳಾದ ಪರಸ್ಪರ ಸಹಾಯ, ಪ್ರಜಾಪ್ರಭುತ್ವ, ಸಮಾನತೆ ಬಗ್ಗೆ ಆಡಳಿತ ಮಂಡಳಿಯ ಸದಸ್ಯರಿಗೆ, ಸಾಮಾನ್ಯ ಸದಸ್ಯರಿಗೆ ಮತ್ತು ಸಿಬ್ಬಂದಿಗೆ ಸರಿಯಾದ ತರಬೇತಿ ನೀಡಲಾಗಿಲ್ಲ. ಇದು ಆಡಳಿತ ಮಂಡಳಿಯ ಸದಸ್ಯರಿಗೆ ಯಾವುದೇ ಹೊಣೆಗಾರಿಕೆಯಿಲ್ಲದಿರಲು ಮತ್ತು ಸಂಸ್ಥೆಯ ವ್ಯವಹಾರದಲ್ಲಿ ಮತ್ತು ಚಟುವಟಿಕೆಗಳಲ್ಲಿ ಸದಸ್ಯರ ಪ್ರೋತ್ಸಾಹವಿಲ್ಲದಿರುವಿಕೆಗೆ ಮತ್ತು ಸದಸ್ಯರ ಭಾಗವಹಿಸುವುಕೆ ಕುಂಟಿತವಾಗಲು ಕಾರಣವಾಯಿತು.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**..........................................................................................................................

..........................................................................................................................................

**ತತ್ವ 7 : ಉತ್ಪಾದಕರ ಸಂಸ್ಥೆಗಳ ನಡುವೆ ಸಹಕಾರ**

ಎಫ್.ಪಿ.ಒ ತಮ್ಮ ಸದಸ್ಯರಿಂದ ಉತ್ಪನ್ನಗಳನ್ನು ಖರೀದಿಸಿ ಮಾರಟ ಮಾಡುವ ಸೇವೆಯನ್ನು ನೀಡುತ್ತಿದೆ. ಹತ್ತಿರದ ಪ್ರದೇಶದಲ್ಲಿರುವ ಮತ್ತೊಂದು ಎಫ್.ಪಿ.ಒ ಮೂಲಸೌಕರ್ಯ ಮತ್ತು ಹಣಕಾಸಿನ ಕೊರತೆಯನ್ನು ಗಮನದಲ್ಲಿಟ್ಟುಕೊಂಡು ಉತ್ಪನ್ನಗಳನ್ನು ಖರೀದಿಸಿ ಮಾರಟ ಮಾಡುವ ಸೇವೆಯನ್ನು ಕೈಗೆತ್ತಿಕೊಂಡಿರಲಿಲ್ಲ. ಮೊದಲನೇ ಎಫ್.ಪಿ.ಒ ತಮ್ಮ ಸದಸ್ಯರಿಂದ ಖರೀದಿಯನ್ನು ಖಾತರಿಪಡಿಸಿಕೊಂಡ ನಂತರ, ಎರಡನೇ ಎಫ್.ಪಿ.ಒ.ದಿಂದ ಉತ್ಪನ್ನಗಳ ಖರೀದಿಯ ಬೆಂಬಲವನ್ನು ವಿಸ್ತರಿಸಲು ಮುಂದಾಯಿತು ಮತ್ತು ಎರಡನೇ ಎಫ್.ಪಿ.ಒ ಸದಸ್ಯರಿಗೂ ಸಹ ಲಾಭವಾಯಿತು.

**ಉತ್ತರ:** ಅನುಸರಿಸಲಾಗಿದೆ / ಅನುಸರಿಸಿಲ್ಲ

**ವಿವರಣೆ:**..........................................................................................................................

..........................................................................................................................................

**ಅಭ್ಯಾಸ:** ದಯವಿಟ್ಟು ನಿಮ್ಮಲಿ ಚರ್ಚಿಸಿ, ನಿಮ್ಮ ಎಫ್.ಪಿ.ಒ ಮೇಲೆ ತಿಳಿಸಿದ ತತ್ವಗಳಿಗೆ ಎಷ್ಟರ ಮಟ್ಟಿಗೆ ಬದ್ಧವಾಗಿದೆ ಎಂದು ವಿವರಣೆ ನೀಡಿ?

# 3

# ರೈತ ಉತ್ಪಾದಕ ಸಂಸ್ಥೆ (ಎಫ್.ಪಿ.ಒ) ಗಳ ಪ್ರಮುಖ ಲಕ್ಷಣಗಳು

**ಅಧಿವೇಶನದ ಉದ್ದೇಶ:**



**ಉತ್ಪಾದಕರ ಸಂಸ್ಥೆಗಳ ಲಕ್ಷಣಗಳ ಬಗ್ಗೆ ತಿಳಿದುಕೊಂಡು ಅರ್ಥೈಸಿಕೊಳ್ಳುವುದು.**

**ವಿಷಯಗಳು**


- ಎಫ್.ಪಿ.ಒ.ಗಳ ಪ್ರಮುಖ ಲಕ್ಷಣಗಳು

## ಎಫ್.ಪಿ.ಒ.ಗಳ ಪ್ರಮುಖ ಲಕ್ಷಣಗಳು

ನಾವು ಯಾವುದಾದರು ಒಂದು ವಸ್ತುವನ್ನು ಗುರುತಿಸುವಾಗ, ಆ ವಸ್ತುವಿನ ಗುಣಲಕ್ಷಣಗಳನ್ನು ಅದರಿಸಿ ಗುರುತಿಸುತ್ತೇವೆ. ಉದಾಹರಣೆಗೆ ಬಟ್ಟೆಗಳ ಮೃದು, ಗಟ್ಟಿ, ಬಣ್ಣ, ವಸ್ತುಗಳ ಆಕಾರ, ಇತ್ಯಾದಿ. ಉದಾ: ನಾವು ಸೋಯಾಬೀನ್ ಬೀಜಗಳನ್ನು ನೋಡಿದಾಗ ಅವು ದುಂಡಾಗಿದ್ದು ಕಂದು ಬಣ್ಣದಲ್ಲಿರುತ್ತವೆ ಎಂದು ಗುರುತಿಸುತ್ತೇವೆ, ಹಾಗೆಯೆ ಬತ್ತದ ಬೀಜಗಳನ್ನು ನೋಡಿದಾಗ ಅವುಗಳು ಉದ್ದವಾಗಿದ್ದು ಹಳದಿ ಬಣ್ಣದಲ್ಲಿರುತ್ತವೆ. ಅಂತೆಯೇ, ಎಫ್.ಪಿ.ಒ. ಗಳನ್ನು ಗುರುತಿಸಲು ಕೆಲವು ಗುಣಲಕ್ಷಣಗಳಿವೆ.







ಉದಾ. ಎಫ್.ಪಿ.ಒ ತಮ್ಮ ಸದಸ್ಯರಿಗೆ ಪರಿಕರಗಳ ಪೂರೈಕೆಯ ಸೇವೆಯಲ್ಲಿದ್ದರೆ. ಅಂತಹ ಎಫ್.ಪಿ.ಒ. ಇತರೆ ಪರಿಕರಗಳ ಖಾಸಗಿ ವ್ಯಾಪಾರಿಗಳು ಕೊಡುವ ಸೇವೆಗಳಿಗಿಂತ ಹೇಗೆ ಭಿನ್ನವಾಗಿದೆ? ಎಫ್.ಪಿ.ಒ ಹೊಂದಿರಬೇಕಾದ ಗುಣಲಕ್ಷಣಗಳು ಯಾವುವು ಎಂದು ನೀವು ಯೋಚಿಸುತ್ತೀರಿ.

| **ಎಫ್‌ಪಿಒ** | **ಖಾಸಗಿ ವ್ಯಾಪಾರಿ** |
| --- | --- |
| | |

ಮೇಲಿನ ಚರ್ಚೆ ಮತ್ತು ಚಿತ್ರಣ ನಮಗೆ ಎಫ್.ಪಿ.ಒ.ಗಳ ಪ್ರಮುಖ ಲಕ್ಷಣಗಳೆನೆಂದು ತಿಳಿಸುತ್ತವೆ.

# ಎಫ್‌ಪಿಒಗಳ ಪ್ರಮುಖ ಲಕ್ಷಣಗಳು

## ವ್ಯಾಪಾರದ ಉದ್ಯಮ



* ಉತ್ಪಾದನಾ ಪೂರ್ವ, ಉತ್ಪಾದನೆ, ಉತ್ಪಾದನಾ ನಂತರದ ಸೇವೆಗಳನ್ನು ಒದಗಿಸುತ್ತದೆ.

## ಸ್ವಾಯತ್ತ ಮತ್ತು ಸ್ವತಂತ್ರ್ಯ




* ಸದಸ್ಯರು ಮಾಲಿಕತ್ವವನ್ನು ಹೊಂದಿದ್ದಾರೆ, ಖಾಸಗಿ ಉದ್ದಿಮೆ.

## ಔಪಚಾರಿಕ ಸಂಸ್ಥೆ



* ಕಾನೂನುಬದ್ಧ ನೋಂದಾಯಿತ ಸಂಸ್ಥೆ, ಸಿಬ್ಬಂದಿ ಮತ್ತು ವ್ಯವಸ್ಥೆಗಳೊಂದಿಗೆ ಕಾನೂನುಬದ್ಧವಾಗಿ ಕಾರ್ಯನಿರ್ವಹಿಸುತ್ತದೆ.

## ಸದಸ್ಯರ ಒಡೆತನ



* ಸದಸ್ಯರ ಒಡೆತನದ, ಸದಸ್ಯರಿಂದ ನಿಯಂತ್ರಿಸಲ್ಪಡುವ ಸಂಸ್ಥೆ – ಸದಸ್ಯರಿಗೆ ಅಗತ್ಯವಾದ ಸೇವೆಗಳನ್ನು ಒದಗಿಸುತ್ತದೆ ಮತ್ತು ಸೇವೆಗಳನ್ನು ಸದಸ್ಯರು ಪಡೆಯುತ್ತಿದಾರೆ.

## ಸದಸ್ಯರಿಂದ ವ್ಯವಹಾರ ಬಂಡವಾಳ




* ಸದಸ್ಯರ ಕೊಡುಗೆಯಿಂದ ಇಕ್ವಿಟಿ/ಸಂಸ್ಥೆಯ ಬಂಡವಾಳ

## ಸ್ವಯಂ ಆಡಳಿತ



* ಸದಸ್ಯರಿಂದ ಮತ್ತು ಸದಸ್ಯರಿಂದ ಆಯ್ಕೆಯಾದ ನಿರ್ದೇಶಕರ ಮಂಡಳಿಯಿಂದ ಆಡಳಿತ

## ಪ್ರಜಾಸತ್ತಾತ್ಮಕವಾದ ನಿಯಂತ್ರಣ



* ಒಬ್ಬ ಸದಸ್ಯ – ಒಂದು ಮತ

ಮೇಲೆ ಸೂಚಿಸಿದಂತೆ, ರೈತ ಉತ್ಪಾದಕರ ಸಂಸ್ಥೆ (ಎಫ್‌ಪಿಓ) ನೋಂದಾಯಿತ, ಔಪಚಾರಿಕ ಘಟಕವಾಗಿದೆ. ಇದು ಅದರ ಆಡಳಿತ ಮಂಡಳಿ, ಮುಖಾಂತರ ಆಡಳಿತ ನಡೆಸುತ್ತೇವೆ ನಿರ್ವಹಣೆಗೆ ಸಿಬ್ಬಂದಿ ಮತ್ತು ಕಾರ್ಯಾಚರಣೆಗಳ ವ್ಯವಸ್ಥೆಗಳನ್ನು ಹೊಂದಿದೆ. ಇದು ಎಲ್ಲಾ ಕಾನೂನುಗಳನ್ನು ಅನುಸರಿಸುವ ಕಾನೂನು ಘಟಕವಾಗಿದೆ. ಇದು ರೈತ ಸದಸ್ಯರ ಒಡೆತನದ ಖಾಸಗಿ ವ್ಯಾಪಾರ ಉದ್ಯಮವಾಗಿದೆ. ಇದು ಪರಿಕರಗಳ ಪೂರೈಕೆ, ಬೀಜ ಉತ್ಪಾದನೆ, ಸದಸ್ಯರಿಗೆ ಹಣಕಾಸು, ಉತ್ಪಾದಕತೆ, ಸಂಗ್ರಹಣೆ, ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಮತ್ತು ಮಾರುಕಟ್ಟೆ ಮುಂತಾದ ವಿಭಿನ್ನ ಚಟುವಟಿಕೆಗಳ ಸೇವೆಗಳನ್ನು ಸದಸ್ಯ ರೈತರಿಗೆ ಒದಗಿಸುತ್ತಿದೆ.

# 4

# ರೈತ ಉತ್ಪಾದಕರ ಸಂಸ್ಥೆ (ಎಫ್.ಪಿ.ಒ)ಗಳ ನೋಂದಣಿ, ನೋಂದಣಿಯ ಅಗತ್ಯ ಮತ್ತು ಮಹತ್ವ

**ಅಧಿವೇಶನದ ಉದ್ದೇಶಗಳು:**



- **ಸಂಸ್ಥೆಯ ನೋಂದಣಿಯ ಅಗತ್ಯತೆ ಮತ್ತು ಪ್ರಾಮುಖ್ಯತೆಯ ಬಗ್ಗೆ ತಿಳುವಳಿಕೆಯನ್ನು ಪಡೆಯುವುದು**
- **ಎಫ್.ಪಿ.ಒ.ಗಳ ವಿವಿದ ಕಾನೂನುಗಳ ಬಗ್ಗೆ ಹಾಗು ಅವುಗಳ ಅನುಸರಣೆಯ ಬಗ್ಗೆ ತಿಳಿಯುವುದು**

**ವಿಷಯಗಳು**

1. ನೋಂದಣಿಯ ಅಗತ್ಯತೆ ಮತ್ತು ಪ್ರಾಮುಖ್ಯತೆ
2. ಎಫ್.ಪಿ.ಒ.ಗಳಿಗಾಗಿ ವಿಭಿನ್ನ ಕಾನೂನುಗಳು ಮತ್ತು ಕಾಲ ಕಾಲಕ್ಕೆ ಅವುಗಳ ಅನುಸರಣೆ

ವಿಕಾಸನ ಸಂಸ್ಥೆಯ ಪ್ರತಿನಿದಿಗಳು ಈ ಚರ್ಚೆಯನ್ನು ಹಿಂದಿನ ಅದಿವೇಶನದ ವಿಷಯಗಳನ್ನು ಮೇಲುಕು ಹಾಕುವುದರೊಂದಿಗೆ ಪ್ರಾರಂಬಿಸಿದರು. ಹಿಂದಿನ ಅಧಿವೇಶನಗಳಲ್ಲಿ ನೋಡಿದಂತೆ, ಎಫ್.ಪಿ.ಒ.ಗಳು ತಮ್ಮ ಸದಸ್ಯರಿಗೆ ಸೇವೆ ಸಲ್ಲಿಸಲು ವಿಭಿನ್ನ ವ್ಯವಹಾರ ಚಟುವಟಿಕೆಗಳನ್ನು ಕೈಗೊಳ್ಳಬೇಕಾಗುತ್ತದೆ. ಇದಕ್ಕಾಗಿ, ಎಫ್.ಪಿ.ಒ.ಗಳು ವಿಭಿನ್ನ ಸಂಸ್ಥೆಗಳೊಂದಿಗೆ ಒಪ್ಪಂದಗಳನ್ನು ಮಾಡಿಕೊಳ್ಳಬೇಕು, ಹಣಕಾಸು ನೆರವು ತೆಗೆದುಕೊಳ್ಳಬೇಕು ಮತ್ತು ಇತರೆ ಅಗತ್ಯ ಸಂಪನ್ಮೂಲಗಳನ್ನು ಸಂಗ್ರಹಿಸಬೇಕು. ಇವುಗಳನ್ನು ಪಡೆಯಲು ಎಫ್.ಪಿ.ಒ ಕಾನೂನು ಘಟಕವಾಗಿರಬೇಕು ಮತ್ತು ಕಾನೂನು ಬದ್ದವಾಗಿ ನೋಂದಣಿಯಾಗಿರುವ ಅಗತ್ಯವಿದೆ.

ನಂತರ ಅವರು ಭಾಗವಹಿಸಿದವರಿಗೆ ಕೇಳಿದರು, ನೋಂದಣಿ ಎಂದರೇನು? ಉದಾ: ಅರಣ್ಯ ಉತ್ಪನ್ನಗಳಿಗೆ ಸಂಬಂಧಿಸಿದ ವ್ಯವಹಾರಗಳನ್ನು ಕೈಗೊಳ್ಳಲು ನಾವು ಎಫ್.ಪಿ.ಒ ರಚಿಸಬೇಕಾದರೆ; ನಾವು ನಮ್ಮ ಎಫ್.ಪಿ.ಒ ಅನ್ನು ಅರಣ್ಯ ಇಲಾಖೆಯಲ್ಲಿ ನೋಂದಾಯಿಸಬೇಕೆ?. ನಾವು ನಮ್ಮ ಎಫ್.ಪಿ.ಒ ಅನ್ನು ಸಹಕಾರಿ ಕಾಯ್ದೆ ಅಡಿಯಲ್ಲಿ ನೋಂದಾಯಿಸಬೇಕೆ?. ಈ ಎರಡು ನೋಂದಣಿಗಳ ನಡುವಿನ ವ್ಯತ್ಯಾಸವೇನು?

ಕೆಲವು ಉತ್ತರಗಳನ್ನು ಪಡೆದ ನಂತರ, ಈ ಕೆಳಗಿನಂತೆ ವಿವರಿಸಿದರು.

ನಾವು ಅರಣ್ಯ ಉತ್ಪನ್ನಗಳ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವ ಉದ್ದೇಶವಿದ್ದರೆ, ಅರಣ್ಯ ಇಲಾಖೆಯಲ್ಲಿ ನಮ್ಮ ಸಂಸ್ಥೆಯನ್ನು ನೊಂದಾಯಿಸಲು ಆಗುವುದಿಲ್ಲ. ನಾವು ಅರಣ್ಯ ಉತ್ಪನ್ನಗಳ ವ್ಯವಹಾರದಲ್ಲಿ ತೊಡಗಿಸಿಕೊಂಡರು ಸಹ ನಮ್ಮ ಸಂಸ್ಥೆಯನ್ನು ಕಂಪನಿಗಳ ಕಾಯ್ದೆ ಅಡಿಯಲ್ಲಿ ಅಥವಾ ಸಹಕಾರಿ ಕಾಯ್ದೆ ಅಡಿಯಲ್ಲಿ ನೊಂದಾಯಿಸಬೇಕು. ಆದರೆ ನಾವು ಅರಣ್ಯ ಉತ್ಪನ್ನಗಳ ವ್ಯವಹಾರದಲ್ಲಿ ತೊಡಗಿಸಿಕೊಳ್ಳುವುದರಿಂದ ಅರಣ್ಯ ಇಲಾಖೆಗೆ ಲಿಖಿತ ರೂಪದಲ್ಲಿ ತಿಳಿಸಿ ಅನುಮೋದನೆ ಪಡೆಯಬೇಕು.

ಇದರರ್ಥ, ಸಂಸ್ಥೆಯನ್ನು ನೋಂದಾಯಿಸಿದರೆ ಅದು ವ್ಯಕ್ತಿಗಳಿಗೆ ಅನ್ವಯವಾಗುವ ಹಕ್ಕುಗಳನ್ನು ಹೊಂದಿರುತ್ತದೆ. ಇದು ಪರಿಕರಗಳನ್ನು ಖರೀದಿಸಬಹುದು, ಮಾರಾಟ ಮಾಡಬಹುದು, ಆಸ್ತಿಯನ್ನು ಹೊಂದಬಹುದು, ವ್ಯಾಪಾರವನ್ನು ಮಾಡಬಹುದು ಹಾಗು ಎ.ಒ.ಎ ನಲ್ಲಿ ಸೂಚಿಸಿರುವಂತೆ ಕಾರ್ಯಚಟುವಟಿಕೆಗಳನ್ನು ಕೈಗೊಳ್ಳಬಹುದು.

ಉದಾಹರಣೆಗೆ, ನಮ್ಮ ಕುಟುಂಬವು ಒಂದು ಎಕರೆ ಭೂಮಿಯನ್ನು ಹೊಂದಿದ್ದರೆ, ನಾವು ನಮ್ಮ ಭೂಮಿಯನ್ನು ಏಕೆ ನೋಂದಾಯಿಸಿಕೊಳ್ಳುತ್ತೇವೆ? ಕೆಳಗಿನ ಜಾಗದಲ್ಲಿ ನಿಮ್ಮ ಪ್ರತಿಕ್ರಿಯೆಯನ್ನು ಬರೆಯಿರಿ.

________________________________________

________________________________________

________________________________________

ಉತ್ತರಗಳನ್ನು ಸ್ವೀಕರಿಸಿದ ನಂತರ, ಈ ಕೆಳಗಿನಂತೆ ವಿಷಯಗಳನ್ನು ಕ್ರೋಢೀಕರಿಸಿದರು.

ಭೂಮಿಯನ್ನು ನೋಂದಾಯಿಸುವ ಮೂಲಕ, ನಮ್ಮ ಹೆಸರಿನಲ್ಲಿ ಆ ಭೂಮಿಯ ಮೇಲೆ ಅಡಮಾನ ಅಥವಾ ಗುತ್ತಿಗೆ ಅಥವಾ ಮಾರಾಟದ ಹಕ್ಕುಗಳಂತಹ ಕಾನೂನು ಬದ್ದ ಹಕ್ಕುಗಳನ್ನು ನಾವು ಪಡೆಯುತ್ತೇವೆ. ನಾವು ಬೆಳೆ ಬೆಳೆಯಬವುದು, ನಾವು ಹಣಕಾಸು ಸಂಸ್ಥೆಗಳಿಂದ ಸಾಲವನ್ನು ನಮ್ಮ ಹೆಸರಿನಲ್ಲಿ ಪಡೆಯಬಹುದು. ಯಾವುದೇ ವ್ಯಕ್ತಿಯು ನಮ್ಮ ಭೂಮಿಯನ್ನು ಅತಿಕ್ರಮಣ ಮಾಡಿದರೆ ನಾವು ಅವನ / ಅವಳ ವಿರುದ್ದ ಪ್ರಕರಣ ದಾಖಲಿಸಬಹುದು ಮತ್ತು ಅದೇ ರೀತಿ ನಾವು ಕೆಲವು ಸಂಸ್ಥೆಗಳ ಭೂಮಿಯನ್ನು ಅತಿಕ್ರಮಿಸಿದರೆ, ಅವರು ನಮ್ಮ ವಿರುದ್ದ ಪ್ರಕರಣ ದಾಖಲಿಸಬಹುದು ಮತ್ತೊಂದು ಪ್ರಮುಖ ವಿಷಯವೆಂದರೆ ನಾವು ನಮ್ಮ ಭೂಮಿಯನ್ನು ನಮ್ಮ ಮುಂದಿನ ಪೀಳಿಗೆಗೆ ವರ್ಗಾಯಿಸಬಹುದು ಅಂದರೆ ನಮ್ಮ ಮಗಳು / ಮಗ, ನಮ್ಮ ಮೊಮ್ಮಗಳು/ ಮೊಮ್ಮಗ ಇತ್ಯಾದಿ. ಈ ಎಲ್ಲಾ ಚಟುವಟಿಕೆಗಳಿಗೆ ಕಾನೂನು ಬದ್ದ ರಕ್ಷಣೆ ಇರುತ್ತದೆ.

ಅಂತೆಯೇ, ನಾವು ನಮ್ಮ ಎಫ್.ಪಿ.ಒ ಅನ್ನು ನೋಂದಾಯಿಸಿದರೆ, ನಮ್ಮ ಎಫ್.ಪಿ.ಒ ಕಾನೂನು ಹಕ್ಕುಗಳನ್ನು ಪಡೆಯುತ್ತದೆ ಎಂದರೆ ಇದರ ಅರ್ಥ ಒಬ್ಬ ವ್ಯಕ್ತಿಯಂತೆ, ಎಫ್.ಪಿ.ಒ ಹೆಸರಿನಲ್ಲಿ.

1. ಬಾಹ್ಯ ಸಂಸ್ಥೆಗಳ / ಏಜೆನ್ಸಿಗಳೊಂದಿಗೆ ಒಪ್ಪಂದ ಮಾಡಿಕೊಳ್ಳಬಹುದು.

2. ಸ್ವತ್ತುಗಳನ್ನು ಹೊಂದಬಹುದು ಮತ್ತು ಸಂಸ್ಥೆಯ ಹೆಸರಿನಲ್ಲಿ ಖರೀದಿ, ಮಾರಾಟ ಮತ್ತು ಆಸ್ತಿಗಳ ಅಡಮಾನದಂತಹ ವ್ಯವಹಾರಗಳಲ್ಲಿ ಭಾಗಿಯಾಗಬಹುದು.

3. ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳಬಹುದು ಅಥವಾ ಇತರರು ಮೊಕದ್ದಮೆ ಹೂಡಬಹುದು.

4. ರೈತರು ಸದಸ್ಯತ್ವವನ್ನು ಪಡೆಯಬಹುದು ಮತ್ತು ಹಿಂತೆಗೆದುಕೊಳ್ಳಬಹುದು. ಎಫ್.ಪಿ.ಒ ಅದರ ಹೆಸರಿನಲ್ಲಿ ಭವಿಷ್ಯದ ಪೀಳಿಗೆಗೆ ಸೇವೆಗಳನ್ನು ಒದಗಿಸುವುದನ್ನು ಮುಂದುವರಿಸಬಹುದು.

## ಎಫ್.ಪಿ.ಒ.ಗಳಿಗಾಗಿ ಶಾಸನಬದ್ಧ ಕಾನೂನುಗಳು

ಎಫ್.ಪಿ.ಒ.ಗಳಿಗೆ ಸೂಕ್ತವಾದ ಕಾನೂನುಗಳು ಈ ಕೆಳಗಿನಂತಿವೆ

1. ಉತ್ಪಾದಕರ ಕಂಪನಿಯು, ಕಂಪನಿಗಳ ಕಾಯ್ದೆ 1956 ಅಡಿ ಪರಿಚ್ಛೇದ IX A ಗೆ 2013 ರಲ್ಲಿ ತಿದ್ದುಪಡಿಯಾದ ಕಂಪನಿ ಕಾಯ್ದೆ ಅಡಿಯಲ್ಲಿ ಕಾರ್ಪೊರೇಟ್ ಸಚಿವಾಲಯ, ಭಾರತ ಸರ್ಕಾರರಲ್ಲಿ ನೋಂದಾಯಿಸಲಾಗುತ್ತದೆ.

2. ಸಹಕಾರಿ ಸಂಸ್ಥೆಗಳು, ಬಹು ರಾಜ್ಯ ಸಹಕಾರಿ ಸಂಘಗಳ ಕಾಯ್ದೆ, ಕೃಷಿ ಮತ್ತು ರೈತರ ಕಲ್ಯಾಣ ಸಚಿವಾಲಯ, ಭಾರತ ಸರ್ಕಾರದ ಅಡಿಯಲ್ಲಿಯು ಸಹ ನೋಂದಾಯಿಸಬಹುದಾಗಿದೆ.

3. ಆಯ ರಾಜ್ಯಗಳ, ರಾಜ್ಯಗಳ ಸಹಕಾರಿ ಕಾಯಿದೆಗಳ ಅಡಿಯಲ್ಲಿ. ಉದಾಹರಣೆಗೆ, ಕರ್ನಾಟಕ ಸಹಕಾರ ಕಾಯ್ದೆ 1956, ಕರ್ನಾಟಕ ಅಡಿಯಲ್ಲಿಯೂ ಸಹ ನೋಂದಾಯಿಸಬಹುದಾಗಿದೆ.

ರೈತ ಉತ್ಪಾದಕರ ಕಂಪೆನಿಗಳು, ಕಂಪನಿಗಳ ನಿಬಂದಕರಿಂದ ಅನುಮೋದಿಸಲ್ಪಟ್ಟ, ಆರ್ಟಿಕಲ್ಸ್ ಆಫ್ ಅಸೋಸಿಯೋಷನ್ (ಎ.ಒ.ಎ) ಅಡಿಯಲ್ಲಿ ನಿರ್ದೇಶಿಸಲ್ಪಡುತ್ತವೆ ಮತ್ತು ಸಹಕಾರ ಸಂಘಗಳು ಸಹಕಾರಿ ಸಂಸ್ಥೆಗಳ ನಿಬಂಧಕರಿಂದ ಅನುಮೋದಿಸಲ್ಪಟ್ಟ ಬೈಲಾಗಳ ಅಡಿಯಲ್ಲಿ ನಿರ್ದೇಶಿಸಲ್ಪಡುತ್ತವೆ.

ಆರ್ಟಿಕಲ್ಸ್ ಆಫ್ ಅಸೋಸಿಯೋಷನ್ / ಬೈಲಾಗಳ ಲೇಖನಗಳು ಎಫ್.ಪಿ.ಒ.ನ ಉದ್ದೇಶಗಳು, ಅವುಗಳ ಚಟುವಟಿಕೆಗಳು, ಸಾಂಸ್ಥಿಕ ರಚನೆ ಮತ್ತು ಎಫ್.ಪಿ.ಒ.ಗಳ ಕಾರ್ಯನಿರ್ವಹಣೆಗೆ ಕಾನೂನು ಬದ್ದ ಮಾರ್ಗದರ್ಶಿ ದಾಖಲೆಯಾಗಿ ಸಂಸ್ಥೆಯ ಕಾರ್ಯಚರಣೆಗೆ ಪರಿಗಣಿಸಲ್ಪಡುತ್ತದೆ..

ಇದರೊಂದಿಗೆ ವಿಕಾಸನ ಸಂಸ್ಥೆಯು, ರೈತ ಉತ್ಪಾದಕರ ಸಂಸ್ಥೆಯ ದೃಷ್ಟಿಕೋನವನ್ನು ತಿಳಿಸಲು ಏರ್ಪಡಿಸಿದ್ದ ಕಾರ್ಯಕ್ರಮವನ್ನು ಮುಕ್ತಾಯಗೊಳಿಸಿ, ಈ ಮಾಡ್ಯೂಲ್‌ನಲ್ಲಿ, ಕೃಷಿಯಲ್ಲಿನ ತೊಂದರೆಗಳನ್ನು ನಿವಾರಿಸಲು ಸಾಮೂಹಿಕ ಕ್ರಿಯೆಯ ಅಗತ್ಯತೆಯ ಮೂಲಭೂತ ಅಂಶಗಳು, ಸಾಮೂಹಿಕ ಕ್ರಿಯೆಗೆ ಔಪಚಾರಿಕ ಘಟಕದ ಅಗತ್ಯತೆ, ಅರ್ಥ, ಪ್ರಮುಖ ಲಕ್ಷಣಗಳು, ಮೌಲ್ಯಗಳು ಮತ್ತು ಎಫ್.ಪಿ.ಒ.ಗಳ ತತ್ವಗಳನ್ನು ಒಳಗೊಂಡಂತೆ ಅಲಾವಾರು ವಿಷಯಗಳ ಬಗ್ಗೆ ತಿಳಿದುಕೋಂಡಿದ್ದೇವೆ ಎಂದು ತಿಳಿಸಿದರು ಮತ್ತು ಮುಂದಿನ ಕಾರ್ಯಕ್ರಮದಲ್ಲಿ ಸಹಕಾರಿ ತತ್ವಗಳು / ಪರಸ್ಪರ ಸಹಾಯ ತತ್ವಗಳ ಬಗ್ಗೆ ಚರ್ಚಿಸುತ್ತೇವೆ ಎಂದು ತಿಳಿಸಿದರು.

ರಾಮಯ್ಯ ಮತ್ತು ಸುದರ್ಶನ್ ಈ ಮೊದಲು ರೈತರ ಗುಂಪುಗಳ ಬಗ್ಗೆ ತಿಳಿದಿದ್ದರೂ ಮತ್ತು ನೋಡಿದ್ದರೂ ಸಹ, ಅಳವಡಿಸಿಕೊಂಡಿರುವ ತತ್ವಗಳು, ಮಾರ್ಗಗಳು ಹಾಗೂ ಸಾಂಸ್ಥಿಕ ರಚನೆಯು ವಿಭಿನ್ನವಾಗಿದ್ದು ಇದರಿಂದ ರೈತರ ಸಮಸ್ಯೆಗಳಿಗೆ ಉತ್ತರ ಕಂಡುಕೂಳ್ಳಬಹುದು ಎಂಬುದು ಅರಿತುಕೊಂಡರು. ಅವರು ಈಗ ತುಂಬಾ ಉತ್ಸುಕರಾಗಿದ್ದಾರೆ, ತಮ್ಮ ಎಫ್.ಪಿ.ಒ ದ ಆರಂಭಿಕ ನೋಂದಣಿಯನ್ನು ಎದುರು ನೊಡುತ್ತಿದಾರೆ ಮತ್ತು ಸಹವರ್ತಿ ರೈತರನ್ನು ತಮ್ಮ ಎಫ್.ಪಿ.ಒ.ನಲ್ಲಿ ಸದಸ್ಯರನ್ನಾಗಿ ಸೇರಿಸಲು ಸಜ್ಜುಗೊಳಿಸುವ ದೃಡವಾದ ನಿರ್ಧಾರವನ್ನು ಮಾಡಿದರು. ರಾಮಯ್ಯ ಮತ್ತು ಸುದರ್ಶನ್ ತಮ್ಮ ಎಫ್.ಪಿ.ಒ.ನಿಂದ ಭರವಸೆಯ ಕಿರಣವನ್ನು ನೋಡಿ ತಮ್ಮ ಹಳ್ಳಿಗೆ ಮರಳಲು ಪ್ರಾರಂಭಿಸಿದರು.

# ಮಾದರಿ ನೋಂದಣಿ ಪ್ರಮಾಣಪತ್ರ

सत्यमेव जयते

**GOVERNMENT OF INDIA**
**MINISTRY OF CORPORATE AFFAIRS**

Central Registration Centre

## Certificate of Incorporation

[Pursuant to sub-section (2) of section 7 of the Companies Act, 2013 (18 of 2013) and rule 18 of the Companies (Incorporation) Rules, 2014]

I hereby certify that SRI NALLAREDDY SWAMY FARMERS PRODUCER COMPANY LIMITED is incorporated on this Twenty fourth day of May Two thousand nineteen under the Companies Act, 2013 (18 of 2013) and that the company is limited by shares.

The Corporate Identity Number of the company is U01100AP2019PTC111980.

The Permanent Account Number (PAN) of the company is **ABCCS1151N** */@

The Tax Deduction and Collection Account Number (TAN) of the company is **VPNS16430B** */@

Given under my hand at Manesar this Twenty fourth day of May Two thousand nineteen .

Digital Signature Certificate
ALOK TANDON
Deputy Registrar Of Companies
For and on behalf of the Jurisdictional Registrar of Companies
Registrar of Companies
Central Registration Centre

Disclaimer: This certificate only evidences incorporation of the company on the basis of documents and declarations of the applicant(s). This certificate is neither a license nor permission to conduct business or solicit deposits or funds from public. Permission of sector regulator is necessary wherever required. Registration status and other details of the company can be verified on www.mca.gov.in

---

Mailing Address as per record available in Registrar of Companies office:

SRI NALLAREDDY SWAMY FARMERS PRODUCER COMPANY LIMITED
3-105, Handri Khairawadi, Gonegandla, KURNOOL, Kurnool, Andhra Pradesh, India, 518463

* as issued by the Income Tax Department

File No.DCOATP-NC0MACS(REG)/24/2019-JA(2)-DCO-ATP

**GOVERNMENT OF ANDHRA PRADESH**
**DEPARTMENT OF COOPERATION**

## CERTIFICATE

*(Certificate of Registration under section 5 of the Andhra Pradesh Mutually Aided Cooperative Societies Act, 1995)*

***Under the powers vested in terms of Go.Ms.No.118 Agriculture & Cooperation (Coop.IV) Department, Dated: 02-04-1996,*** 31 the Registrar of Mutually Aided Cooperative Societies/District Cooperative Officer, Ananthapuramu do hereby register **Peddavaduguru Mahila Raithu Utpathidarula Paraspara Sahayaka Sahakara Sangham Ltd., Ravuludiki Village, Peddavaduguru Mandal, Ananthapuramu District** with Registration Number **AMC/ATP/DCO/2019/4878** together with its bye-laws.

Given under my hand and seal on this 21st day of May-2019.

**P.Narayanaswamy,**
**Registrar of Mutually Aided Cooperative Societies/**
**District Cooperative Officer,**
**Ananthapuramu.**

Signature valid

Digitally signed by NA[illegible]AYANA
SWAMY PATHIPAT[illegible]
Date: 2019.05.21 [illegible]:26:21 IST
Reason: Approved

## ಅನುಬಂಧ

# ಸಹಕಾರಿ ತತ್ವಗಳು

### ತತ್ವ 1 : ಸ್ವಯಂಪ್ರೇರಿತ ಮತ್ತು ಮುಕ್ತ ಸದಸ್ಯತ್ವ

ಎಫ್.ಪಿ.ಓ ಕಾರ್ಯಾಚರಣಾ ಪ್ರದೇಶದಲ್ಲಿ, ಎಫ್.ಪಿ.ಓ ಸೇವೆಗಳನ್ನು ಸ್ವಯಂ ಪ್ರೇರಣೆಯಿಂದ ಬಳಸಿಕೊಳ್ಳಬಲ್ಲ ಮತ್ತು ಸದಸ್ಯರ ಜವಾಬ್ದಾರಿಗಳನ್ನು ನಿರ್ವಹಿಸಲು ಸಿದ್ಧರಿರುವವರನ್ನು ಮಾತ್ರ ಸದಸ್ಯರನ್ನಾಗಿ ಸೇರಿಸಿಕೊಳ್ಳಬೇಕು. ಆದಾಗ್ಯೂ, ಒಬ್ಬ ವ್ಯಕ್ತಿಯು ಸೇವೆಗಳನ್ನು ಬಳಸಲು ಸದಸ್ಯರಾದರೆ ಸಾಕಾಗುವುದಿಲ್ಲ, ಸದಸ್ಯನಾಗಿ ಉಳಿಯಲು ಸದಸ್ಯರು ಉತ್ಪಾದಕರ ಕಂಪನಿಯ ಸೇವೆಗಳನ್ನು ನಿರಂತರವಾಗಿ ಬಳಸಿಕೊಳ್ಳಬೇಕು ಮತ್ತು ಉತ್ಪಾದಕರ ಕಂಪನಿಯ ಎಲ್ಲಾ ಚಟುವಟಿಕೆಗಳಲ್ಲಿ ಬಾಗವಹಿಸಬೇಕು ಮತ್ತು ಸದಸ್ಯರಿಗೆ ಬೇಕಾಗುವ ಪರಿಕರಗಳನ್ನು ಕಂಪನಿಯಿಂದ ಖರೀದಿಸಬೇಕು ಮತ್ತು ಸದಸ್ಯರು ಬೆಳೆದ ಉತ್ಪನ್ನಗಳನ್ನು ಕಂಪನಿಯ ಮುಖಾಂತರ ಮಾರಾಟ ಮಾಡಬೇಕು.

ಎಫ್.ಪಿ.ಓ ರಚನೆಗೆ ಬಾಹ್ಯ ಅಭಿವೃದ್ಧಿ ಸಂಸ್ಥೆಯಿಂದ ನೆರವನ್ನು ಉಪಯೋಗಿಸಿಕೊಂಡಿದ್ದರು ಸಹ ರೈತರು ಸದಸ್ಯತ್ವವನ್ನು ಸ್ವಯಂಪ್ರೇರಣೆಯಿಂದ ಪಡೆಯುತ್ತಾರೆ ಹೊರತು ಒತ್ತಾಯದಿಂದಲ್ಲ.

### ತತ್ವ 2 : ಪ್ರಜಾಸತ್ತಾತ್ಮಕವಾಗಿ ಸದಸ್ಯರಿಂದ ನಿಯಂತ್ರಣ

ಎಫ್.ಪಿ.ಓ.ಗಳಲ್ಲಿ ಎಲ್ಲಾ ಸದಸ್ಯರಿಗೆ ಸಮಾನ ಮತದಾನದ ಹಕ್ಕು ಇರುತ್ತದೆ. ರೈತ ಉತ್ಪಾದಕರ ಸಂಸ್ಥೆಗಳ ಒಕ್ಕೂಟಗಳನ್ನು ರಚಿಸುವಾಗಲು ಸಹ ಪ್ರಜಾಸತ್ತಾತ್ಮಕವಾಗಿ ಸದಸ್ಯರಿಗೆ ಸಮಾನವಾದ ಹಕ್ಕುಗಳನ್ನು ನೀಡಲಾಗುತ್ತದೆ.

ಎಫ್.ಪಿ.ಓ.ಗಳಲ್ಲಿ ಸದಸ್ಯರು ಮಂಡಳಿಯ ನಿರ್ದೇಶಕರನ್ನು ಆಯ್ಕೆ ಮಾಡುವ ಮೂಲಕ ಪ್ರಜಾಸತ್ತಾತ್ಮಕವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಮತ್ತು ನೀತಿಗಳನ್ನು ರೂಪಿಸುವಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಾರೆ ಮತ್ತು ನಿಯಂತ್ರಿಸುತ್ತಾರೆ. ಮುಕ್ತತೆ, ಪಾರದರ್ಶಕತೆ ಮತ್ತು ಹೊಣೆಗಾರಿಕೆಯು ಪ್ರಜಾಪ್ರಭುತ್ವ ಆಡಳಿತದ ಮೂರು ಪ್ರಮುಖ ಅಂಶಗಳಾಗಿವೆ.

### ತತ್ವ 3 : ಸದಸ್ಯರ ಆರ್ಥಿಕ ಭಾಗವಹಿಸುವಿಕೆ

ಎಫ್.ಪಿ.ಓ ನ್ಯಾಯಯೋಚಿತ ಪದ್ಧತಿಗಳನ್ನು ಅನುಸರಿಸಬೇಕು ಎಂದು ತತ್ವ ಹೇಳುತ್ತದೆ,
ಅವು ಯವುವೆಂದರೆ,

ಎಫ್.ಪಿ.ಓ.ಗೆ ಲಾಭ ದೊರೆತರೆ, ಪ್ರತಿಯೊಬ್ಬರೂ ಸಂತೋಷವಾಗಿರುತ್ತಾರೆ ಮತ್ತು ಅದರಲ್ಲಿ ಪಾಲನ್ನು ಪಡೆಯುತ್ತಾರೆ. ನಷ್ಟದ ಸಂದರ್ಭದಲ್ಲಿ ಎಫ್.ಪಿ.ಓ ಸದಸ್ಯರ ಮೇಲಿನ ಹೊರೆ ಕಡಿಮೆ ಮಾಡಲು ಅಪಾಯಗಳ ಮಟ್ಟವನ್ನು ತಗ್ಗಿಸಲು/ನಿಯಂತ್ರಿಸಲು ಕ್ರಮಗಳನ್ನು ತೆಗೆದುಕೊಳ್ಳುವ ಮೂಲಕ ಸದಸ್ಯರ ಹಿತಾಸಕ್ತಿಯನ್ನು ರಕ್ಷಿಸಬೇಕು. ಅದಕ್ಕಾಗಿ ಎಫ್.ಪಿ.ಓ ನ ಲಾಭಾಂಶದಲ್ಲಿ ಬರೆದ ಭಾಗವನ್ನು ಪ್ರತಿವರ್ಷವು ಮೀಸಲು ಬಂಡವಾಳವನ್ನು ತೆಗೆದಿರಿಸಲಾಗುತ್ತದೆ. ಆ ನಿದಿಯನ್ನು ಕಷ್ಟಕಾಲದಲ್ಲಿ ಉಪಯೋಗಿಸಿಕೂಳಬಹುದು.

ಹೆಚ್ಚುವರಿ ಲಾಭವನ್ನು ಎರಡು ವಿಧಾನಗಳಿಗೆ ಬಳಸಬಹುದು.

(1) ನಮ್ಮ ಸದಸ್ಯರು ಬಳಸುವ ಸೇವೆಗಳಿಂದಾಗಿ ನಮ್ಮ ಎಫ್.ಪಿ.ಓ ಲಾಭ ಪಡೆಯುತ್ತದೆ.

ಆದ್ದರಿಂದ, ಸದಸ್ಯರ/ಷೇರುದಾರರ ಷೇರು ಬಂಡವಾಳ ಮತ್ತು ಠೇವಣಿಗಳ ಮೇಲಿನ ಬಡ್ಡಿ ಜೊತೆಗೆ ಹೆಚ್ಚುವರಿಯಾಗಿ ಯಾವ ಸದಸ್ಯನು ಸದಸ್ಯತ್ವ ಮಾನದಂಡಗಳನ್ನು ಪಾಲಿಸುವ ಮತ್ತು ಎಫ್.ಪಿ.ಓ ಸೇವೆಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಬಳಸುವ ಸದಸ್ಯರು ಮತ್ತು ಎಫ್.ಪಿ.ಓ ಜೊತೆಗಿನ ಸದಸ್ಯರ ವಹಿವಾಟಿಗೆ ಅನುಗುಣವಾಗಿ ಲಾಭ ಪಡೆಯಬಹುದು. ಉದಾಹರಣೆಗೆ, ಡೈರಿ ಎಫ್.ಪಿ.ಓ.ದಲ್ಲಿ, ಒಬ್ಬ ಸದಸ್ಯನು ವರ್ಷಕ್ಕೆ 300 ಲೀಟರ್ ಹಾಲನ್ನು ಪೂರೈಸುತ್ತಾನೆ ಮತ್ತು ಹೈನುಗಾರಿಕೆಗೆ ಬೇಕಾದ ಪಶು ಆಹಾರ, ಆರ್ಥಿಕ ನೆರವು ಹಾಗೂ ಇತರೆ ತಾಂತ್ರಿಕ ಸೇವೆಯನ್ನು ಸಹ ಬಳಸುತ್ತಾನೆ; ಆದರೆ ಇನ್ನೊಬ್ಬ ಸದಸ್ಯನು ವರ್ಷಕ್ಕೆ 300 ಲೀಟರ್ ಪೂರೈಸುತ್ತಾನೆ ಆದರೆ ಇತರೆ ಸೇವೆಗಳನ್ನು ಬಳಸುವುದಿಲ್ಲ. ಈ ಸಂದರ್ಭದಲ್ಲಿ ಯಾವ ಸದಸ್ಯರು ಹೆಚ್ಚಿನ ಹಾಲನ್ನು ಪೂರೈಸಿರುತ್ತಾರೊ ಮತ್ತು ಹೈನುಗಾರಿಕೆಗೆ ಬೇಕಾದ ಪಶು ಆಹಾರ, ಆರ್ಥಿಕ ನೆರವು ಹಾಗೂ ಇತರೆ ತಾಂತ್ರಿಕ ಸೇವೆಯನ್ನು ಸಹ ಬಳಸಿರುತ್ತಾರೂ ಅಂತಹ ಸದಸ್ಯರು ಸಂಸ್ಥೆಯ ಲಾಬಾಂಶದಲ್ಲಿ ಹೆಚ್ಚಿನ ಪಾಲನ್ನು ಪಡೆಯಲು ಅರ್ಹರಾಗಿರುತ್ತಾರೆ/ಪಡೆಯುತ್ತಾರೆ.

(2) ಸದಸ್ಯರ ಅನುಮೋದನೆಯೊಂದಿಗೆ ಸಂಸ್ಥೆಯ ಇತರೆ ಸೇವೆಗಳಾದ ಶಿಕ್ಷಣ, ಆರೋಗ್ಯ ಇತ್ಯಾದಿ ಸೇವೆಗಳನ್ನು ಕಂಪನಿಯ ಲಾಭಂಶದ ಮೊತ್ತದಿಂದ ಹಮ್ಮಿಕೊಳಬಹುದಾಗಿದೆ. ಈ ಸೇವೆಗಳನ್ನು ಎಲ್ಲರಿಗೂ ಸಮಾನವಾಗಿ ದೊರೆಯುವಂತೆ ನೋಡಿಕೊಳ್ಳುವುದು ಸಂಸ್ಥೆಯ ಜವಾಬ್ದಾರಿ.

## ತತ್ವ 4 : ಸ್ವಾಯತ್ತತೆ ಮತ್ತು ಸ್ವಾತಂತ್ರ್ಯ

ಸಹಕಾರಿ ಸಂಸ್ಥೆಗಳು ಸ್ವತಂತ್ರವಾಗಿ ಆಡಳಿತ ನಡೆಸಲು ಮತ್ತು ವ್ಯವಹಾರಗಳನ್ನು ನಿಯಂತ್ರಿಸಲು ತಮ್ಮದೇ ಆದ ಕಾರ್ಯಾಚರಣೆಯ ನಿಯಮಗಳನ್ನು ಕಾನೂನು ಚೌಕಟ್ಟಿನಡಿಯಲ್ಲಿ ರಚಹಿಸಿಕೊಳ್ಳುವ ಸ್ವಾತಂತ್ರ್ಯವಿದೆ. ಸರ್ಕಾರ, ಹಣಕಾಸು ಸಂಸ್ಥೆಗಳು, ಮಾರುಕಟ್ಟೆ ಮಾರಾಟಗಾರರು, ಮದ್ಯವರ್ತಿಗಳು, ತಾಂತ್ರಿಕ ಸಂಸ್ಥೆಗಳು ಇತ್ಯಾದಿಗಳೊಂದಿಗಿನ ಒಪ್ಪಂದಗಳನ್ನು ಮಾಡಿಕೊಳ್ಳುವಾಗ ಸಂಸ್ಥೆಯ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯಕ್ಕೆ ದಕ್ಕೆಬಾರದಂತೆ ಒಪ್ಪಂದ ಮಾಡಿಕೊಳ್ಳಬೇಕು.

## ತತ್ವ 5 : ಶಿಕ್ಷಣ, ತರಬೇತಿ ಮತ್ತು ಮಾಹಿತಿ

ಸಹಕಾರಿ ಸಂಸ್ಥೆಗಳ ಸದಸ್ಯರು, ನಿರ್ದೇಶಕರ ಮಂಡಳಿ, ಸಿಬ್ಬಂದಿ ಮತ್ತು ಅವರೊಂದಿಗೆ ಕೆಲಸ ಮಾಡುತ್ತಿರುವ ಇತರರಿಗೆ ತಮ್ಮ ಉದ್ದೇಶ, ಚಟುವಟಿಕೆಗಳ ಮತ್ತು ಜವಾಬ್ದಾರಿಗಳ ಬಗ್ಗೆ ಅರಿವಿರಬೇಕು ಮತ್ತು ಜಾಗೃತರಾಗಿರಬೇಕು. ಈ ಕೆಲಸವನ್ನು ವಿವಿದ ಮಾರ್ಗಗಳ ಮೂಲಕ ಕೈಗೊಳ್ಳಬಹುದು. ಗ್ರಾಮಗಳಲ್ಲಿ ಸಬೆಗಳನ್ನು ನಡೆಸುವುದು, ಪ್ರತಿ ತಿಂಗಳು ರೈತ ಆಸಕ್ತ ಗುಂಪುಗಳ ಸಭೆಗಳನ್ನು ನಡೆಸಿ ಸದಸ್ಯರಿಗೆ ಮಾಹಿತಿಯನ್ನು ನೀಡುವುದು ಮತ್ತು ಸಲಹೆಗಳನ್ನು ಪಡೆಯುವುದು, ಸದಶ್ಯರಿಗೆ ಬೇಕಾದ ಪರಿಕರಗಳ ಬೇಡಿಕೆಗಳ ಮಾಹಿತಿಗಳನ್ನು ಕ್ರೊಡೀಕರಿಸುವುದು, ರೈತ ಉತ್ಪಾದಕರ ಸಂಸ್ಥೆಗಳ ಸೇವೆಗಳ ಬಗ್ಗೆ ಕರಪತ್ರಗಳನ್ನು ಹಂಚುವುದು, ಪೋಸ್ಟರ್‌ಗಳು, ವೀಡಿಯೊಗಳು ಮತ್ತು ಇತರ ಸಂವಹನ ಮಾರ್ಗಗಳ ಮುಖಾಂತರ ಮಾಹಿತಿಯನ್ನು ಹಂಚಿಕೊಳುವುದಲ್ಲದೆ ತರಬೇತಿಗಳನ್ನು ನಿರಂತರವಾಗಿ ನೀಡಬೇಕು. ಈ ತತ್ವವು ಸಹಕಾರಿ ಸಂಸ್ಥೆಗಳು ಸಾರ್ವಜನಿಕರಿಗೆ, ವಿಶೇಷವಾಗಿ ಯುವಜನರಿಗೆ ಮತ್ತು ಜನಪರ ಮುಖಂಡರಿಗೆ ಸಹಕಾರಿ ಸಂಸ್ಥೆಗಳ ಸ್ವರೂಪ ಮತ್ತು ಪ್ರಯೋಜನಗಳ ಬಗ್ಗೆ ತಿಳಿಸಿಕೊಡಬೇಕೆಂದು ಬಯಸುತ್ತವೆ. ಸಹಕಾರಿ ಸಂಸ್ಥೆಗಳಿಗೆ ಮಾರುಕಟ್ಟೆಯಲ್ಲಿ ಸರಿಯಾದ ಸ್ಥಾನವನ್ನು ಖಚಿತಪಡಿಸಿಕೊಳ್ಳಬೇಕಾದರೆ, ಸಹಕಾರಿ ಸಂಸ್ಥೆಗಳು ತಮ್ಮ ಚಟುವಟಿಕೆಗಳ ಮುಖಾಂತರ ಸಮಾಜಕ್ಕೆ ಕೊಡುಗೆಯನ್ನು, ನೀತಿಗಳನ್ನು ರೂಪಿಸುವ ಅಧಿಕಾರಿಗಳಿಗೆ, ನಾಯಕರಿಗೆ ಮತ್ತು ಇತರರಿಗೆ ಮನದಟ್ಟಾಗುವಂತೆ ನೋಡಿಕೊಳ್ಳಬೇಕು.

**ತತ್ವ 6 : ಸಹಕಾರಿ ಸಂಸ್ಥೆಗಳ ನಡುವೆ ಸಹಕಾರ**

ಸಹಕಾರಿ ಸಂಸ್ಥೆಗಳು ಕೆಲವರಿಗೆ ಅಥವಾ ವೈಯಕ್ತಿಕ ಅನುಕೂಲಗಳನ್ನು ಮಾಡಿಕೊಳ್ಳುವ ಬದಲು, ಹೆಚ್ಚಿನ ಸದಸ್ಯರಿಗೆ ಅನುಕೂಲಗಳನ್ನು ಸೃಷ್ಟಿಸಲು ಸಹಕಾರಿ ಸಂಸ್ಥಗಳು ಯೋಜನೆಗಳನ್ನು ಕೈಗೊಳ್ಳಬೇಕು ಹಾಗೂ ಇತರೆ ಸಹಕಾರಿ ಸಂಸ್ಥೆಗಳೊಂದಿಗೆ ಕೈಜೋಡಿಸಿ ಪರಸ್ಪರ ಸಹಕಾರದಿಂದ ವ್ಯವಹಾರ ಮಾಡುವುದರಿಂದ ಹೆಚ್ಚಿನ ಜನರ ಕ್ಷೇಮಾಭಿವೃದ್ದಿಗೆ ಅನುಕೂಲವಾಗುತ್ತದೆ.

ಸಹಕಾರಿ ಸಂಸ್ಥೆಗಳು ಜೊತೆಯಾಗಿ/ಒಟ್ಟಾಗಿ ಕೆಲಸ ಮಾಡುವುದರಿಂದ ಹಲವು ಲಾಭಗಳನ್ನು ಪಡೆಯಬಹುದಾಗಿದೆ. ಎಲ್ಲಾ ಸಂಸ್ಥೆಗಳಲ್ಲಿ ಎಲ್ಲಾ ಪರಿಣಿತರು ಲಭ್ಯವಿಲ್ಲದಿರಬಹುದು, ಒಬ್ಬರ ಪರಿಣಿತಿಯಿಂದ ಇನ್ನೊಬ್ಬರಿಗೆ ಉಪಯೋಗವಾಗುತ್ತದೆ. ವ್ಯವಹಾರದ ಪ್ರಮಾಣವನ್ನು ಹೆಚ್ಚಿಸಿಕೊಂಡು ಪ್ರಮಾಣದ ಅರ್ಥಶಾಸ್ತ್ರದ ಅನುಸಾರ ಹೆಚ್ಚಿನ ಲಾಭವನ್ನು ಪಡೆಯಬಹುದು. ಸಹಕಾರಿ ಸಂಸ್ಥೆಗಳ ಬಗ್ಗೆ ಅರಿವು ಮೂಡಿಸಲು ಹೆಚ್ಚಿನ ಬೇಂಬಲ ಪಡೆಯಬಹುದು. ಮುಖ್ಯವಾಗಿ ಸ್ಥಿರ ವೆಚ್ಚಗಳ ಹಾಗೂ ಸಂಪನ್ಮೂಲಗಳನ್ನು ಹೆಚ್ಚು ಪರಿಣಾಮಕಾರಿಯಾಗಿ ಉಪಯೋಗಿಸಿಕೊಳ್ಳಬಹುದು.

ಒಂದು ಸಹಕಾರಿ ಸಂಸ್ಥೆಯು ಒಬ್ಬಂಟಿಯಾಗಿ ತಮ್ಮ ಸದಸ್ಯರ ಎಲ್ಲಾ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗದಿರಬಹುದು. ಅಂತಹ ಸಂದರ್ಭಗಳಲ್ಲಿ ಸಹಕಾರಿ ಸಂಸ್ಥೆಗಳು ಇತರೆ ಸಹಕಾರ ಸಂಸ್ಥೆಗಳೊಂದಿಗೆ, ರಾಜ್ಯ, ರಾಷ್ಟ್ರೀಯ ಮತ್ತು ಅಂತಾರಾಷ್ಟ್ರಿಯ ಮಟ್ಟದಲ್ಲಿ ಪರಸ್ಪರ ಸಹಕಾರದಿಂದ ವ್ಯವಹಾರ ಮಾಡಬಹುದು. ಉದಾಹರಣೆಗೆ, ಹೆಚ್ಚುವರಿ ಹಣಕಾಸು ಹೊಂದಿರುವ ಸಹಕಾರಿ ಸಂಸ್ಥೆಗಳು ಇತರೆ ಸಹಕಾರಿ ಸಂಸ್ಥೆಗಳಿಗೆ ಸಾಲ ನೀಡಬಹುದು, ಒಂದು ಸಹಕಾರಿ ಸಂಸ್ಥೆಯು ಸಾಕಷ್ಟು ಭತ್ತದ ಬೀಜವನ್ನು ಉತ್ಪಾದಿಸುತ್ತಿದ್ದರೆ ಮತ್ತೊಂದು ಸಹಕಾರಿ ಸಂಸ್ಥೆಯ ಸದಸ್ಯರಿಗೆ ಭತ್ತದ ಬೀಜದ ಸರಬರಾಜು ಮಾಡಬಹುದು.

**ತತ್ವ 7 : ಸಮುದಾಯದ ಬಗ್ಗೆ ಕಾಳಜಿ**

ಸಹಕಾರಿ ಸಂಸ್ಥೆಗಳು ತಮ್ಮ ಸಮುದಾಯಗಳ ಹಿತಾಸಕ್ತಿಗೆ ಧಕ್ಕೆ ತರುವ ರೀತಿಯಲ್ಲಿ ಕೆಲಸ ಮಾಡಬಾರದು. ಈ ತತ್ವವು ಹೇಳುವಂತೆ ಸಹಕಾರಿ ಸಂಸ್ಥೆಗಳು, ಪರಿಸರ ಸಮತೋಲನ, ಸಾಮಾಜಿಕ ನ್ಯಾಯ ಮತ್ತು ಆರ್ಥಿಕ ಸುರಕ್ಷತೆಗಾಗಿ ಕೆಲಸ ಮಾಡುವ ಜವಾಬ್ದಾರಿಯನ್ನು ಹೊಂದಿರುತ್ತವೆ. ಉದಾಹರಣೆಗೆ, ಒಂದು ಸಹಕಾರಿ ಸಂಸ್ಥೆಯು ಹೆಚ್ಚಿನ ಲಾಭಾಂಶ ಬರುವ ಅಪಾಯಕಾರಿ ಕೀಟನಾಶಕಗಳನ್ನು ದೊಡ್ಡ ಪ್ರಮಾಣದಲ್ಲಿ ರೈತರಿಗೆ ಸರಬರಾಜು ಮಾಡುವುದರಲ್ಲಿ ತೊಡಗಿದ್ದರೆ, ಅದು ಪರಿಸರ ಮತ್ತು ಜೀವ ರಾಶಿಯ ಮೇಲೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಸಂಸ್ಥೆಗಳು ಅಂತರ್ಜಲ ಅತಿಕಡಿಮೆ ಇರುವ ಪ್ರದೇಶಗಳಲ್ಲಿ ಕೊಳವೆಬಾವಿ ತೆಗೆಯಲು ಹೆಚ್ಚಿನ ಸಾಲ ನೀಡುವುದು ಇತ್ಯಾದಿ. ಇಂತಹ ಸಮುದಾಯಕ್ಕೆ ಮತ್ತು ಪರಿಸರಕ್ಕೆ ಹಾನಿಯಾಗುವ ಕೆಲಸಗಳಿಗೆ ಪ್ರೋತ್ಸಾಹಿಸಬಾರದು. ಆದ್ದರಿಂದ ಸಹಕಾರಿ ಸಂಸ್ಥೆಗಳು ಸಮುದಾಯದ ಕಾಳಜಿ ತತ್ವಕೆ ಪೂರಕವಾದ ನೀತಿಗಳನ್ನು ಅಳವಡಿಸಿಕೊಳ್ಳಬೇಕು.

# ಅಂತಿಮ ಸಮೀಕ್ಷೆ

ಈಗ ನಾವು ರೈತ ಉತ್ಪಾದಕರ ಸಂಸ್ಥೆಗಳ ಪರಿಚಯ ಮತ್ತು ಉದ್ದೇಶ ಕೈಪಿಡಿಯ ಕೊನೆಯ ಹಂತಕ್ಕೆ ಬಂದಿದೆವೆ. ದಯವಿಟ್ಟು ಕೈಪಿಡಿಯ ಆರಂಭವನ್ನು ನೆನೆಪಿಸಿಕೊಳ್ಳಿ, ಅಲ್ಲಿಯ ಮೂಲ ಸಮೀಕ್ಷೆಯಲ್ಲಿ ನಾವು ರೈತ ಉತ್ಪಾದಕರ ಸಂಸ್ಥೆಗಳ ಪರಿಚಯ ಮತ್ತು ಉದ್ದೇಶ ಎಂಬ ವಿಷಯದ ನಗ್ಗೆ ಚೆನ್ನಾಗಿ ಉತ್ತರಿಸಿದ್ದೆವು.

ಈಗ, ಈ ಕಲಿಕಾ ಕೈಪಿಡಿಯನ್ನು ಪೂರೈಸಿದ ನಂತರ ನಮ್ಮ ಅರ್ಥೈಸಿಕೊಳ್ಳುವಿಕೆಯನ್ನು ಮತ್ತೊಮೆ ಮೌಲ್ಯಮಾಪನ ಮಾಡಲು ಅಂತಿಮ ಸಮೀಕ್ಷೆ ಮಾಡೋಣ.

ಆದ್ದರಿಂದ, ನಮ್ಮ ಕಲಿಕೆಯ ಆಧಾರದ ಮೇಲೆ ನಾವು ಇನ್ನೂ ಕೆಲವು ಪ್ರಶ್ನೆಗಳಿಗೆ ಉತ್ತರಿಸೋಣವೇ?

1.ರೈತ ಉತ್ಪಾದಕರ ಸಂಸ್ಥೆಗಳ ಮುಖ್ಯ ಉದ್ದೇಶಗಳೇನು?

---------------------------------------------------------------

---------------------------------------------------------------

---------------------------------------------------------------

2.ರೈತ ಉತ್ಪಾದಕರ ಸಂಸ್ಥೆಗಳ ಪ್ರಯೋಜನಗಳು ಯಾವುವು?

---------------------------------------------------------------

---------------------------------------------------------------

---------------------------------------------------------------

3.ರೈತ ಉತ್ಪಾದಕರ ಸಂಸ್ಥೆಗಳ ಪ್ರಮುಖ ಲಕ್ಷಣಗಳು ಯಾವುವು?

---------------------------------------------------------------

---------------------------------------------------------------

---------------------------------------------------------------

4.ರೈತ ಉತ್ಪಾದಕರ ಸಂಸ್ಥೆಗಳು ತಮ್ಮ ಸ್ವಾಯತ್ತತೆ ಮತ್ತು ಸ್ವಾತಂತ್ರ್ಯವನ್ನು ಹೇಗೆ ಉಳಿಸಿಕೊಳ್ಳಬಹುದು?

---------------------------------------------------------------

---------------------------------------------------------------

---------------------------------------------------------------

5.ರೈತ ಉತ್ಪಾದಕರ ಸಂಸ್ಥೆಗಳಲ್ಲಿ ಪ್ರಜಾಸತ್ತಾತ್ಮಕವಾದ ನಿಯಂತ್ರಣವನ್ನು ಹೇಗೆ ಬಳಕೆಗೆ ತರಲಾಗುತ್ತದೆ?

---------------------------------------------------------------

---------------------------------------------------------------

---------------------------------------------------------------

## ರೈತ ಉತ್ಪಾದಕರ ಸಂಸ್ಥೆಗಳ ಪರಿಚಯ ಮತ್ತು ಉದ್ದೇಶ ಕೈಪಿಡಿಯಿಂದ ತೆಗೆದು ಕೊಳ್ಳಬಹುದಾದ ಮುಖ್ಯ ಕ್ರಿಯಾ ಅಂಶಗಳು

ರೈತ ಉತ್ಪಾದಕರ ಸಂಸ್ಥೆಗಳ ಪರಿಚಯ ಮತ್ತು ಉದ್ದೇಶ ಕೈಪಿಡಿಯಿಂದ ನಮ್ಮ ರೈತ ಉತ್ಪಾದಕರ ಸಂಸ್ಥೆಗೆ ಮುಖ್ಯ ಕ್ರಿಯಾ ಅಂಶಗಳು ಯಾವುವು ಎಂಬುದರ ಪಟ್ಟಿ ಮಾಡೋಣ.

# ಟಿಪ್ಪಣೆ

# ಟಿಪ್ಪಣೆ

# ಟಿಪ್ಪಣೆ

# ಟಿಪ್ಪಣೆ

# ಟಿಪ್ಪಣೆ

# ಗ್ರಂಥ ಋಣ


1. "ಜಾಗೃತಿ" – ಮ್ಯಾನೇಜ್‌ಮೆಂಟ್ ಆಫ್ ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಜೇಷನ್ಸ್ – ಮಹಿಳಾ ಅಭಿವೃದ್ಧಿ ಸೊಸೈಟಿ, ಮಣಿಕೊಂಡ ಹೈದ್ರಾಬಾದ್, ತೆಲಂಗಾಣ ದಿಂದ ಪ್ರಕಟವಾದ ತರಬೇತಿ ಕೈಪಿಡಿ – 2019

2. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ – ಕಾನೂನಾತ್ಮಕ ಅನುಸರಣೆಗಳು – ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.

3. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ – ರೈತ ಉತ್ಪಾದಕ ಸಂಸ್ಥೆಗಳ ಒಂದು ಅವಲೋಕನ – ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.

4. ರೈತ ಉತ್ಪಾದಕ ಸಂಸ್ಥೆಗಳ ನಿರ್ದೇಶಕ ಮಂಡಳಿಯ ಸಾಮರ್ಥ್ಯ ಬಲವರ್ಧನೆ –ರೈತ ಉತ್ಪಾದಕ ಸಂಸ್ಥೆಗಳ ವ್ಯವಹಾರ ಯೋಜನೆ– ತರಬೇತಿ ಮಾರ್ಗದರ್ಶಿ – ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರದ ಪ್ರಕಟಣೆ – 2020.

5. ಅಶೋಕ ಎಸ್. ಆಲೂರ ಹಾಗೂ ಇತರರು – ಫಾರ್ಮರ್ ಪ್ರೊಡ್ಯೂಸರ್ ಆರ್ಗನೈಜೇಷನ್ಸ್ ಆ್ಯನ್ ಇನ್ನೋವೇಟಿವ್ ಇನ್ಸ್ಟಿಟ್ಯೂಷನಲ್ ಅಪ್ರೋಚ್ ಫಾರ್ ಕಲೆಕ್ಟಿವ್ ಆ್ಯಕ್ಷನ್ ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ ಹಾಗೂ ನಬಾರ್ಡ್‌ನ ಪ್ರಕಟಣೆ – 2017.

6. ಆಲೂರ.ಎ.ಎಸ್., ರವೀಂದ್ರರ ರೆಡ್ಡಿ ಸಿ.ಎಚ್., ಗೌಡಾ ಸಿ.ಎಲ್. ಎಲ್. ರೆಡ್ಡಿ ಬಿ. ವ್ಹಿ., ರಾಯ್ ಕೆ.ಎನ್., ಪಾರ್ಥಸಾರಥಿ ರಾವ್ ಪಿ. ಹಾಗೂ ಸುನೀಲಕುಮಾರ ಎಸ್. (2008)ಬಿಲ್ಡಿಂಗ್ ಸ್ಟ್ರಾಂಗರ್ ಫಾರ್ಮರ್ಸ್ ಅಸೋಸಿಯೇಶನ್ಸ್, ಬೆಳೆ ಸುಧಾರಣೆ ಜಾಗತಿಕ ವಿಭಾಗ, ಅಂತರರಾಷ್ಟ್ರೀಯ ಅರೆಶುಷ್ಕ ಉಷ್ಣವಲಯಗಳ ಬೆಳೆ ಸಂಶೋಧನಾ ಕಂಪನಿ, ಪಟನ್‌ಚೆರು–502324, ಆಂಧ್ರಪ್ರದೇಶ.32 ಪುಟಗಳು

7. ಕಾರ್‍ಮನ್,ಕೆ ಹಾಗೂ ಕೆಇಥ್ ಕೆ (1994). ಕಮ್ಯುನಿಟಿ ಕನಸಲ್ಟೇಶನ್ ಟೆಕ್‌ನಿಕ್ಸ್; ಪರಪೋಸಿಸ್, ಪ್ರೊಸೆಸಿಸ್ ಆಂಡ್ ಪಿಟ್‌ಫಾಲ್ಸ್–ಎ ಗೈಡ್ ಫಾರ್ ಪ್ಲಾನರ್ಸ್ ಆಂಡ್ ಫೆಸಿಲಿಟೇಟರ್ಸ್ ಬ್ರಿಸೆಬೇನ್, ಡಿಪಾರ್ಟಮೆಂಟ್ ಆಫ್ ಪ್ರೈಮರಿ ಇಂಡಸ್ಟ್ರೀಸ್, ಕ್ವೀನ್ಸ್‌ಲ್ಯಾಂಡ್.

8. ಚಾಮಲಾ.ಎಸ್ (1990). ಎಸ್ಟ್ಯಾಬಿಶಿಂಗ್ ಎ–ಗ್ರೂಪ್; ಎ ಪಾರ್ಟಿಸಿಪೇಟಿವ್ಹ್ ಆಕ್ಷನ್ ಮಾಡಲ್ ಇನ್ ಎಸ್.ಚಾಮಲಾ ಮತ್ತು ಪಿ.ಡಿ. ಮಾರ್ಟನ್, ವರ್ಕಿಂಗ್ ಟುಗೆದರ್ ಫಾರ್ ಲ್ಯಾಂಡ್‌ಕೇರ್; ಗ್ರೂಪ್ ಮ್ಯಾನೇಜ್‌ಮೆಂಟ್ ಸ್ಕಿಲ್ಸ್ ಆಂಡ್ ಸ್ಟ್ರೆಟಜೀಸ್,ಪುಟಸಂಖ್ಯೆ 13–28, ಬ್ರಿಸ್‌ಬೇನ್, ಆಸ್ಟ್ರೇಲಿಯನ್ ಅಕಾಡೆಮಿ ಪ್ರೆಸ್.

# ಉತ್ತಮವಾಗಿ ಕಾರ್ಯನಿರ್ವಹಿಸುತ್ತಿರುವ
# ರೈತ ಉತ್ಪಾದಕ ಸಂಸ್ಥೆಗಳ ಪ್ರಮುಖ ಲಕ್ಷಣಗಳ

ಸದಸ್ಯರ ಅಗತ್ಯತೆಗಳ ಅನುಸಾರ
ಸೇವೆಗಳು; ಸದಸ್ಯರ ಸಕ್ರಿಯ ಪ್ರೋತ್ಸಾಹ

ಸದೃಡವಾದ ಆಂತರಿಕ ವ್ಯವಸ್ಥೆಗಳು




ಸಮಂಜಸವಾದ ಮತ್ತು ಕಾರ್ಯಸಾಧ್ಯತೆಯಿಂದ
ಕೂಡಿದ ವ್ಯವಹಾರ ಮಾದರಿ

ಮಾರುಕಟ್ಟೆ, ಹಣಕಾಸು
ಮತ್ತು ಸಂಪರ್ಕಗಳು




## ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರ

ರಾಜ್ಯ ಮಟ್ಟದಲ್ಲಿ ರೈತ ಉತ್ಪಾದಕ ಸಂಸ್ಥೆಗಳಿಗೆ ಅವಶ್ಯಕವಿರುವ ಬೆಂಬಲ ಹಾಗೂ ಸಹಾಯ ನೀಡುವ ನಿಟ್ಟಿನಲ್ಲಿ ಒಂದು ಸಾಂಸ್ಥಿಕ ರಚನೆಯ ಅರಿವನ್ನು ಮನಗಂಡು ಕರ್ನಾಟಕ ಸರ್ಕಾರವು ರೈತ ಉತ್ಪಾದಕ ಸಂಸ್ಥೆಗಳ ಉತ್ಕೃಷ್ಟ ಕೇಂದ್ರವನ್ನು ಸ್ಥಾಪಿಸಿದೆ. ಈ ಸಂಸ್ಥೆಯು ರಾಜ್ಯದಲ್ಲಿರುವ ರೈತ ಉತ್ಪಾದಕ ಸಂಸ್ಥೆಗಳಿಗೆ ಅವಶ್ಯಕವಿರುವ ಮಾರ್ಗದರ್ಶನ, ಸಾಮರ್ಥ್ಯ ಬಲವರ್ಧನೆ, ತಾಂತ್ರಿಕ ಮಾಹಿತಿ, ವ್ಯವಹಾರ ಅಭಿವೃದ್ಧಿ ಸಂಬಂಧ ಪಟ್ಟಂತೆ ಹಾಗೂ ಇನ್ನಿತರ ವಿಷಯಗಳ ಬಗ್ಗೆ ಬೆಂಬಲ ಮತ್ತು ಸಹಕಾರ ನೀಡುವ ಮೂಲಕ ಈ ಸಂಸ್ಥೆಗಳ ಸದಸ್ಯ ರೈತರ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುತ್ತಿದೆ.

# ಸಮರ್ಥನ – ರೈತ ಉತ್ಪಾದಕ ಸಂಸ್ಥೆಗಳ ನಿರ್ವಹಣೆ




## ಮಹಿಳಾ ಅಭಿವೃದ್ಧಿ ಸೊಸೈಟಿ – ಆಂಧ್ರ ಪ್ರದೇಶ (ಎಪಿಎಮ್‌ಎಎಸ್)

ಎಪಿಎಮ್‌ಎಎಸ್ ಒಂದು ರಾಷ್ಟ್ರ ಮಟ್ಟದ ಸರ್ಕಾರೇತರ ಸಂಪನ್ಮೂಲ ಸಂಸ್ಥೆಯಾಗಿದ್ದು ಸಂಸ್ಥೆಯು ಜನರ ಸಹಭಾಗಿತ್ವದ ಸಂಸ್ಥೆಗಳಾದ ಸ್ವಸಹಾಯ ಸಂಘಗಳು, ಸ್ವಸಹಾಯ ಸಂಘಗಳ ಒಕ್ಕೂಟಗಳು, ಸಹಕಾರಿ ಸಂಸ್ಥೆಗಳು, ರೈತ ಉತ್ಪಾದಕ ಸಂಸ್ಥೆಗಳು ಹಾಗೂ ಇತರೆ ಸಮುದಾಯ ಆಧಾರಿತ ಗುಂಪುಗಳ ಏಳಿಗೆಗಾಗಿ ಕಾರ್ಯಪ್ರವೃತ್ತವಾಗಿದೆ. ಈ ಸಂಸ್ಥೆಗಳು ಸ್ವಸಹಾಯ, ಪರಸ್ಪರ ಲಾಭ, ಅವರದೆ ಆದ ಜವಾಬ್ದಾರಿ ಹಾಗೂ ಸ್ವಾವಲಂಭನೆಯ ಮೌಲ್ಯಗಳನ್ನು ಆಧಾರದ ಮೇಲೆ ಕಾರ್ಯನಿರ್ವಹಿಸುವಂತಹ ಸಂಸ್ಥೆಗಳಾಗಿವೆ.

ವಿನ್ಯಾಸ ಮತ್ತು ಮುದ್ರಣ: ಇಂಡಿಗೋ ಮಲ್ಟಿಮೀಡಿಯಾ, ಬೆಂಗಳೂರು (9738181827)